ಶನಿವಾರ, ಜೂನ್ 24, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 174 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಮಳೆಗಾಲದ ಟ್ರೆಂಡಿ ಉಡುಗೆಗಳು ನಿಮ್ಮ ವಾರ್ಡ್‌ರೋಬ್‌ನಲ್ಲಿ ಇರಲಿ

ಪ್ರಜಾವಾಣಿ ಸಂದರ್ಶನ 11
ಮದ್ಯದ ಭದ್ರತಾ ಚೀಟಿ ವೆಚ್ಚವೂ ಗ್ರಾಹಕರಿಗೆ! 8
‘ಅಕ್ಕಿ ನೀಡಲು ಪೀಯೂಷ್ ನಕಾರ’ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,979	18,665	₹60,170 (ಬೆಂಗಳೂರು)	₹70,400 (ಬೆಂಗಳೂರು)	82.02

ಸುಧಾ ಮೂರ್ತಿ, ವಿಜಯಶ್ರೀ, ಚಳ್ಳೂರಗೆ ಸಾಹಿತ್ಯ ಪುರಸ್ಕಾರ

ಪ್ರಜಾವಾಣಿ ವಾರ್ತೆ



ಸುಧಾ ಮೂರ್ತಿ



ವಿಜಯಶ್ರೀ



ಮಂಜುನಾಯಕ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿ ಕೊಡಮಾಡುವ 2023ನೇ ಸಾಲಿನ ‘ಬಾಲ ಸಾಹಿತ್ಯ ಪುರಸ್ಕಾರ’ ವಿಜಯಶ್ರೀ ಹಾಲಾಡಿ ಅವರ ಮಕ್ಕಳ ಕಾದಂಬರಿ ‘ಸೂರಕ್ಕಿ ಗೇಟ್’ಗೆ ಮತ್ತು ಯುವ ಪುರಸ್ಕಾರ ಮಂಜುನಾಯಕ ಚಳ್ಳೂರು ಅವರ ‘ಪೂ ಮತ್ತು ಇತರ ಕತೆಗಳು’ ಕಥಾ ಸಂಕಲನಕ್ಕೆ ಲಭಿಸಿದೆ.

ಲೇಖಕಿ ಸುಧಾ ಮೂರ್ತಿ ಅವರು ಬರೆದ ‘ಗ್ರ್ಯಾಂಡ್ ಪೇರೆಂಟ್ಸ್ ಬ್ಯಾಗ್ ಆಫ್ ಸ್ಟೋರೀಸ್’ ಕೃತಿಗೆ ಇಂಗ್ಲಿಷ್ ಭಾಷಾ ವಿಭಾಗದಲ್ಲಿ ‘ಬಾಲ ಸಾಹಿತ್ಯ ಪುರಸ್ಕಾರ’ ದೊರೆತಿದೆ.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಟ್ನಾದಲ್ಲಿ 15 ಪಕ್ಷಗಳನ್ನೊಳಗೊಂಡ ಸಭೆ • ಹೊಂದಾಣಿಕೆ ಸೂತ್ರದ ಚರ್ಚೆ

ಒಗ್ಗಟ್ಟಿನ ಮಂತ್ರ, ಜಂಟಿ ತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲೇಬೇಕು ಎಂದು ಪಣ ತೊಟ್ಟಿರುವ 15 ವಿರೋಧ ಪಕ್ಷಗಳು, ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಿನಿಂದ ಹಾಗೂ ಹೊಂದಾಣಿಕೆ ಸೂತ್ರದಡಿ ಕೆಲಸ ಮಾಡಲು ತೀರ್ಮಾನಿಸಿವೆ. ಹೋರಾಟಕ್ಕೆ ಜಂಟಿ ಕಾರ್ಯತಂತ್ರ ರೂಪಿಸಲು ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಮುಂದಿನ ತಿಂಗಳು ಸಭೆ ಸೇರಲು ನಿರ್ಧರಿಸಿವೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಅಲ್ಲಿನ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಪಟ್ನಾದಲ್ಲಿ ಶುಕ್ರವಾರ ಸಂಘಟಿಸಿದ್ದ ಸಭೆಯಲ್ಲಿ ವಿಪಕ್ಷಗಳ 32 ನಾಯಕರು ಭಾಗಿಯಾಗಿ ಸಲಹೆ ಸೂಚನೆಗಳನ್ನು ನೀಡಿದರು. ತಮ್ಮ ನಡುವಿನ ಅಭಿಪ್ರಾಯಭೇದಗಳನ್ನು ಮರೆತು ಸುಮಾರು 4 ತಾಸು ಸುದೀರ್ಘವಾಗಿ ಸಮಾಲೋಚಿಸಿದರು. ಬಳಿಕ ಈ ನಾಯಕರು ಜಂಟಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ ಒಗ್ಗಟ್ಟಿನ ಮಂತ್ರ ಪಠಿಸಿದರು.



ಪಟ್ನಾದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಗೂ ಮುನ್ನ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರೊಂದಿಗೆ ಶುಭಾಶಯ ವಿನಿಮಯ ಮಾಡಿಕೊಂಡರು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಇದ್ದರು –ಪಿಟಿಐ ಚಿತ್ರ

ಸಭೆ ಮುಗಿಸಿ ದೆಹಲಿಗೆ ವಾಪಸಾದ ಕೆಲವೇ ನಿಮಿಷಗಳಲ್ಲಿ ಆಮ್ ಆದ್ಮಿ ಪಕ್ಷದ ನಾಯಕರು ಕಾಂಗ್ರೆಸ್ ಧೋರಣೆಯನ್ನು ಖಂಡಿಸಿ ಒಡಕಿನ ಮಾತುಗಳನ್ನೂ ಆಡಿದರು. ಕೇಂದ್ರ ಸರ್ಕಾರದ ಕರಾಳ ಸುಗ್ರೀವಾಜ್ಞೆ ಕುರಿತು ಕಾಂಗ್ರೆಸ್ ತನ್ನ ನಿಲುವನ್ನು ಸ್ಪಷ್ಟಪಡಿಸದಿದ್ದರೆ ಪ್ರತಿಪಕ್ಷಗಳ ಮುಂದಿನ ಸಭೆಯಲ್ಲಿ ಪಕ್ಷ ಭಾಗವಹಿಸುವುದು ಕಷ್ಟ ಎಂದು ವಿಪಕ್ಷಗಳ ಕೂಟಕ್ಕೆ ಎಎಪಿ ನಾಯಕರು ಎಚ್ಚರಿಕೆಯ ಸಂದೇಶ ರವಾನಿಸಿದರು.

ಪಟ್ನಾದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿತೀಶ್ ಕುಮಾರ್, ‘ಒಗ್ಗಟ್ಟಿನಿಂದ ಹೋರಾಡುವ ನಮ್ಮ ಯೋಜನೆಗೆ ಅಂತಿಮ ರೂಪ ನೀಡಲು ಕೆಲವೇ ದಿನಗಳಲ್ಲಿ ಇನ್ನೊಂದು ಸಭೆ ನಡೆಸುತ್ತೇವೆ’ ಎಂದು ಘೋಷಿಸಿದರು.

‘17 ಪಕ್ಷಗಳು ಒಟ್ಟಾಗಿ ಕೆಲಸ ಮಾಡಲು ಮತ್ತು ಲೋಕಸಭೆ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಸ್ಪರ್ಧಿಸಲು ನಿರ್ಧರಿಸಿವೆ’ ಎಂದೂ ತಿಳಿಸಿದರು. ‘ನಾವೆಲ್ಲ ರಾಷ್ಟ್ರೀಯ ಹಿತಾಸಕ್ತಿ ಕಾಪಾಡಲು ಕೆಲಸ ಮಾಡುತ್ತಿದ್ದೇವೆ. ಆದರೆ, ಭಾರತದ ಇತಿಹಾಸವನ್ನು ಬದಲಿಸಲು ಪ್ರಯತ್ನಿಸುತ್ತಿರುವ ಬಿಜೆಪಿಯು ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದೆ’ ಎಂದು ಅವರು ಆರೋಪಿಸಿದರು.

ಜುಲೈ ತಿಂಗಳಲ್ಲಿ ಶಿಮ್ಲಾದಲ್ಲಿ ಮುಂದಿನ ಸಭೆ ನಡೆಸಲಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಘೋಷಿಸಿದರು. ಜುಲೈ 12ರಂದು ಈ ಸಭೆ ನಡೆಯುವ ಸಾಧ್ಯತೆ ಇದೆ.

ಭಾಗಿಯಾದ ಪಕ್ಷಗಳು

- ಕಾಂಗ್ರೆಸ್
- ತೃಣಮೂಲ ಕಾಂಗ್ರೆಸ್
- ಡಿಎಂಕೆ
- ಎಸ್‌ಪಿ
- ಆರ್‌ಜೆಡಿ
- ಜೆಡಿಯು
- ಎಎಪಿ
- ಎನ್‌ಸಿಪಿ
- ಶಿವಸೇನಾ (ಯುಬಿಟಿ)
- ಸಮಾಜವಾದಿ ಪಕ್ಷ
- ಸಿಪಿಎಂ
- ಸಿಪಿಐ
- ಜೆಎಂಎಂ
- ನ್ಯಾಷನಲ್ ಕಾನ್ಫರೆನ್ಸ್
- ಪಿಡಿಪಿ

9ನೇ ಪುಟ ನೋಡಿ

6 ವ್ಯಾಜ್ಯಗಳ ಇತ್ಯರ್ಥಕ್ಕೆ ಭಾರತ–ಅಮೆರಿಕ ಒಪ್ಪಿಗೆ

ಕಡಿತಗೊಳ್ಳಲಿದೆ ಹಲವು ಉತ್ಪನ್ನಗಳ ಮೇಲಿನ ಆಮದು ಸುಂಕ

ವಾಷಿಂಗ್ಟನ್ (ಪಿಟಿಐ): ವ್ಯಾಪಾರ-ವಹಿವಾಟಿಗೆ ಸಂಬಂಧಿಸಿದ ಪ್ರಮುಖ ಆರು ವ್ಯಾಜ್ಯಗಳನ್ನು ವಿಶ್ವ ವ್ಯಾಪಾರ ಸಂಘಟನೆಯಲ್ಲಿ (ಡಬ್ಲ್ಯುಟಿಒ) ಇತ್ಯರ್ಥ-ಪಡಿಸಿಕೊಳ್ಳಲು ಭಾರತ ಮತ್ತು ಅಮೆರಿಕ ಒಪ್ಪಿವೆ.

ಭಾರತವು ಅಮೆರಿಕದಿಂದ ಆಮದಾಗುವ ಬಾದಾಮಿ, ಅಕ್ರೋಟ್ (ವಾಲ್‌ನಟ್), ಸೇಬು, ಕಡಲೆ, ಬೋರಿಕ್ ಆ್ಯಸಿಡ್, ವೈದ್ಯಕೀಯ ತಪಾಸಣೆಗೆ ಬಳಸುವ ರಾಸಾಯನಿಕವನ್ನು ಒಳಗೊಂಡು ಒಟ್ಟು 28 ಉತ್ಪನ್ನಗಳ ಮೇಲಿನ ಸುಂಕವನ್ನು ಕೈಬಿಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇದರಿಂದಾಗಿ ಅಮೆರಿಕದ ಕೃಷಿ ಮತ್ತು ತಯಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ಅವಕಾಶಗಳು ವಿಸ್ತರಣೆ ಆಗಲಿವೆ ಎಂದು ವ್ಯಾಜ್ಯ ಇತ್ಯರ್ಥದ ಕುರಿತು ಅಮೆರಿಕದ ವ್ಯಾಪಾರ ಪ್ರತಿನಿಧಿ (ಯುಎಸ್‌ಟಿಆರ್) ಕ್ಯಾಥರೀನ್ ತೈ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> ಭಾರತಕ್ಕೆ ಇದೊಂದು ದೊಡ್ಡ ಜಯ. ಡಬ್ಲ್ಯುಟಿಒದಲ್ಲಿ ಭಾರತ-ಅಮೆರಿಕ ಮಧ್ಯೆ ಇನ್ನು ಯಾವುದೇ ವ್ಯಾಜ್ಯ ಬಾಕಿ ಇರುವುದಿಲ್ಲ
> **ಪೀಯೂಷ್ ಗೋಯಲ್,** ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರ ಭೇಟಿಯ ಬಳಿಕ ಜಂಟಿ ಹೇಳಿಕೆ ಬಿಡುಗಡೆ ಮಾಡಲಾಗಿದೆ. ವ್ಯಾಪಾರ ಒಪ್ಪಂದವನ್ನೂ ಒಳಗೊಂಡಂತೆ ಆರ್ಥಿಕ ಸಂಬಂಧವನ್ನು ಬಲಪಡಿಸಿಕೊಳ್ಳುವ ನಿಟ್ಟಿನಲ್ಲಿ ದ್ವಿಪಕ್ಷೀಯ ಸಹಕಾರವನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳಲು ಉಭಯ ದೇಶಗಳು ಈ ನಿರ್ಧಾರಕ್ಕೆ ಬಂದಿವೆ ಎಂದು ತಿಳಿಸಲಾಗಿದೆ.

ಉಭಯ ದೇಶಗಳ ಈ ನಿರ್ಧಾರದಿಂದ ವಾಣಿಜ್ಯ ಮತ್ತು ಆರ್ಥಿಕ ಒಪ್ಪಂದಗಳು ಇನ್ನಷ್ಟು ಬಲಗೊಳ್ಳಲಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ತಜ್ಞರ ಪ್ರಕಾರ, ಎರಡೂ ದೇಶಗಳು ಪರಸ್ಪರ ಒಪ್ಪಿತ ಕರಾರುಗಳ ಮೂಲಕ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಬಹುದು. ಆ ಬಳಿಕ ಅದನ್ನು ಡಬ್ಲ್ಯುಟಿಒಗೆ ತಿಳಿಸಬಹುದು.

2018ರಲ್ಲಿ ಅಮೆರಿಕವು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಕೆಲವು ಉಕ್ಕು ಮತ್ತು ಅಲ್ಯುಮಿನಿಯಂ ಉತ್ಪನ್ನಗಳ ಮೇಲೆ ಕ್ರಮವಾಗಿ ಶೇ 25ರಷ್ಟು ಮತ್ತು ಶೇ 10ರಷ್ಟು ಆಮದು ಸುಂಕ ವಿಧಿಸಿತು. ಇದಕ್ಕೆ ಪ್ರತಿಯಾಗಿ ಭಾರತವು 2019ರ ಜೂನ್‌ನಲ್ಲಿ ಅಮೆರಿಕದ 28 ಉತ್ಪನ್ನಗಳ ಮೇಲೆ ಆಮದು ಸುಂಕ ವಿಧಿಸಿತು.

12ನೇ ಪುಟ ನೋಡಿ

ವಿದ್ಯುತ್: ಹಗಲಿನಲ್ಲಿ ಅಗ್ಗ, ರಾತ್ರಿ ತುಟ್ಟಿ

ನವದೆಹಲಿ (ರಾಯಿಟರ್ಸ್): ವಿದ್ಯುತ್ ಬಳಕೆಗೆ ವಿಧಿಸುವ ಶುಲ್ಕ ಯಾವ ರೀತಿಯಲ್ಲಿ ಇರಬೇಕು ಎಂಬ ವಿಚಾರವಾಗಿ ಕೇಂದ್ರ ಇಂಧನ ಸಚಿವಾಲಯವು ಹೊಸ ನೀತಿಯೊಂದನ್ನು ರೂಪಿಸಿದೆ. ಹಗಲಿನಲ್ಲಿ ಬಳಸುವ ವಿದ್ಯುತ್‌ಗೆ ವಾಡಿಕೆಯ ಶುಲ್ಕಕ್ಕಿಂತ ಶೇಕಡ 20ರವರೆಗೆ ಕಡಿಮೆ ಶುಲ್ಕ ನಿಗದಿ ಮಾಡಲಾಗುತ್ತದೆ ಎಂದು ನೀತಿಯಲ್ಲಿ ಹೇಳಲಾಗಿದೆ.

> ಶುಲ್ಕ ನಿಗದಿ ವ್ಯವಸ್ಥೆಯಲ್ಲಿ ಬದಲಾವಣೆ

ಆದರೆ, ವಿದ್ಯುತ್ ಬೇಡಿಕೆ ಹೆಚ್ಚಿರುವ ಅವಧಿಯಲ್ಲಿ ಬಳಸುವ ವಿದ್ಯುತ್‌ಗೆ ವಾಡಿಕೆಗಿಂತ ಶೇ 20ರವರೆಗೆ ಹೆಚ್ಚು ಶುಲ್ಕ ನಿಗದಿ ಮಾಡಲಾಗುತ್ತದೆ. ವಿದ್ಯುತ್ ಬೇಡಿಕೆ ಹೆಚ್ಚಾಗುತ್ತಿರುವುದನ್ನು ನಿಭಾಯಿಸಲು ಹಾಗೂ ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಲು ಈ ನೀತಿಯನ್ನು ರೂಪಿಸಲಾಗಿದೆ ಎಂದು ಕೇಂದ್ರ ಹೇಳಿದೆ.

ವಾಣಿಜ್ಯ ಹಾಗೂ ಕೈಗಾರಿಕಾ ಬಳಕೆದಾರರಿಗೆ ಈ ನಿಯಮವು 2024ರ ಏಪ್ರಿಲ್‌ನಿಂದ ಜಾರಿಗೆ ಬರುತ್ತದೆ. ಇತರರಿಗೆ ಇದು ಇನ್ನೂ ಒಂದು ವರ್ಷ ತಡವಾಗಿ ಜಾರಿಯಾಗುತ್ತದೆ. ಕೃಷಿ ಚಟುವಟಿಕೆಗಾಗಿ ಬಳಸುವ ವಿದ್ಯುತ್‌ಗೆ ಈ ಬಗೆಯ ಶುಲ್ಕ ಅನ್ವಯವಾಗುವುದಿಲ್ಲ.

ರಾತ್ರಿಯ ಹೊತ್ತಿನಲ್ಲಿ ವಿದ್ಯುತ್ ಬಳಕೆಯನ್ನು ತಗ್ಗಿಸಲು ಸಾಧ್ಯವಾದರೆ, ಕಲ್ಲಿದ್ದಲಿನಂತಹ ಪಳೆಯುಳಿಕೆ ಇಂಧನ ಬಳಸುವ ವಿದ್ಯುತ್ ಉತ್ಪಾದನಾ ಘಟಕಗಳ ಮೇಲಿನ ಒತ್ತಡವನ್ನು ತಗ್ಗಿಸಬಹುದು, ರಾತ್ರಿ ಹೊತ್ತಿನಲ್ಲಿ ವಿದ್ಯುತ್ ಕಡಿತದ ಸಮಸ್ಯೆಯನ್ನು ಕಡಿಮೆ ಮಾಡಬಹುದು ಎಂಬ ಆಲೋಚನೆಯನ್ನು ಇಂಧನ ಸಚಿವಾಲಯ ಹೊಂದಿದೆ.

ಅಂಕಿ-ಅಂಶಗಳು

10%-20%
ಹಗಲಿನ ಅವಧಿಯಲ್ಲಿ ವಿದ್ಯುತ್ ಶುಲ್ಕವು ವಾಡಿಕೆಗಿಂತ ಇಷ್ಟು ಕಡಿಮೆ ಇರುತ್ತದೆ

10%-20%
ರಾತ್ರಿ ಹೊತ್ತಿನಲ್ಲಿ ಶುಲ್ಕವು ವಾಡಿಕೆಗಿಂತ ಇಷ್ಟು ಹೆಚ್ಚಿರುತ್ತದೆ

12ನೇ ಪುಟ ನೋಡಿ

ಚೀನಾ ನಡೆ: ಕಣ್ಗಾವಲಿಗೆ ಸಹಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಕ್ಷಣಾ ಕ್ಷೇತ್ರದಲ್ಲಿ ಸಹಕಾರ ಕುರಿತು ನೀಲನಕ್ಷೆ ರೂಪಿಸಲು ಭಾರತ, ಅಮೆರಿಕ ಸಮ್ಮತಿಸಿವೆ. ಪೂರಕವಾಗಿ ಸಹಕಾರ ಕುರಿತಂತೆ ಇದ್ದ ತೊಡಕುಗಳನ್ನು ಸ್ವಲ್ಪಮಟ್ಟಿಗೆ ನಿವಾರಿಸುವ ಮೂಲಕ ಅಮೆರಿಕ, ಆದಷ್ಟು ಭಾರತವನ್ನು ರಷ್ಯಾದಿಂದ ದೂರವಿರಿಸಲು ಒತ್ತು ನೀಡಿದೆ. ಹಿಂದೂ ಮಹಾಸಾಗರ ಹಾಗೂ ಹಿಮಾಲಯ ವ್ಯಾಪ್ತಿಯಲ್ಲಿ ಚೀನಾದ ನಡೆಯ ಮೇಲೆ ಕಣ್ಗಾವಲು ಇರಿಸಲೂ ಭಾರತಕ್ಕೆ ನೆರವಾಗಲಿದೆ.

ಅಮೆರಿಕದ ಜನರಲ್ ಅಟೊಮಿಕ್ಸ್, ಭಾರತದಲ್ಲೇ ಶಸ್ತ್ರ-ಸಜ್ಜಿತ ಡ್ರೋನ್‌ನ ಜೋಡಣೆ ಪ್ರಕ್ರಿಯೆಗೆ ಚಾಲನೆ ನೀಡುವ ಜೊತೆಗೆ ಇಲ್ಲಿಂದಲೇ ಖರೀದಿಯನ್ನು ಮಾಡಲಿದೆ. ಡ್ರೋನ್‌ನ ಜಾಗತಿಕ ನಿರ್ವಹಣೆ, ದುರಸ್ತಿ ಒಳಗೊಂಡ ಸಮಗ್ರ ಘಟಕವನ್ನು ಸ್ಥಾಪಿಸಲಿದೆ. ಕಡಲ ಮಾರ್ಗದಲ್ಲಿ ಯುದ್ಧನೌಕೆಗಳು, ಜಲಾಂತರ್ಗಾಮಿಗಳ ಚಲನೆ ಕುರಿತಂತೆ ಕಣ್ಗಾವಲಿಗೂ ಅಮೆರಿಕ ಅಗತ್ಯ ನೆರವು ನೀಡಲಿದೆ. ಹಿಂದೂ ಮಹಾಸಾಗರದಲ್ಲಿ ಚೀನಾದ ನೌಕಾಪಡೆಯ ಕಾರ್ಯಚಟುವಟಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇದು ಮಹತ್ವದ್ದಾಗಿದೆ.

‘ಈ ಮೊದಲಿನ ಮಾರಾಟ-ಖರೀದಿ ಬಾಂಧವ್ಯದ ಬದಲಿಗೆ, ನಾವು ಈಗ ತಂತ್ರಜ್ಞಾನದ ವರ್ಗಾವಣೆ, ಜಂಟಿ ಅಭಿವೃದ್ಧಿ ಮತ್ತು ಜಂಟಿ ಉತ್ಪಾದನೆಯ ಹಂತವನ್ನು ತಲುಪಿದ್ದೇವೆ’ ಎಂದು ಜೋ ಬೈಡನ್ ಜೊತೆಗೂಡಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ ಹೇಳಿದರು.

‘ಅಮೆರಿಕವು ಭಾರತದ ಜೊತೆಗಿನ ಪ್ರಮುಖ ರಕ್ಷಣಾ ಪಾಲುದಾರಿಕೆಯನ್ನು ವಿಸ್ತರಿಸುತ್ತಿದೆ. ಈ ಕ್ಷೇತ್ರದಲ್ಲಿ ಜಂಟಿಯಾಗಿ ಹೆಚ್ಚು ತಾಲೀಮುಗಳು, ಸಹಕಾರ, ಸಂಶೋಧನೆಗಳು ಜರುಗಲಿವೆ’ ಎಂದು ಬೈಡನ್ ಅವರು ಇದಕ್ಕೆ ದನಿಗೂಡಿಸಿದರು.

ಅಮೆರಿಕದಿಂದ ಖರೀದಿಸಲಿರುವ ಡ್ರೋನ್, ಭಾರತದ ಗೂಢಚಾರಿಕೆ, ಕಣ್ಗಾವಲು ಸಾಮರ್ಥ್ಯವನ್ನು ಗಮನಾರ್ಹವಾಗಿ ವೃದ್ಧಿಸಲಿದೆ. ಗಡಿಯಲ್ಲಿ ಅತಿಕ್ರಮಣ ನಡೆಸುವ ಚೀನಾದ ಪುನರಾವರ್ತಿತ ಯತ್ನದ ಹಿನ್ನೆಲೆಯಲ್ಲಿ ಇದು ಮಹತ್ವ ಪಡೆದುಕೊಂಡಿದೆ.

12ನೇ ಪುಟ ನೋಡಿ

ಗೋಮಾಂಸ ಸಾಗಣೆ ವಿರುದ್ಧ ಪ್ರತ್ಯೇಕ ಎಫ್‌ಐಆರ್: ಇಬ್ಬರು ಸೆರೆ

ಸುಲಿಗೆ: ಕಾಂಗ್ರೆಸ್ ವಾರ್ಡ್ ಸದಸ್ಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋ ಮಾಂಸ ಸಾಗಿಸುತ್ತಿದ್ದ ಸ್ಕಾರ್ಪಿಯೊ ವಾಹನ ಅಡ್ಡಗಟ್ಟಿ ಅಪಘಾತದ ನೆಪದಲ್ಲಿ ಸುಲಿಗೆ ಮಾಡಿದ್ದ ಆರೋಪದಡಿ ಪ್ರಶಾಂತ್ ಹಾಗೂ ಸೋಮುಗೌಡ ಅವರನ್ನು ಆರ್.ಎಂ.ಸಿ ಯಾರ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತ ಪ್ರಶಾಂತ್, ಕಾಂಗ್ರೆಸ್ ಪಕ್ಷದ ಸುಂಕದಕಟ್ಟೆ ವಾರ್ಡ್ ಸದಸ್ಯ. ಸಹಚರ ಸೋಮುಗೌಡ ಜೊತೆ ಸೇರಿ ಕೃತ್ಯ ಎಸಗಿದ್ದ’ ಎಂದು ಪೊಲೀಸರು ಹೇಳಿದರು.

‘ಮಾಗಡಿ ಗಂಗೊಂಡನ ಹಳ್ಳಿಯ ಉಮೇಶ್ ಹಾಗೂ ಖಾಜಾ ಮೊಹಿನ್, ಸ್ಕಾರ್ಪಿಯೊ ವಾಹನದಲ್ಲಿ ಗೋಮಾಂಸ ಇಟ್ಟುಕೊಂಡು ಶಿವಾಜಿನಗರಕ್ಕೆ ಜೂನ್ 21ರಂದು ಹೊರಟಿದ್ದರು. ಇನ್ನೊವಾ ಕ್ರಿಸ್ಟಾ ವಾಹನದಲ್ಲಿ ಬಂದಿದ್ದ ಆರೋಪಿಗಳು, ಬೆಳಿಗ್ಗೆ 8.30ರ ಸುಮಾರಿಗೆ ಎಂ.ಇ.ಐ ರಸ್ತೆಯಲ್ಲಿ ಸ್ಕಾರ್ಪಿಯೊ ವಾಹನ ಅಡ್ಡಗಟ್ಟಿದ್ದರು.’

‘ಮಾರ್ಗಮಧ್ಯೆ ನಮ್ಮ ವಾಹನಕ್ಕೆ ಡಿಕ್ಕಿ ಹೊಡೆದಿದ್ದಿರಾ. ಇದರಿಂದ ವಾಹನ ಜಖಂಗೊಂಡಿದ್ದು, ದುರಸ್ತಿಗೆ ಹಣ ನೀಡಿ’ ಎಂದು ಆರೋಪಿಗಳು ಒತ್ತಾಯಿಸಿದ್ದರು. ಯಾವುದೇ ಅಪಘಾತ ಮಾಡಿಲ್ಲವೆಂದು ಉಮೇಶ್ ಹಾಗೂ ಖಾಜಾ ಮೊಹೀನ್ ಹೇಳಿದ್ದರು. ಸುಮ್ಮನಾಗದ ಆರೋಪಿಗಳು, ಇಬ್ಬರ ಮೇಲೆ ಹಲ್ಲೆ ಮಾಡಿದ್ದರು. ವಾಹನ ಸಮೇತ ಇಬ್ಬರನ್ನು ಅಪಹರಿಸಿ, ₹ 15 ಸಾವಿರ ಕಿತ್ತುಕೊಂಡಿದ್ದರು.’

‘ವಾಹನದಲ್ಲಿ ಗೋ ಮಾಂಸ ಇರುವುದನ್ನು ನೋಡಿದ್ದ ಆರೋಪಿಗಳು, ‘ಗೋಮಾಂಸ ಸಾಗಣೆ ಮಾಡುತ್ತಿದ್ದಿರಾ? ನಿಮ್ಮನ್ನು ಪೊಲೀಸರಿಗೆ ಹಿಡಿದು ಕೊಡುತ್ತೇವೆ. ಈ ರೀತಿ ಮಾಡಬಾರದೆಂದರೆ, ₹ 2 ಲಕ್ಷ ನೀಡಿ’ ಎಂದು ಬೇಡಿಕೆ ಇರಿಸಿದ್ದರು. ಹಣ ನೀಡಲು ಒಪ್ಪದ ಉಮೇಶ್ ಖಾಜಾ ಮೊಹಿನ್, ಅಲ್ಲಿಂದ ತಪ್ಪಿಸಿಕೊಂಡಿದ್ದರು. ಘಟನೆ ಬಗ್ಗೆ ಸ್ಥಳೀಯರಿಂದ ಮಾಹಿತಿ ದೊರೆಯುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಪ್ರಶಾಂತ್ ಹಾಗೂ ಸೋಮುಗೌಡನನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

ಗೋಮಾಂಸ ಸಾಗಣೆ ವಿರುದ್ಧವೂ ಎಫ್‌ಐಆರ್: ‘ಮಾಗಡಿ ಬಳಿಯ ಹುರಳೇನಹಳ್ಳಿಯಲ್ಲಿ 200 ಕೆ.ಜಿ ಗೋ ಮಾಂಸ ಖರೀದಿಸಿದ್ದ ಉಮೇಶ್ ಹಾಗೂ ಖಾಜಾ ಮೊಹಿನ್, ಅದೇ ಮಾಂಸವನ್ನು ಶಿವಾಜಿನಗರದ ಮಾರುಕಟ್ಟೆಗೆ ಅಕ್ರಮ ವಾಗಿ ಸಾಗಿಸುತ್ತಿದ್ದರು. ಈ ಬಗ್ಗೆ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಇಬ್ಬರನ್ನೂ ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಸ್ಕಾರ್ಪಿಯೊದಲ್ಲಿ ಗೋಮಾಂಸ ಸಾಗಿಸುತ್ತಿದ್ದ ಸಂಗತಿ ಪ್ರಶಾಂತ್‌ಗೆ ಗೊತ್ತಿರಲಿಲ್ಲ. ಗೊತ್ತಾದ ನಂತರವೇ ಆತ ₹ 2 ಲಕ್ಷಕ್ಕೆ ಬೇಡಿಕೆಯಿಟ್ಟ ಎಂಬುದು ತನಿಖೆಯಿಂದ ಗೊತ್ತಾಗಿದೆ. ತನಿಖೆ ಮುಂದುವರಿಸಲಾಗಿದೆ’ ಎಂದು ಹೇಳಿದರು.

ಪತ್ನಿಗೆ ಚಾಕು ಇರಿತ: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ನಿಖಿತಾಗೆ (37) ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದ್ದು, ಅವರ ಪತಿ ದಿವಾಕರ್ ವಿರುದ್ಧ ಪ್ರಕರಣ ದಾಖಲಾಗಿದೆ.

ನಿಖಿತಾ–ದಿವಾಕರ್ ಪ್ರೀತಿಸಿ ಮದುವೆಯಾಗಿದ್ದರು.

ಲಿಂಗರಾಜಪುರದಲ್ಲಿದ್ದ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.

ಸಚಿವರ ವಿರುದ್ಧದ ವಿಚಾರಣೆ ಜು.14ಕ್ಕೆ

ಬೆಂಗಳೂರು: ಕಬ್ಬಿಣದ ಅದಿರನ್ನು ಅಕ್ರಮವಾಗಿ ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಯುವಜನ ಸಬಲೀಕರಣ ಖಾತೆ ಸಚಿವ ಬಿ. ನಾಗೇಂದ್ರ ವಿರುದ್ಧ ದಾಖಲಾಗಿರುವ 16 ಕ್ರಿಮಿನಲ್ ಪ್ರಕರಣಗಳಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಡೆಸುತ್ತಿರುವ ವಿಚಾರಣೆಯನ್ನು ಜುಲೈ 14ರವರೆಗೆ ಮುಂದೂಡಲು ಹೈಕೋರ್ಟ್ ಆದೇಶಿಸಿದೆ.

ಪ್ರಕರಣಗಳನ್ನು ವಜಾ ಮಾಡುವಂತೆ ಕೋರಿ ನಾಗೇಂದ್ರ ಸಲ್ಲಿಸಿದ್ದ ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಪಂಚತಾರಾ ಹೋಟೆಲ್‌ನಲ್ಲಿ ಜೂಜು

ಬೆಂಗಳೂರು: ಹಲಸೂರು ಬಳಿಯ ಪಂಚತಾರಾ ಹೋಟೆಲೊಂದರ ಕೊಠಡಿಯಲ್ಲಿ ಜೂಜಾಡುತ್ತಿದ್ದ 12 ಜನರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಹೋಟೆಲ್‌ನಲ್ಲಿ ಕೊಠಡಿ ಕಾಯ್ದಿರಿಸಿಕೊಂಡು ಜೂಜಾಡಲಾಗುತ್ತಿತ್ತು. ಗುರುವಾರ ಕೊಠಡಿ ಮೇಲೆ ದಾಳಿ ನಡೆಸಿ 12 ಆರೋಪಿಗಳನ್ನು ಬಂಧಿಸಿ, ₹ 11 ಲಕ್ಷ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲ ವ್ಯಾಪಾರಿಗಳು, ಉದ್ಯಮಿಗಳು ಗುಂಪು ಮಾಡಿಕೊಂಡಿದ್ದರು. ಕೊಠಡಿ ಪ್ರವೇಶಿಸಲು ಬಾಗಿಲು ಬಳಿ ಕಾರ್ಡ್ ಸ್ವೈಪ್ ಮಾಡುವ ವ್ಯವಸ್ಥೆ ರೂಪಿಸಿಕೊಂಡಿದ್ದರು. ಹೀಗಾಗಿ, ಅಪರಿಚಿತರು ಕೊಠಡಿಯೊಳಗೆ ಹೋಗಲು ಸಾಧ್ಯವಿರಲಿಲ್ಲ. ಕೊಠಡಿ ಕಾವಲಿಗೆ ಸಿಬ್ಬಂದಿಯೊಬ್ಬನನ್ನು ನಿಯೋಜಿಸಿಕೊಂಡಿದ್ದರು’ ಎಂದು ತಿಳಿಸಿವೆ.

44 ಬೈಕ್ ಜಪ್ತಿ: ಇಬ್ಬರು ಬಾಲಕರು ವಶಕ್ಕೆ

ಬೆಂಗಳೂರು: ಬೈಕ್ ಕಳ್ಳತನ ಮಾಡುತ್ತಿದ್ದ ಆರೋಪದಡಿ ಇಬ್ಬರು ಬಾಲಕರನ್ನು ಜೆ.ಪಿ. ನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಸ್ಥಳೀಯ ನಿವಾಸಿಗಳಾದ ಬಾಲಕರು, ವಾಹನ ಕಳ್ಳತನ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿ ಅವರಿಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಬಳಿಕ, ಮಕ್ಕಳ ಕಲ್ಯಾಣ ಅಧಿಕಾರಿಗಳ ಎದುರು ಕರೆದೊಯ್ದು ಅವರ ಹೇಳಿಕೆ ದಾಖಲಿಸಲಾಗಿದೆ. ಸದ್ಯ ಬಾಲಮಂದಿರದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

ಇವರಿಬ್ಬರಿಂದ ₹ 35 ಲಕ್ಷ ಮೌಲ್ಯದ 44 ಬೈಕ್ ಜಪ್ತಿ ಮಾಡಲಾಗಿದೆ. ಬಹುತೇಕ ಬೈಕ್‌ಗಳನ್ನು ಮಾರಾಟ ಮಾಡಿದ್ದರು’ ಎಂದು ತಿಳಿಸಿದರು.

ತಾಯಿ–ಮಗು ಸಾವು: ಚಾರ್ಜ್‌ಶೀಟ್ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿ ಬಿದ್ದು ತಾಯಿ–ಮಗು ಮೃತಪಟ್ಟಿದ್ದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಗೋವಿಂದಪುರ ಠಾಣೆ ಪೊಲೀಸರು, ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದಾರೆ.

ಪಿಲ್ಲರ್‌ನ ಕಬ್ಬಿಣದ ಚೌಕಟ್ಟು ಜ. 10ರಂದು ಉರುಳಿ ಬಿದ್ದಿತ್ತು. ಬೈಕ್‌ನಲ್ಲಿ ಚಲಿಸುತ್ತಿದ್ದ ತೇಜಸ್ವಿನಿ ಸುಲಾಖೆ (28) ಹಾಗೂ ವಿಹಾನ್ ಮೃತಪಟ್ಟಿದ್ದರು.

‘ಅವಘಡಕ್ಕೆ ಕಾರಣವಾದ ಆರೋಪದಡಿ ಬಿಎಂಆರ್‌ಸಿಎಲ್ ಹಾಗೂ ನಾಗಾರ್ಜುನ್ ಕನ್‌ಸ್ಟ್ರಕ್ಷನ್ ಕಂಪನಿಯ (ಎನ್‌ಸಿಸಿ) 11 ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಪ್ರಕರಣದ ತನಿಖೆ ಪೂರ್ಣಗೊಂಡಿದೆ. ದೋಷಾರೋಪ ಪಟ್ಟಿ ಸಿದ್ಧಪಡಿಸಲಾಗಿದ್ದು, ಕಾನೂನು ತಜ್ಞರ ಪರಿಶೀಲನೆಗೆ ನೀಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಅಧಿಕಾರಿಗಳ ಅವೈಜ್ಞಾನಿಕ ಕಾಮಗಾರಿ ಹಾಗೂ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿರುವುದಕ್ಕೆ ಪುರಾವೆಗಳನ್ನು ಸಂಗ್ರಹಿಸಲಾಗಿದೆ' ಎಂದು ತಿಳಿಸಿದರು.

ಅಪರಾಧ ಸುದ್ದಿ

ಮೂವರ ಬಂಧನ: ಮಹಾರಾಷ್ಟ್ರದಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಮೂವರನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮೊಹಿನುದ್ದೀನ್ ಅಲಿಯಾಸ್ ಶೇಕ್ (25), ಉಸ್ಮಾನ್ ರೆಹಮಾನ್ (28), ತನ್ವೀಶ್ (38)ನನ್ನು ಬಂಧಿಸಿ, 13 ಕೆ.ಜಿ. ಗಾಂಜಾ, 1 ಕೆ.ಜಿ ಹಶೀಷ್ ಹಾಗೂ 2 ಕಾರು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.



ಬೆಂಗಳೂರು ವರದಿಗಾರರ ಕೂಟ ಹಾಗೂ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ (ಎಡದಿಂದ ನಾಲ್ಕನೆಯವರು), ಉಪ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಪಿ.ತ್ಯಾಗರಾಜ್, ಸಚಿವರ ಮಾಧ್ಯಮ ಸಂಯೋಜಕರಾದ ಬಿ.ಎನ್.ಶ್ರೀಧರ್, ಎಸ್.ಲಕ್ಷ್ಮೀನಾರಾಯಣ, ಪ್ರೆಸ್ ಕೌನ್ಸಿಲ್ ಪ್ರಶಸ್ತಿ ಪುರಸ್ಕೃತರಾದ ಪತ್ರಕರ್ತ ರುದ್ರಣ್ಣ ಹರ್ತಿಕೋಟೆ ಅವರನ್ನು ಸನ್ಮಾನಿಸಲಾಯಿತು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಬಿಜೆಪಿ ಮುಖಂಡ ಚಕ್ರಪಾಣಿ ಇದ್ದರು

ಲೈಂಗಿಕ ಕಿರುಕುಳ: ಪ್ರಕರಣ ದಾಖಲು

ದಾಮೋಹ್ /ಭೋಪಾಲ್ (ಪಿಟಿಐ): ಬೆಂಗಳೂರಿನಲ್ಲಿ ಮುಸ್ಲಿಂ ವ್ಯಕ್ತಿ ಯೊಬ್ಬರು ಲೈಂಗಿಕ ಕಿರುಕುಳ ನೀಡಿರುವುದಾಗಿ ಮಧ್ಯಪ್ರದೇಶದ ದಾಮೋಹ್‌ನ ಮಹಿಳೆಯೊಬ್ಬರು ಆರೋಪಿಸಿದ್ದು, ಒಮರ್ ಫಾರೂಖ್ ಎಂಬ ವ್ಯಕ್ತಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇದೇ ವೇಳೆ, ಮಧ್ಯಪ್ರದೇಶದ ಆಡಳಿತರೂಢ ಬಿಜೆಪಿ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇದೆ ಎಂದು ವ್ಯಂಗ್ಯವಾಡಿದೆ.

ಗೃಹ ಸಚಿವ ನರೋತ್ತಮ್ ಮಿಶ್ರಾ ಸುದ್ದಿಗಾರರೊಂದಿಗೆ ಮಾತನಾಡಿ, ‘ಒಮರ್ ವಿರುದ್ಧ ಮಹಿಳೆ ದಮೋಹ್‌ನಲ್ಲಿ ಗುರುವಾರ ಸಂಜೆ ದೂರು ದಾಖಲಿಸಿದ್ದಾರೆ. ಪ್ರಕರಣದ ತನಿಖೆಗಾಗಿ ಇಲ್ಲಿನ ಪೊಲೀಸರ ತಂಡ ತಕ್ಷಣವೇ ಕರ್ನಾಟಕಕ್ಕೆ ಹೊರಡಲಿದೆ. ಲವ್ ಜಿಹಾದ್ ಮನಸ್ಥಿತಿಯನ್ನು ನಾವು ಹತ್ತಿಕ್ಕಲಿದ್ದೇವೆ’ ಎಂದು ಹೇಳಿದ್ದಾರೆ.

ಡೇ ಕೇರ್‌ನಲ್ಲಿ ಮಕ್ಕಳ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿಕ್ಕಲಸಂದ್ರದ ಡೇ ಕೇರ್ ಸೆಂಟರ್‌ನಲ್ಲಿ ಬಾಲಕನೊಬ್ಬ ಬಾಲಕಿಗೆ ಹೊಡೆದಿರುವ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಡೇ ಕೇರ್ ಸೆಂಟರ್‌ನಲ್ಲಿ ಮಕ್ಕಳನ್ನು ನೋಡಿಕೊಳ್ಳುತ್ತಿದ್ದ ಆಯಾ, ಒಂದು ಮಗುವನ್ನು ಹೊರಗೆ ಕರೆದುಕೊಂಡು ಹೋಗುತ್ತಾರೆ. ಈ ಸಂದರ್ಭದಲ್ಲಿ ಒಂದು ಮಗು ಇನ್ನೊಂದು ಮಗುವನ್ನು ಹಿಡಿದುಕೊಂಡು ಹೊಡೆದಿದೆ.

ಟ್ವೀಟ್ ಮೂಲಕ ಬಂದಿರುವ ದೂರಿಗೆ ಪ್ರತಿಕ್ರಿಯಿಸಿರುವ ಬೆಂಗಳೂರು ನಗರ ಪೊಲೀಸರು, ‘ಘಟನೆ ನಡೆದಿರುವ ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಗೆ ನಿಮ್ಮ ದೂರು ವರ್ಗಾಯಿಸಲಾಗಿದೆ. ಅಲ್ಲಿಯ ಪೊಲೀಸರು ನಿಮ್ಮನ್ನು ಸಂಪರ್ಕಿಸಲಿದ್ದಾರೆ. ದೂರು ನೀಡಿ’ ಎಂದಿದ್ದಾರೆ. ಆದರೆ, ಶುಕ್ರವಾರ ರಾತ್ರಿವರೆಗೂ ದೂರು ದಾಖಲಾಗಿಲ್ಲ.

10ನೇ ಮಹಡಿಯಿಂದ ಬಿದ್ದು ಮಹಿಳೆ ಸಾವು

ಬೆಂಗಳೂರು: ಯಲಹಂಕ ಬಳಿಯ ನಾಗೇನಹಳ್ಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ 10ನೇ ಮಹಡಿಯಿಂದ ಬಿದ್ದು ಅಮೃತಾ ಶರ್ಮಾ (27) ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

‘ಉತ್ತರ ಪ್ರದೇಶದ ಅಮೃತಾ, ನಗರದ ಕಂಪನಿಯೊಂದರ ಉದ್ಯೋಗಿ. 2 ವರ್ಷದ ಹಿಂದೆಯಷ್ಟೇ ಮದುವೆಯಾಗಿದ್ದರು. ಪತಿ ಹಾಗೂ ಕುಟುಂಬದವರ ಜೊತೆ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ನೆಲೆಸಿದ್ದರು’ ಎಂದು ಯಲಹಂಕ ನ್ಯೂ ಟೌನ್ ಠಾಣೆ ಪೊಲೀಸರು ಹೇಳಿದರು.

ಬೆಂಗಳೂರು ರೇಸ್


ಕಿಂಗ್ಸ್ ರಾನ್ಸಮ್ ಗೆಲ್ಲುವ ನಿರೀಕ್ಷೆ

ಚೀಫ್ ಜಸ್ಟೀಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್ಸ್ ರಾನ್ಸಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸಾಲಿಡ್ ಪವರ್ 10, ಟ್ವಿಲೈಟ್ ಟೊರ್ನಾಡೊ 1, ಎಮ್ಮಾ 3
2ನೇ ರೇಸ್: ಅಮೇಜಿಂಗ್ ಅಟ್ರ್ಯಾಕ್ಷನ್ 6, ಪ್ರೊಫೆಸಿ 9, ಜಾಜಾ 5
3ನೇ ರೇಸ್: ಬುಲ್ ಬುಲ್ ರಾಣಿ 1, ಎಮಿರಾಲ್ಡೊ 9, ಸ್ಪಿರಿಟ್ ಡ್ಯಾನ್ಸರ್ 3
4ನೇ ರೇಸ್: ಇಂಡಿಯನ್ ಸ್ಕಿಪ್ಪರ್ 4, ಗೋಲ್ಡನ್ ಗ್ಲೋ 3, ಕ್ಲಾಕ್‌ವೈಸ್ 6
5ನೇ ರೇಸ್: ಚಾಂಪಿಯನ್ಸ್ ವೇ 3, ಸ್ಪ್ಲೆಂಡಿಡೊ 2
6ನೇ ರೇಸ್: ಕಿಂಗ್ಸ್ ರಾನ್ಸಮ್ 1, ಮಾಂಟೆವರ್ಡಿ 6, ಮೊಯಿಟೊ 2
7ನೇ ರೇಸ್: ಕ್ಲಾಸಿಕ್ ಚಾರ್ಮ್ 2, ದಿ ಒಮೆಗಾ ಮ್ಯಾನ್ 5, ಮಸ್ಟೀರಿಯನ್ 7

ಉತ್ತಮ ಬೆಟ್: ಚಾಂಪಿಯನ್ಸ್ ವೇ

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5.6,7


ಚೆನ್ನಾಗಿ ಕಾಣಿಸಿಕೊಳ್ಳಿ
VISHAL MEGA MART
ಲೇಯರ್ಡ್ ಕುರ್ತಾ ₹999
ಸ್ವಚ್ಛ ಭಾರತ್ ಅಭಿಯಾನ್
***** ಬಟ್ಟೆಗಳ ಅತ್ಯುತ್ತಮ ಗುಣಮಟ್ಟ ಅದು ನಿಮ್ಮನ್ನು ಆಶ್ಚರ್ಯ ಗೊಳಿಸುತ್ತದೆ *****
ಕುರ್ತಾ ₹899+ 2 ಖರೀದಿಸಿ ಪಡೆಯಿರಿ ₹400 ರಿಯಾಯಿತಿ
ಶರ್ಟ್ ₹499 2 ಖರೀದಿಸಿ ಪಡೆಯಿರಿ ₹100 ರಿಯಾಯಿತಿ
ಜೀನ್ಸ್ ₹799 2 ಖರೀದಿಸಿ ಪಡೆಯಿರಿ ₹400 ರಿಯಾಯಿತಿ
ಪ್ರಿಂಟೆಡ್ ಟೀ-ಶರ್ಟ್ ₹299
ಪ್ರಿಂಟೆಡ್ ಟೀ-ಶರ್ಟ್ ₹199+ 3 ಖರೀದಿಸಿ 1 ಉಚಿತವಾಗಿ ಪಡೆಯಿರಿ
Limited Edition
ಶರ್ಟ್ ₹499 1 ಖರೀದಿಸಿ ಪಡೆಯಿರಿ 1 ಉಚಿತ
ಜೀನ್ಸ್ ₹799 1 ಖರೀದಿಸಿ ಪಡೆಯಿರಿ 1 ಉಚಿತ
*ನಿಯಮ ಮತ್ತು ಷರತ್ತು ಅನ್ವಯ.

ಸಂಕ್ಷಿಪ್ತ ಸುದ್ದಿ

ಇಂದಿನಿಂದ 'ಉತ್ಕಲ' ಕಾರ್ಯಕ್ರಮ

ಬೆಂಗಳೂರು: ನಗರದ ಬನ್ನೇರುಘಟ್ಟ ಮುಖ್ಯರಸ್ತೆಯ 'ಎಲ್ ಅಂಡ್ ಟಿ' ಸೌತ್ ಸಿಟಿ ಅಪಾರ್ಟ್‌ಮೆಂಟ್‌ನಲ್ಲಿ ಇದೇ 24 ಹಾಗೂ 25ರಂದು 'ಉತ್ಕಲ' (ಜಗನ್ನಾಥ ರಥ ಯಾತ್ರೆ) ಆಯೋಜಿಸಲಾಗಿದೆ.

ಪ್ರತಿಷ್ಠಿತ ಅಪಾರ್ಟ್‌ಮೆಂಟ್‌ಗಳಲ್ಲಿ ಇದು ಒಂದಾಗಿದ್ದು, ಎರಡು ಸಾವಿರ ಫ್ಲ್ಯಾಟ್‌ಗಳಿವೆ. 'ಉತ್ಕಲ' ಕಾರ್ಯಕ್ರಮದ ಅಂಗವಾಗಿ ಪೂಜೆ, ರಥ ಪರಿಕ್ರಮ, ಕ್ರೀಡೆ, ವೇದಿಕೆ ಕಾರ್ಯಕ್ರಮಗಳು ನಡೆಯಲಿವೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಅಂದಾಜು 5 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಕಾರ್ಯಕ್ರಮಕ್ಕೆ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ ಮಾಧ್ಯಮ ಸಹಯೋಗವಿದೆ.

'ಗೃಹ ಜ್ಯೋತಿ': ಹಣ ವಸೂಲಿ ಮಾಡಿದರೆ ಕ್ರಮ

ಬೆಂಗಳೂರು: 'ಗೃಹ ಜ್ಯೋತಿ' ನೋಂದಣಿಗೆ ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಹಣ ವಸೂಲಿ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಸರ್ಕಾರ ಎಚ್ಚರಿಸಿದೆ.

ಗೃಹ ಜ್ಯೋತಿ ನೋಂದಣಿ ಸಂಪೂರ್ಣ ಉಚಿತವಾಗಿದ್ದು, ಈ ಕೇಂದ್ರಗಳಲ್ಲಿ ಸೇವಾ ಶುಲ್ಕ ₹20 ಮಾತ್ರ ವಿಧಿಸಲಾಗುತ್ತಿದೆ. ಸೇವಾ ಶುಲ್ಕದ ಹೊರತಾಗಿ ಹೆಚ್ಚಿನ ಹಣ ಕೇಳಿದರೆ ಸಾರ್ವಜನಿಕರು 1912 ಸಹಾಯವಾಣಿಗೆ ಕರೆ ಮಾಡಿ ದೂರು ನೀಡಲು ಕೋರಲಾಗಿದೆ. ಹಣ ವಸೂಲಿ ಮಾಡುವ ಕೇಂದ್ರಗಳ ವಿರುದ್ಧ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಸಲಾಗಿದೆ.

ಶಸ್ತ್ರಚಿಕಿತ್ಸಾ ತಜ್ಞರ ದಿನ ನಾಳೆ

ಬೆಂಗಳೂರು: ಅಂತರರಾಷ್ಟ್ರೀಯ ಶಸ್ತ್ರಚಿಕಿತ್ಸಾ ತಜ್ಞರ ದಿನವನ್ನು ಇದೇ 26ಕ್ಕೆ ಆಚರಿಸಲಾಗುವುದು. ಇದರ ಪ್ರಯುಕ್ತ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 150 ರೋಗಿಗಳಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಶಸ್ತ್ರ ಚಿಕಿತ್ಸಕರ ಅಸೋಸಿಯೇಶನ್ (ಕೆಎಸ್‌ಸಿಎಸ್‌ಐ) ಅಧ್ಯಕ್ಷ ಡಾ.ಎಚ್.ವಿ. ಶಿವರಾಮ್ ತಿಳಿಸಿದರು.

ಪುರುಷರ ಸೆಳೆಯಲು ಮಾಲೀಕರ ತಂತ್ರ • ವಾರಾಂತ್ಯದ ಔತಣಕೂಟಗಳಿಗೆ ಭಾರಿ ಬೇಡಿಕೆ

ಪಬ್ ಪಾರ್ಟಿ: ಮಹಿಳೆಯರಿಗೆ ಮದ್ಯ ಉಚಿತ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದ ಹಲವು ಪಬ್‌ಗಳಲ್ಲಿ ಮಹಿಳೆಯರಿಗೆ ಉಚಿತವಾಗಿ ಮದ್ಯ ನೀಡಲು ಮಾಲೀಕರು ಮುಂದಾಗಿದ್ದಾರೆ.

ನಗರದ ಕೋರಮಂಗಲ, ಇಂದಿರಾನಗರ, ವೈಟ್‌ಫೀಲ್ಡ್, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಎಂ.ಜಿ.ರಸ್ತೆ ಹಾಗೂ ಇತರೆ ಪ್ರಮುಖ ಪ್ರದೇಶಗಳಲ್ಲಿ ಪಬ್‌ಗಳ ಸಂಖ್ಯೆ ಹೆಚ್ಚಿದೆ. ಈ ಪಬ್‌ಗಳಲ್ಲಿ ನಿತ್ಯವೂ ಪಾರ್ಟಿಗಳನ್ನು ಆಯೋಜಿಸಲಾಗುತ್ತಿದ್ದು, ವಾರಾಂತ್ಯದಲ್ಲೂ ವಿಶೇಷ ಪಾರ್ಟಿ ಸಂಘಟಿಸಲಾಗುತ್ತಿದೆ.

ಕೋವಿಡ್ ಸಂದರ್ಭದಲ್ಲಿ ಪಬ್‌ಗಳು ಬಂದ್ ಆಗಿದ್ದರಿಂದ ಮಾಲೀಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಕೋವಿಡ್ ನಂತರದ ದಿನಗಳಲ್ಲೂ ಗ್ರಾಹಕರ ಸಂಖ್ಯೆ ಕಡಿಮೆ ಇದ್ದು, ನಿಗದಿಯಷ್ಟು ವಹಿವಾಟು ನಡೆಯುತ್ತಿಲ್ಲ. ಹೀಗಾಗಿ, ಗ್ರಾಹಕರನ್ನು ಸೆಳೆಯಲು ಮಾಲೀಕರು ನಾನಾ ಕೊಡುಗೆಗಳನ್ನು ನೀಡುತ್ತಿದ್ದಾರೆ.

ಬಹುತೇಕ ಪಬ್‌ಗಳಲ್ಲಿ ಮದ್ಯ ಮಾರಾಟ ಹಾಗೂ ಊಟ ಪೂರೈಕೆಗೆ ಅನುಮತಿ ಇದೆ. ತರಹೇವಾರಿ ಮದ್ಯ ಹಾಗೂ ಊಟವನ್ನು ಸಿದ್ಧಪಡಿಸಿಕೊಂಡು ಪಬ್ ಸಿಬ್ಬಂದಿ ಗ್ರಾಹಕರಿಗಾಗಿ ಕಾಯುತ್ತಿದ್ದಾರೆ.

ಸೋಮವಾರದಿಂದ ಗುರುವಾರದವರೆಗೆ ಗ್ರಾಹಕರ ಸಂಖ್ಯೆ ಕಡಿಮೆ ಇದೆ. ಶುಕ್ರವಾರ, ಶನಿವಾರ ಹಾಗೂ ಭಾನುವಾರ ರಾತ್ರಿ ತಕ್ಕಮಟ್ಟಿಗೆ ಪಬ್‌ಗಳತ್ತ ಮುಖ ಮಾಡುತ್ತಿದ್ದಾರೆ. ಆದರೆ, ಗ್ರಾಹಕರ ಸಂಖ್ಯೆಯು ಮಾಲೀಕರಿಗೆ ತೃಪ್ತಿ ತರುತ್ತಿಲ್ಲ. ಗ್ರಾಹಕರ ಸಂಖ್ಯೆ ಹೆಚ್ಚಿಸುವ ಉದ್ದೇಶದಿಂದ, ಮಹಿಳೆಯರಿಗೆ ಉಚಿತ ಮದ್ಯ ನೀಡಲು ಮಾಲೀಕರು ತೀರ್ಮಾನಿಸಿದ್ದಾರೆ.



ಬೆಂಗಳೂರಿನ ಪಬ್‌ವೊಂದರಲ್ಲಿ ಆಯೋಜಿಸಿದ್ದ ಪಾರ್ಟಿ ದೃಶ್ಯ

'ನಗರದಲ್ಲಿ ಪಬ್‌ಗಳು ಹೆಚ್ಚಾಗಿದ್ದು, ಪೈಪೋಟಿಯೂ ಇದೆ. ವಾರಾಂತ್ಯದ ಹಾಗೂ ವಿಶೇಷ ಪಾರ್ಟಿಗಳಲ್ಲಿ ಭಾಗವಹಿಸುವ ಮಹಿಳೆಯರಿಗೆ ಉಚಿತ ಮದ್ಯ ಪೂರೈಸಲಾಗುತ್ತಿದೆ. ಈ ಬಗ್ಗೆ ಜಾಹೀರಾತುಗಳನ್ನು ನೀಡಲಾಗಿದೆ. ಉಚಿತ ಮದ್ಯ ನೀಡುವುದರಿಂದ ಪಬ್ ಆದಾಯ ವೃದ್ಧಿಸುವ ಭರವಸೆ ಇದೆ' ಎಂದು ಕೋರಮಂಗಲದ ಪಬ್‌ವೊಂದರ ವ್ಯವಸ್ಥಾಪಕ ರಾಬರ್ಟ್ 'ಪ್ರಜಾವಾಣಿ'ಗೆ ತಿಳಿಸಿದರು.

ಪುರುಷರ ಸೆಳೆಯಲು ತಂತ್ರ: 'ಮಹಿಳೆಯರು ಇರುವ ಪಬ್‌ಗಳಿಗೆ ಮಾತ್ರ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಮಹಿಳೆಯರು ಇಲ್ಲದಿದ್ದರೆ ಬರುವುದಿಲ್ಲ. ಮದ್ಯ ಉಚಿತವಿದ್ದರೆ, ಮಹಿಳೆಯರು ಪಬ್‌ಗಳಿಗೆ ಬರುತ್ತಾರೆ. ಅವರ ಜೊತೆ ಪುರುಷ ಗ್ರಾಹಕರ ಸಂಖ್ಯೆಯೂ ಹೆಚ್ಚಾಗುತ್ತದೆ' ಎಂದು ಇಂದಿರಾನಗರದ ಪಬ್‌ವೊಂದರ ಉದ್ಯೋಗಿ ಹೇಳಿದರು.

'ಎರಡು–ಮೂರು ಪಬ್‌ಗಳಲ್ಲಿ ಕೆಲ ವರ್ಷಗಳಿಂದ ಉಚಿತ ಮದ್ಯ ನೀಡುವ ಪದ್ಧತಿಯಿತ್ತು. ಆದರೆ, ಈಗ ಪೈಪೋಟಿ ಹೆಚ್ಚಾಗಿದೆ. ಹೀಗಾಗಿ, ಬಹುತೇಕ ಪಬ್‌ಗಳಲ್ಲಿ ಮಹಿಳೆಯರಿಗೆ ಉಚಿತ ಮದ್ಯ ಪೂರೈಸಲಾಗುತ್ತಿದೆ. ಆದರೆ, ಪಾರ್ಟಿಗಳಲ್ಲಿ ಪಾಲ್ಗೊಳ್ಳುವ ಮುನ್ನ ಟಿಕೆಟ್ ಕಾಯ್ದಿರಿಸುವುದು ಕಡ್ಡಾಯ ಮಾಡಲಾಗಿದೆ' ಎಂದು ತಿಳಿಸಿದರು.

'ಹೊರೆಯಲ್ಲ, ಆದಾಯ ವೃದ್ಧಿ'

'ಹೊರ ರಾಜ್ಯಗಳ ಯುವತಿಯರು ಹೆಚ್ಚಾಗಿ ಪಬ್‌ಗಳಿಗೆ ಆಗಾಗ ಬಂದು ಹೋಗುತ್ತಾರೆ. ಪಾರ್ಟಿ ವೇಳೆ ಚೆಂದದ ಉಡುಗೆ ತೊಟ್ಟು ಇತರರನ್ನು ಆಕರ್ಷಿಸುತ್ತಾರೆ. ಉಚಿತ ಮದ್ಯವಿದ್ದರೂ ಮಹಿಳೆಯರು ಮಿತಿ ಮೀರುವುದಿಲ್ಲ. ಆದರೆ, ಪುರುಷರು ಹೆಚ್ಚು ಕುಡಿಯುತ್ತಾರೆ. ಇದರಿಂದ ಪಬ್ ಆದಾಯ ಹೆಚ್ಚಾಗುತ್ತದೆ' ಎಂದು ಇಂದಿರಾನಗರದ ಪಬ್‌ವೊಂದರ ವ್ಯವಸ್ಥಾಪಕ ಎಚ್. ಗೌತಮ್ ಅಭಿಪ್ರಾಯಪಟ್ಟರು.

'ಶುಕ್ರವಾರ, ಶನಿವಾರ ಹಾಗೂ ಭಾನುವಾರ ರಾತ್ರಿ ವಾರಾಂತ್ಯದ ಪಾರ್ಟಿಗಳಲ್ಲಿ ಮಹಿಳೆಯರಿಗೆ ಉಚಿತ ಮದ್ಯ ನೀಡಲಾಗುತ್ತಿದೆ. ಹೀಗಾಗಿ, ಪುರುಷರೂ ಪಾರ್ಟಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇಂಥ ಪಾರ್ಟಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ' ಎಂದರು.

ಮುಖ್ಯಾಂಶಗಳು

- ಬೆಂಗಳೂರಿನ ಹಲವು ಪಬ್‌ಗಳಲ್ಲಿ ಕೊಡುಗೆ
- ಜಾಹೀರಾತು ನೀಡಿ ಗ್ರಾಹಕರಿಗೆ ಆಹ್ವಾನ
- ಪಾರ್ಟಿಗಳಲ್ಲಿ ಡಿ.ಜೆ.ಗೂ ಅವಕಾಶ

ಶೋಭಾ ಹೇಳಿಕೆ ಸಮಾಜ ಒಪ್ಪುತ್ತದೆಯೇ?: ಬಿಕೆಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿಗಳ ಭರವಸೆ ನೀಡುವಾಗ ನಿಮ್ಮ ತಲೆಯಲ್ಲಿ ಮೆದುಳು ಇರಲಿಲ್ಲವೇ' ಎಂಬ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿಕೆಯನ್ನು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಖಂಡಿಸಿದ್ದಾರೆ.

ಶೋಭಾ ಅವರ ಪ್ರಶ್ನೆ ಔಚಿತ್ಯವನ್ನು ಮೀರಿದ್ದು, ಅವರ ಪರಾಕ್ರಮದ ಪ್ರದರ್ಶನವಾಗಿದೆ. 2016ರಲ್ಲಿ ಬಿಜೆಪಿ ಪ್ರಕಟಿಸಿದ 'ಲೋಕ ಸಭಾ ಸಂಕಲ್ಪ ಪತ್ರ'ದಲ್ಲಿ ದೇಶದ ರೈತರ ಆದಾಯವನ್ನು 2022ರ ವೇಳೆಗೆ ದ್ವಿಗುಣಗೊಳಿಸುತ್ತೇವೆ ಎಂದು ಘೋಷಿಸಿದ್ದರು. ಆದಾಯ ದ್ವಿಗುಣವಾಗಿದೆಯೇ? ಘೋಷಿಸುವಾಗ ಅವರಿಗೆ ಮೆದುಳು ಇರಲಿಲ್ಲವೇ ಎನ್ನುವ ಪ್ರಶ್ನೆಯನ್ನು ನಾಗರಿಕ ಸಮಾಜ ಒಪ್ಪುತ್ತದೆಯೇ ಎಂದಿದ್ದಾರೆ.

ವಿವಾದಾತ್ಮಕ ಕೃಷಿ ಕಾಯ್ದೆಗಳ ವಿರುದ್ಧ ಒಂದು ವರ್ಷ ಲಕ್ಷಾಂತರ ರೈತರು ಧರಣಿ ನಡೆಸಿದಾಗ ಪ್ರಧಾನಿ ಅವರು ಸೌಜನ್ಯಕ್ಕಾದರೂ ಧರಣಿ ನಿರತರನ್ನು ಭೇಟಿ ಮಾಡಲಿಲ್ಲ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು 'ಕೇಂದ್ರಕ್ಕೆ ಕರ್ನಾಟಕ ವಷ್ಟೇ ಮುಖ್ಯವಲ್ಲ' ಎಂದಿದ್ದಾರೆ. ಹಾಗಾದರೆ, ಕೇಂದ್ರಕ್ಕೆ ಮಣಿಪುರ ರಾಜ್ಯದ ಜವಾಬ್ದಾರಿ ಇಲ್ಲವೇ? ಬಿಜೆಪಿ ಪ್ರಣಾಳಿಕೆಯಲ್ಲಿ ಸಹಭಾಗಿತ್ವ ಒಕ್ಕೂಟದ ಭರವಸೆ ನೀಡಿದ್ದರೂ ರಾಜ್ಯಕ್ಕೆ ಅಕ್ಕಿ ಕೊಡಬೇಕಿತ್ತು ಅಲ್ಲವೇ ಎಂದಿದ್ದಾರೆ.



ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಪತ್ರಕರ್ತ ದು.ಗು.ಲಕ್ಷ್ಮಣ ಅವರು 'ಕರ್ನಾಟಕ ಕೇಸರಿ ಶ್ರೀ ಜಗನ್ನಾಥ ರಾವ್ ಜೋಶಿ' ಪುಸ್ತಕವನ್ನು ಬಿಡುಗಡೆ ಮಾಡಿದರು. ಮಾಜಿ ಶಾಸಕ ರಾಜೀವ್ ಕುಡುಚಿ, ಪುಸ್ತಕದ ಲೇಖಕ ತಿಮ್ಮಣ್ಣ ಭಟ್ ಮತ್ತು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್ ಶಂಕರಪ್ಪ ಇದ್ದರು –ಪ್ರಜಾವಾಣಿ ಚಿತ್ರ

ಬಿಬಿಎಂಪಿ ವಾರ್ಡ್ ವಿಂಗಡಣೆ: 3 ತಿಂಗಳಲ್ಲಿ ವರದಿಗೆ ಸೂಚನೆ

ಆಯೋಗ ಪುನರ್ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್‌ಗಳ ಮರು ವಿಂಗಡಿಸಲು ಮುಖ್ಯ ಆಯುಕ್ತರ ನೇತೃತ್ವದ ಆಯೋಗವನ್ನು ಸರ್ಕಾರ ಪುನರ್ ರಚಿಸಿದೆ. ನ್ಯಾಯಾಲಯ ನೀಡಿರುವ ಅವಧಿಯೊಳಗೆ ವರದಿ ಸಲ್ಲಿಸುವಂತೆ ಸೂಚಿಸಿದೆ.

ಬಿಬಿಎಂಪಿ ಮುಖ್ಯ ಆಯುಕ್ತರು ಆಯೋಗದ ಅಧ್ಯಕ್ಷರಾಗಿದ್ದು, ಬಿಡಿಎ ಆಯುಕ್ತ, ಬೆಂಗಳೂರು ನಗರ ಜಿಲ್ಲಾಧಿಕಾರಿ ಸದಸ್ಯರಾಗಿದ್ದಾರೆ. ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ವಾರ್ಡ್ ಪುನರ್ ವಿಂಗಡಿಸಲು ಹೈಕೋರ್ಟ್ ಜೂನ್ 19ರಂದು 12 ವಾರಗಳ ಕಾಲಾವಕಾಶ ನೀಡಿತ್ತು. ಈ ಅವಧಿಯೊಳಗೆ ವಾರ್ಡ್‌ಗಳ ಮರು ವಿಂಗಡಣೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

ಹಿನ್ನೆಲೆ: 2021ರ ಜ.29ರಂದು ಬಿಬಿಎಂಪಿ ವಾರ್ಡ್‌ಗಳ ಮರು ವಿಂಗಡಣೆಗೆ 'ಬಿಬಿಎಂಪಿ ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗ'ವನ್ನು ರಚಿಸಲಾಗಿತ್ತು. 2022ರ ಜೂನ್ 6ರಂದು ಆ ಆಯೋಗ ವರದಿ ಸಲ್ಲಿಸಿತ್ತು. ಇದನ್ನು ಆಧರಿಸಿ, 2011ರ ಜನಗಣತಿ ಆಧಾರದ ಮೇರೆಗೆ ವಾರ್ಡ್‌ಗಳ ಪುನರ್ ವಿಗಂಡಣೆಯನ್ನು ಅಂತಿಮಗೊಳಿಸಿ 2022ರ ಜುಲೈ 14ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಈ ಅಧಿಸೂಚನೆ ಪ್ರಶ್ನಿಸಿದ್ದ ಅರ್ಜಿಯನ್ನು ಹೈಕೋರ್ಟ್ 2022ರ ಸೆ.16ರಂದು ವಜಾಗೊಳಿಸಿತ್ತು. ಹೈಕೋರ್ಟ್ ನೀಡಿದ್ದ ಆದೇಶದ ವಿರುದ್ಧ ಬಿ.ಎನ್. ಮಂಜುನಾಥ ರೆಡ್ಡಿ ಮತ್ತು ಇತರರು ಹೈಕೋರ್ಟ್ ವಿಭಾಗೀಯ ಪೀಠದ ಮುಂದೆ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ಸಂದರ್ಭದಲ್ಲಿ 2023ರ ಜೂನ್ 19ರಂದು ಹೈಕೋರ್ಟ್ ವಾರ್ಡ್‌ಗಳ ಪುನರ್ ವಿಂಗಡಣೆಗೆ 12 ವಾರಗಳ ಕಾಲಾವಕಾಶ ನೀಡಿದೆ.

ಹೈಕೋರ್ಟ್ ನೀಡಿದ ಆದೇಶದಂತೆ ವಾರ್ಡ್‌ಗಳ ಕ್ಷೇತ್ರ ಪುನರ್‌ವಿಂಗಡಣೆ ಮಾಡಲು ಈ ಹಿಂದೆ ರಚಿಸಲಾಗಿದ್ದ 'ಬಿಬಿಎಂಪಿ ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗ'ವನ್ನು ಸರ್ಕಾರ ಪುನರ್ ರಚಿಸಿ ಜೂನ್ 23ರಂದು ಆದೇಶ ಹೊರಡಿಸಿದೆ.

ಆಯೋಗಕ್ಕೆ ವಿಧಿಸಿರುವ ಷರತ್ತುಗಳು

- ಹೈಕೋರ್ಟ್ ಆದೇಶದಂತೆ ಅವಧಿಯೊಳಗೆ ವರದಿ ಸಲ್ಲಿಸಬೇಕು.
- ಹೈಕೋರ್ಟ್ ಆದೇಶದಂತೆ, ಸಂಬಂಧಿಸಿದ ಕಾನೂನು ಹಾಗೂ ಮಾರ್ಗಸೂಚಿಗಳ ಪ್ರಕಾರ ಹೊಸದಾಗಿ ವಾರ್ಡ್‌ಗಳ ಮರು ವಿಂಗಡಣೆ ಪ್ರಕ್ರಿಯೆ ನಡೆಸಲು ಕ್ರಮ ವಹಿಸಬೇಕು.
- ಆಯೋಗದ ಸದಸ್ಯ ಕಾರ್ಯದರ್ಶಿ ಅಗತ್ಯ ಕ್ಷೇತ್ರ ಅಧ್ಯಯನ, ಸ್ಥಳ ಪರಿಶೀಲನೆ ಕಾರ್ಯ, ಸಮಾಲೋಚನೆ ನಿರ್ವಹಿಸಬೇಕು.
- ಅಗತ್ಯವಾಗಿರುವ ಎಲ್ಲ ವ್ಯವಸ್ಥೆ ಮತ್ತು ಇತರೆ ವೆಚ್ಚಗಳನ್ನು ಬಿಬಿಎಂಪಿ ನಿಧಿಯಿಂದಲೇ ಭರಿಸಬೇಕು.

ಯಲಹಂಕ: ಗ್ರಾಮ ಪಂಚಾಯಿತಿ ಮೀಸಲಾತಿ ಪ್ರಕಟ

ಯಲಹಂಕ: ಚುನಾವಣಾ ಆಯೋಗವು 2ನೇ ಅವಧಿಗೆ ಗ್ರಾಮ ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ ನಿಗದಿಪಡಿಸಿದೆ. ಬೆಂಗಳೂರು ಉತ್ತರ ತಾಲ್ಲೂಕಿನ 11 ಹಾಗೂ ಯಲಹಂಕ ತಾಲ್ಲೂಕಿನ 18 ಗ್ರಾಮ ಪಂಚಾಯಿತಿಗಳ ಮೀಸಲಾತಿ ನಿಗದಿಪಡಿಸಿದೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

ಯಲಹಂಕ ತಾಲ್ಲೂಕು: :ಹೆಸರಘಟ್ಟ-ಅಧ್ಯಕ್ಷ-ಬಿಸಿಎಂ(ಎ)ಮಹಿಳೆ, ಉಪಾಧ್ಯಕ್ಷ-ಎಸ್ಸಿ. ಹುರಳಿಚಿಕ್ಕನಹಳ್ಳಿ-ಅಧ್ಯಕ್ಷ-ಬಿಸಿಎಂ(ಎ)ಮಹಿಳೆ, ಉಪಾಧ್ಯಕ್ಷ–ಸಾಮಾನ್ಯ, ಕಸಘಟ್ಟಪುರ -ಎಸ್ಸಿ.ಮಹಿಳೆ,- ಬಿಸಿಎಂ(ಬಿ), ಶಿವಕೋಟೆ-ಎಸ್ಸಿ,- ಸಾಮಾನ್ಯ (ಮಹಿಳೆ), ಸೊಣ್ಣೇನಹಳ್ಳಿ-ಎಸ್ಸಿ, ಸಾಮಾನ್ಯ (ಮಹಿಳೆ), ಅರಕೆರೆ-ಎಸ್ಸಿ (ಮಹಿಳೆ)-ಸಾಮಾನ್ಯ. ರಾಜಾನುಕುಂಟೆ-ಸಾಮಾನ್ಯ (ಮಹಿಳೆ), -ಎಸ್ಸಿ. ಸಿಂಗನಾಯಕನಹಳ್ಳಿ-ಎಸ್ಟಿ (ಮಹಿಳೆ), -ಸಾಮಾನ್ಯ. ಗಂಟಿಗಾನಹಳ್ಳಿ-ಸಾಮಾನ್ಯ,- ಸಾಮಾನ್ಯ(ಮಹಿಳೆ), ವಡೇರಹಳ್ಳಿ-ಸಾಮಾನ್ಯ(ಮಹಿಳೆ),

-ಸಾಮಾನ್ಯ, ಚಿಕ್ಕಜಾಲ-ಸಾಮಾನ್ಯ. -ಎಸ್ಸಿ(ಮಹಿಳೆ), ಮೀನುಕುಂಟೆ-ಸಾಮಾನ್ಯ.-ಎಸ್.ಸಿ(ಮಹಿಳೆ), ದೊಡ್ಡಜಾಲ-ಸಾಮಾನ್ಯ,-ಎಸ್ಟಿ(ಮಹಿಳೆ), ಬಂಡಿಕೊಡಿಗೇಹಳ್ಳಿ- ಎಸ್ಸಿ (ಮಹಿಳೆ).-ಸಾಮಾನ್ಯ, ಬೆಟ್ಟಹಲಸೂರು-ಸಾಮಾನ್ಯ(ಮಹಿಳೆ),-ಸಾಮಾನ್ಯ, ಬಾಗಲೂರು-ಬಿಸಿಎಂ(ಬಿ), -ಬಿಸಿ ಎಂ(ಎ)ಮಹಿಳೆ, ಮಾರೇನಹಳ್ಳಿ-ಸಾಮಾನ್ಯ. -ಎಸ್.ಸಿ(ಮಹಿಳೆ), ಸಾತನೂರು-ಸಾಮಾನ್ಯ.-ಬಿಸಿ ಎಂ.(ಎ) ಮಹಿಳೆ.

ಬೆಂಗಳೂರು ಉತ್ತರ ತಾಲ್ಲೂಕು: ಕೊಡಿಗೇಹಳ್ಳಿ: ಅಧ್ಯಕ್ಷ-ಸಾಮಾನ್ಯ (ಮಹಿಳೆ). -ಉಪಾಧ್ಯಕ್ಷ-ಬಿಸಿಎಂ(ಎ) ಮಹಿಳೆ, ದಾಸನಪುರ(ಎಸ್.ಸಿ),-ಸಾಮಾನ್ಯ(ಮಹಿಳೆ), ಅಡಕಮಾರನಹಳ್ಳಿ-ಸಾಮಾನ್ಯ (ಮಹಿಳೆ),-ಸಾಮಾನ್ಯ. ಹುಸ್ಕೂರು-ಸಾಮಾನ್ಯ.-ಎಸ್ಸಿ(ಮಹಿಳೆ). ಗೋಪಾಲಪುರ-ಸಾಮಾನ್ಯ.-ಸಾಮಾನ್ಯ(ಮಹಿಳೆ). ಆಲೂರು-ಬಿಸಿಎಂ(ಎ).-ಎಸ್ಸಿ(ಮಹಿಳೆ). ಕಿತ್ತನಹಳ್ಳಿ-ಎಸ್.ಸಿ(ಮಹಿಳೆ),-ಸಾಮಾನ್ಯ. ಸೊಂಡೆಕೊಪ್ಪ-ಎಸ್ಸಿ(ಮಹಿಳೆ)-ಬಿಸಿಎಂ(ಎ). ಕಡಬಗೆರೆ-ಸಾಮಾನ್ಯ.-ಸಾಮಾನ್ಯ (ಮಹಿಳೆ). ಮಾಚೊಹಳ್ಳಿ-ಸಾಮಾನ್ಯ (ಮಹಿಳೆ)-ಎಸ್.ಸಿ, ಕಾಚೊಹಳ್ಳಿ-ಬಿಸಿಎಂ.(ಎ) ಮಹಿಳೆ.-ಸಾಮಾನ್ಯ.

'ಜಗನ್ನಾಥರಾವ್ ಜೋಶಿ ರಾಜಕೀಯ ಸಂತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಗನ್ನಾಥರಾವ್ ಜೋಶಿ ಒಬ್ಬ ಧೀಮಂತ ರಾಜಕಾರಣಿ. ಪಕ್ಷವನ್ನು ಸದೃಢಗೊಳಿಸಲು ರಾಜ್ಯಪಾಲರ ಹುದ್ದೆಯನ್ನೂ ತಿರಸ್ಕರಿಸಿದ್ದರು. ಅನೇಕರನ್ನು ಬೆಳೆಸಿದ ರಾಜಕೀಯ ಸಂತ' ಎಂದು ಪತ್ರಕರ್ತ ದು.ಗು.ಲಕ್ಷ್ಮಣ ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ 'ಕರ್ನಾಟಕ ಕೇಸರಿ ಶ್ರೀಜಗನ್ನಾಥರಾವ್ ಜೋಶಿ' ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ರಾಜ್ಯದಲ್ಲಿ ಭಾರತೀಯ ಜನಸಂಘ ಮತ್ತು ಬಿಜೆಪಿ ಬೆಳವಣಿಗೆಯಲ್ಲಿ ಜಗನ್ನಾಥ ರಾವ್ ಜೋಶಿ ಮತ್ತು ಭಾವುರಾವ್ ದೇಶಪಾಂಡೆ ಪ್ರಮುಖ ಪಾತ್ರವಹಿಸಿದ್ದರು. ಪ್ರಖರ ವಿಚಾರ, ಸರಳತೆಯೊಂದಿಗೆ ಸಾವಿರಾರು ಕಾರ್ಯಕರ್ತರನ್ನು ಬೆಳೆಸಿದರು. ಅವರ ಕುರಿತು ಸಮಗ್ರ ಪುಸ್ತಕ ಹೊರಬರದೇ ಇರುವುದು ಬೇಸರದ ವಿಚಾರ. ವೈಚಾರಿಕತೆ, ಪ್ರಬುದ್ಧತೆ, ಸರಳತೆಯನ್ನು ಅವರು ಮೈಗೂಡಿಸಿಕೊಂಡಿದ್ದರು ಎಂದರು. ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಎನ್. ರವಿಕುಮಾರ್, ಸಿದ್ದರಾಜು ಪ್ರಕಾಶಕ ಸಂಸ್ಥೆ ಅಯೋಧ್ಯಾ ಪ್ರಕಾಶನದ ನಿರ್ದೇಶಕ ರೋಹಿತ್ ಚಕ್ರತೀರ್ಥ ಭಾಗವಹಿಸಿದ್ದರು.

30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥ

ಹುಮನಾಬಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ನಿಂಬೂರ್ ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ಮಧ್ಯಾಹ್ನದ ಬಿಸಿಯೂಟ ಸೇವಿಸಿದ್ದ 30ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಹೊಟ್ಟೆ ನೋವು ಹಾಗೂ ವಾಂತಿ ಭೇದಿ ಕಾಣಿಸಿಕೊಂಡಿದ್ದು, ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ ಭೇಟಿ ನೀಡಿ ವೈದ್ಯರೊಂದಿಗೆ ಚರ್ಚಿಸಿದರು.

ಆರೋಗ್ಯ ವಿಮೆ ಅಧ್ಯಯನಕ್ಕೆ ತಂಡ

2 ರಾಜ್ಯಗಳಿಗೆ ಭೇಟಿ ನೀಡಲು ಆರೋಗ್ಯ ಇಲಾಖೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ರಾಜ್ಯಗಳಲ್ಲಿ ಜಾರಿಯಿರುವ ಆರೋಗ್ಯ ವಿಮೆ ವ್ಯವಸ್ಥೆಯ ಬಗ್ಗೆ ಅಧ್ಯಯನಕ್ಕೆ ಆರೋಗ್ಯ ಇಲಾಖೆಯು ನಾಲ್ವರು ಅಧಿಕಾರಿಗಳ ತಂಡ ರಚಿಸಿದೆ.

ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲಾಖೆಯ ಅಧಿಕಾರಿಗಳ ಜತೆಗೆ ಸಭೆ ನಡೆಸಿ, ಆಯುಷ್ಮಾನ್ ಭಾರತ್‌–ಆರೋಗ್ಯ ಕರ್ನಾಟಕ ಯೋಜನೆಯನ್ನು ಪರಣಾಮಕಾರಿಯಾಗಿ ಜಾರಿಗೊಳಿಸಲು ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದ್ದರು. ತಮಿಳುನಾಡು ಹಾಗೂ ರಾಜಸ್ಥಾನದಲ್ಲಿ ಜಾರಿಯಲ್ಲಿರುವ ಸಾರ್ವಜನಿಕ ಆರೋಗ್ಯ ಯೋಜನೆಗಳ ಆರೋಗ್ಯ ವಿಮೆ ಬಗ್ಗೆ ಅಧ್ಯಯನಕ್ಕೆ ಸೂಚಿಸಿದ್ದರು. ಅದರಂತೆ ಈಗ ಅಧಿಕಾರಿಗಳ ತಂಡ ರಚಿಸಲಾಗಿದೆ.

ಇಲಾಖೆಯ ಜಂಟಿ ನಿರ್ದೇಶಕ (ವೈದ್ಯಕೀಯ) ಡಾ. ಭಾನುಮೂರ್ತಿ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಿರ್ದೇಶಕ ಡಾ. ಸುರೇಶ್ ಶಾಸ್ತ್ರಿ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಿರ್ದೇಶಕಿ (ಕಾರ್ಯಾಚರಣೆ) ರೂಪಾ ಹಾಗೂ ಸಹಾಯಕ ನಿರ್ದೇಶಕ (ಹಣಕಾಸು) ಅರುಣ್ ಕುಮಾರ್ ಟಿ. ಅವರು ತಂಡದಲ್ಲಿದ್ದಾರೆ. ಇದೇ 27 ಹಾಗೂ 28ರಂದು ರಾಜಸ್ಥಾನ, ಜು.6,7ರಂದು ತಮಿಳುನಾಡಿಗೆ ತೆರಳಲಿದ್ದಾರೆ. ಬಳಿಕ ವರದಿ ಸಲ್ಲಿಸಲಿದ್ದಾರೆ.

‘ವರದಿ ಸಲ್ಲಿಕೆಯಾದ ಬಳಿಕ, ‘ಆಯುಷ್ಮಾನ್ ಭಾರತ್‌-ಆರೋಗ್ಯ ಕರ್ನಾಟಕ’ ಯೋಜನೆ ಹೆಚ್ಚು ಜನಸ್ನೇಹಿಯಾಗಿಸಲು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮುಖ್ಯಮಂತ್ರಿ ಜತೆಗೆ ಚರ್ಚಿಸಲಿದ್ದಾರೆ. ಜಾರಿಯಲ್ಲಿರುವ ಆರೋಗ್ಯ ವಿಮೆ ಯೋಜನೆಗೆ ರಾಜ್ಯ ಸರ್ಕಾರ ಶೇ 64 ರಷ್ಟು ಹಣಕಾಸಿನ ನೆರವು ಒದಗಿಸುತ್ತಿದ್ದು, ಕೇಂದ್ರ ಸರ್ಕಾರ ಶೇ 34 ರಷ್ಟು ಮಾತ್ರ ನೀಡುತ್ತಿದೆ. ಯೋಜನೆಯಡಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಎರಡು ವಾರಗಳಲ್ಲಿ ಚಿಕಿತ್ಸಾ ವೆಚ್ಚ ಪಾವತಿಸುವ ವಿಧಾನ ಜಾರಿಗೊಳಿಸಲು ಸಚಿವರು ನಿರ್ಧರಿಸಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಲ್ ರೋಬ್ಸನ್ 125ನೇ ಜನ್ಮ ದಿನಾಚರಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತಿ ಹೋರಾಟಗಾರ, ವಿಶ್ವವಿಖ್ಯಾತ ಸಂಗೀತಗಾರ ಪಾಲ್ ರೋಬ್ಸನ್ ಅವರ 125ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಆಲ್ ಇಂಡಿಯಾ ಪೀಸ್ ಆಂಡ್ ಸಾಲಿಡಾರಿಟಿ ವತಿಯಿಂದ ಜೂನ್ 24ರಂದು ಬೆಳಿಗ್ಗೆ 10.30ಕ್ಕೆ ಕರ್ನಾಟಕ ಚಿತ್ರಕಲಾ ಪರಿಷತ್ತಿನ ದೇವರಾಜ ಅರಸ್ ಸಭಾಂಗಣದಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಶಾಂತಿ ಮತ್ತು ಅಧ್ಯಾತ್ಮದೊಂದಿಗೆ ಈ ಸಮಾವೇಶ ನಡೆಯಲಿದ್ದು, ವಿದ್ವಾಂಸರು, ಸಂಗೀತಗಾರರು, ಶಾಂತಿಯಲ್ಲಿ ಆಸಕ್ತಿ ಇರುವವರು ಭಾಗವಹಿಸುವರು. ಹಿರಿಯ ಶಾಂತಿ ಕಾರ್ಯಕರ್ತ ಇ.ಪಿ. ಮೆನನ್ ‘ಪ್ರಸ್ತುತ ಕಾಲದಲ್ಲಿ ಶಾಂತಿ ಚಳವಳಿಯ ಮಹತ್ವ’ದ ಕುರಿತು ಮಾತನಾಡಲಿದ್ದಾರೆ. ವ್ಯಾಖ್ಯಾನಕಾರ ಉದಯ್ ಬಾಲಕೃಷ್ಣನ್ ‘ಬದಲಾಗುತ್ತಿರುವ ಪ್ರಪಂಚದ ಪರಿಸ್ಥಿತಿ’ ಕುರಿತು ತಿಳಿಸಲಿದ್ದಾರೆ. ಆಶ್ಲೇ ವಿಲಿಯಮ್ಸ್ ಜೋಸೆಫ್ ನಿರ್ದೇಶನದಲ್ಲಿ ಬೆಂಗಳೂರು ಮ್ಯೂಸಿಕಲ್ ಅಸೋಸಿಯೇಷನ್ ವತಿಯಿಂದ ಆಫ್ರಿಕನ್-ಅಮೆರಿಕನ್ ಸ್ಪಿರಿಚ್ಯುವಲ್ಸ್ ಮತ್ತು ಗಾಂಧಿ ಗೀತೆಗಳ ಗಾಯನ ನಡೆಯಲಿದೆ.

ಲಲಿತ ಸಹಸ್ರನಾಮ ಪೂಜಾ ಕಾರ್ಯಕ್ರಮದಲ್ಲಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

‘ಧರ್ಮ ರಕ್ಷಣೆಗಾಗಿ ಹೋರಾಟ ಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೂ ಧರ್ಮದ ರಕ್ಷಣೆಗಾಗಿ ಪ್ರಸ್ತುತ ಹೋರಾಟ ನಡೆಸುವ ಪರಿಸ್ಥಿತಿ ಬಂದಿದೆ’ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಜಯನಗರ ಮಹಿಳಾ ಸಮಾಜ ವತಿಯಿಂದ ಚಂದ್ರಗುಪ್ತಮೌರ್ಯ ಆಟದ ಮೈದಾನದಲ್ಲಿ ಅಷಾಢ ಶುಕ್ರವಾರ ಅಂಗವಾಗಿ ಆಯೋಜಿಸಿದ್ದ ಲಲಿತ ಸಹಸ್ರನಾಮ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಧರ್ಮ ಉಳಿದರೆ ಮಾತ್ರ ನಾವು ಉಳಿಯುತ್ತೇವೆ. ಎಲ್ಲರೂ ಒಂದೇ ಕುಟುಂಬವೆಂದು ಭಾವಿಸಿ, ಜೀವಿಸುವ ಧರ್ಮ ಎಂದರೆ ಅದು ಹಿಂದೂ ಧರ್ಮ’ ಎಂದು ಪ್ರತಿಪಾದಿಸಿದರು.

ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ‘ಸ್ವಾತಂತ್ರ್ಯ ದೊರೆತ ನಂತರ ರಾಜ್ಯದ ಮೊಟ್ಟ ಮೊದಲ ಸುಸಜ್ಜಿತ ನಗರ ಜಯನಗರ. ಮೈಸೂರು ರಾಜಸಂಸ್ಥಾನಕ್ಕೂ ಜಯನಗರ ಕ್ಷೇತ್ರಕ್ಕೆ ಅವಿನಾಭಾವ ಸಂಬಂಧ ಇದೆ. ಪ್ರಜಾಪ್ರಭುತ್ವ ಆಡಳಿತ ಇದ್ದರೂ ನಾಡಿನ ಜನರ ಒಳಿತಿಗಾಗಿ ರಾಜಮನೆತನವು ತನ್ನ ಸೇವೆ ಹಾಗೂ ಹೋರಾಟ ನಡೆಸಲಿದೆ’ ಎಂದು ಹೇಳಿದರು.



ಜಯನಗರದಲ್ಲಿ ಶುಕ್ರವಾರ ನಡೆದ ಲಲಿತ ಸಹಸ್ರನಾಮ ಪೂಜಾ ಕಾರ್ಯಕ್ರಮದಲ್ಲಿ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶೋಭಾ ಕರಂದ್ಲಾಜೆ, ಸಿ.ಕೆ.ರಾಮಮೂರ್ತಿ ಪಾಲ್ಗೊಂಡಿದ್ದರು.

ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ‘ಸಮಾಜದಲ್ಲಿ ಮಹಿಳೆಯರ ಪಾತ್ರ ದೊಡ್ಡದು. ಮನೆ ಜೊತೆಯಲ್ಲಿ ಸಮಾಜದ ಅಭಿವೃದ್ಧಿಗೂ ಶ್ರಮಿಸುತ್ತಾಳೆ. ಮನೆ, ಕುಟುಂಬ ಮತ್ತು ಸಂಬಂಧಿಕರ ಶ್ರೇಯಸ್ಸು ಬಯಸುವ ಹೆಣ್ಣು, ಎಲ್ಲರ ಒಳಿತಿಗಾಗಿ ಲಲಿತ ಸಹಸ್ರನಾಮ ಪೂಜೆ ಮಾಡುತ್ತಿರುವುದು ಶ್ಲಾಘನೀಯ’ ಎಂದು ಹೇಳಿದರು.

ಜಯನಗರ ಕ್ಷೇತ್ರದ ಶಾಸಕ ಸಿ.ಕೆ. ರಾಮಮೂರ್ತಿ ಮಾತನಾಡಿ, ‘ಎಲ್ಲರ ಜೀವನದಲ್ಲಿ ಸುಖ, ಶಾಂತಿ ನೆಮ್ಮದಿ ಲಭಿಸಲೆಂದು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದರು.

ಕಾರ್ಯಕ್ರಮದಲ್ಲಿ ಅಂದಾಜು ಮೂರು ಸಾವಿರ ಮಹಿಳೆಯರು ಪಾಲ್ಗೊಂಡಿದ್ದರು.

ಪಾಲಿಕೆ ಮಾಜಿ ಸದಸ್ಯರಾದ ಸೋಮಶೇಖರ್, ನಾಗರತ್ನ ರಾಮಮೂರ್ತಿ ಇದ್ದರು.

‘ಕೊಟ್ಟ ಮಾತು ಉಳಿಸಿಕೊಳ್ಳಲಿ’

‘ಗ್ಯಾರಂಟಿ’ಗಳ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ರಾಜ್ಯದ ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

‘ಯಾವುದೇ ಲೆಕ್ಕಾಚಾರ ನಡೆಸದೇ ಹಾಗೂ ಪೂರ್ವಾಲೋಚನೆಯಿಲ್ಲದೇ ತಲಾ 10 ಕೆ.ಜಿ. ಅಕ್ಕಿ ನೀಡುತ್ತೇವೆ ಎಂದು ಕಾಂಗ್ರೆಸ್ ಮುಖಂಡರು ಸುಳ್ಳು ಭರವಸೆ ನೀಡಿದ್ದರು. ಈಗ ಕೇಂದ್ರ ಸರ್ಕಾರದ ಮೇಲೆ ವಿನಾಕಾರಣ ಆರೋಪ ಮಾಡುತ್ತಿದ್ದಾರೆ’ ಎಂದರು.

‘ಗ್ಯಾರಂಟಿಗಳಿಗೆ ಎಲ್ಲಿಂದ ಹಣ ಹೊಂದಿಸುತ್ತೀರಿ ಎಂದರೆ ಅವರ ಬಳಿ ಉತ್ತರವೇ ಇಲ್ಲ. ಎಲ್ಲರೂ ಮೌನ ವಹಿಸುತ್ತಾರೆ’ ಎಂದು ಹೇಳಿದರು.

ನಗರದಲ್ಲಿ ಇಂದು

ನವಪಲ್ಲವ 2023–24: ಅತಿಥಿಗಳು: ರವಿ ಎಸ್., ವಿಜಯಲಕ್ಷ್ಮಿ ಶಿಬರೂರು, ಅಧ್ಯಕ್ಷತೆ: ಸರಿತಾ ಬಾಯಿ ಎನ್., ಆಯೋಜನೆ ಹಾಗೂ ಸ್ಥಳ: ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಪದವಿಪೂರ್ವ ಕಾಲೇಜು, ಬೆಳಿಗ್ಗೆ 9

ಉಚಿತ ನೋಟ್ ಪುಸ್ತಕ ವಿತರಣೆ ಸಮಾರಂಭ: ಉದ್ಘಾಟನೆ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಆರ್. ಅಶೋಕ್, ಪುಸ್ತಕ ವಿತರಣೆ: ನಾ. ತಿಪ್ಪೇಸ್ವಾಮಿ, ಪ್ರತಿಭಾ ಪುರಸ್ಕಾರ ವಿತರಣೆ: ತೇಜಸ್ವಿ ಸೂರ್ಯ, ರಾಜೇಶ್ ಜಿ., ಬಿ.ವೈ. ವಿಜಯೇಂದ್ರ, ಎಸ್.ಟಿ. ಸೋಮಶೇಖರ್, ಉಪಸ್ಥಿತಿ: ಸಿ.ಕೆ. ರಾಮಮೂರ್ತಿ, ಆಯೋಜನೆ: ರಕ್ಷಾ ಫೌಂಡೇಷನ್, ಸ್ಥಳ: ಚಂದ್ರಗುಪ್ತಮೌರ್ಯ ಆಟದ ಮೈದಾನ, 5ನೇ ಬ್ಲಾಕ್, ಜಯನಗರ, ಬೆಳಿಗ್ಗೆ 10

ಇಪಿಎಸ್ 95–ಎನ್‌ಎಸಿ ಸಮಾವೇಶ: ಮುಖ್ಯ ಅತಿಥಿ: ಬಿ.ಎನ್. ಬಚ್ಚೇಗೌಡ, ಆಯೋಜನೆ: ಇಪಿಎಸ್ 95–ಎನ್‌ಎಸಿ ಕರ್ನಾಟಕ, ಸ್ಥಳ: ರಾಮ ಮಂದಿರ ಬಯಲು, ರಾಜಾಜಿನಗರ, ಬೆಳಿಗ್ಗೆ 10

ಸಂಗೀತ ಕಾರ್ಯಕ್ರಮ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನ: ಕೇದಾರ್ ಕುಲ್ಕರ್ಣಿ, ಪಕ್ಕವಾದ್ಯ: ಸೂರ್ಯ ಉಪಾಧ್ಯಾಯ, ದತ್ತಾತ್ರೇಯ ಜೋಶಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಲಕ್ಷ್ಮೀ ವರುಣ್, ಪಕ್ಕವಾದ್ಯ: ಕಾರ್ತಿಕೇಯ, ಬಿ.ಆರ್. ಶ್ರೀನಿವಾಸ್, ಸುಗಮ ಸಂಗೀತ ಗಾಯನ: ಶ್ರಾವ್ಯಾ ಮತ್ತು ತಂಡ, ಆಯೋಜನೆ: ಪೂರ್ವಿ ಸಂಗೀತ ಅಕಾಡೆಮಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

‘ಚಿಟ್ ಫಂಡ್ ಉತ್ಸವ’: ಮುಖ್ಯ ಅತಿಥಿ: ಕೆ. ರಾಜೇಂದ್ರ, ಮುಖ್ಯ ಭಾಷಣ: ಶೈಲಜಾ ಕಿರಣ್, ಆಯೋಜನೆ: ಕರ್ನಾಟಕ ಚಿಟ್‌ಸ್ಪರ್ಸ್ ಅಸೋಸಿಯೇಷನ್, ಸ್ಥಳ: ಆರ್.ಜಿ. ರಾಯಲ್ ಹೋಟೆಲ್, ಮಹಾಲಕ್ಷ್ಮಿ ಲೇಔಟ್, ಬೆಳಿಗ್ಗೆ 10

ಘಟಿಕೋತ್ಸವ: ಮುಖ್ಯ ಅತಿಥಿ: ಕೆ. ಶ್ರೀನಿವಾಸನ್, ಗೌರವ ಅತಿಥಿಗಳು: ಗೌತಮ್ ಗಾನ್, ಎನ್. ರಾಮಾನುಜ, ಆಯೋಜನೆ: ಎಂ. ಪಿ.ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಸ್ಥಳ: ಟಿಟಿಡಿ ಅಡಿಟೋರಿಯಂ, ತಿರುಮಲ ತಿರುಪತಿ ದೇವಸ್ಥಾನ, ಮಲ್ಲೇಶ್ವರ, ಬೆಳಿಗ್ಗೆ 10

ಕಾರ್ಯಚಟುವಟಿಕೆಗಳ ಉದ್ಘಾಟನೆ ಸಮಾರಂಭ: ಉದ್ಘಾಟನೆ: ಎಸ್. ಬಾಲಾಜಿ, ಅಧ್ಯಕ್ಷತೆ: ರಾಜು ಗುಂಡಾಪುರ, ಪ್ರಾಸ್ತಾವಿಕ ನುಡಿ: ಅಜಿತ್ ಕುಮಾರ್, ಆಯೋಜನೆ: ಕನ್ನಡ ಜಾನಪದ ಪರಿಷತ್, ಸ್ಥಳ: ಮುನೇಶ್ವರಸ್ವಾಮಿ ಕಲ್ಯಾಣ ಮಂಟಪ, ಆವಲಹಳ್ಳಿ, ಬೆಳಿಗ್ಗೆ 10.30

ಮುಜರಾಯಿ ದೇವಸ್ಥಾನಗಳಲ್ಲಿ 65 ವರ್ಷ ಮೇಲ್ಪಟ್ಟವರಿಗೆ ನೇರ ವಿಶೇಷ ದರ್ಶನ ವ್ಯವಸ್ಥೆ ಅನುಷ್ಠಾನ ಕಾರ್ಯಕ್ರಮ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಆಯೋಜನೆ: ಮುಜರಾಯಿ ಇಲಾಖೆ, ಸ್ಥಳ: ದೊಡ್ಡ ಗಣಪತಿ ದೇವಸ್ಥಾನ, ಬಸವನಗುಡಿ, ಬೆಳಿಗ್ಗೆ 10.45

4ನೇ ವಾರ್ಷಿಕ ಮಹಾಸಭೆ: ಉಪಸ್ಥಿತಿ: ಸುಜಯನಿಧಿ ತೀರ್ಥರು, ವಿದ್ಯಪ್ರಸನ್ನ ತೀರ್ಥರು, ಮುಖ್ಯ ಅತಿಥಿಗಳು: ಸತ್ಯಧ್ಯಾನಾಚಾರ್ಯ ಕಟ್ಟಿ, ವಿದ್ಯಾಧೀಶಾಚಾರ್ಯ ಗುತ್ತಲ, ಅಧ್ಯಕ್ಷತೆ: ಮುರಳೀಧರ್, ಬೆಳಿಗ್ಗೆ 8.45ರಿಂದ, ವಿಪ್ರ ನೂತನ ಸಚಿವರು ಮತ್ತು ಶಾಸಕರಿಗೆ ಅಭಿನಂದನಾ ಸಮಾರಂಭ, ಆಯೋಜನೆ: ಅಖಿಲ ಕರ್ನಾಟಕ ಮಾಧ್ವ ಮಹಾಸಭಾ, ಬೆಳಿಗ್ಗೆ 11

ಪಿಯುಸಿಯಲ್ಲಿ ಅಧಿಕ ಅಂಕ ಪಡೆದವರಿಗೆ ಸನ್ಮಾನ: ಮುಖ್ಯ ಅತಿಥಿ: ನ್ಯಾ.ಬಿ.ಎಸ್. ಪಾಟೀಲ, ಆಯೋಜನೆ ಹಾಗೂ ಸ್ಥಳ: ಸಮರ್ಥನಂ ಅಂಗವಿಕಲರ ಸಂಸ್ಥೆ, ಎಚ್.ಎಸ್.ಆರ್. ಲೇಔಟ್, ಬೆಳಿಗ್ಗೆ 11



ಭರತನಾಟ್ಯ ರಂಗಪ್ರವೇಶ: ಪ್ರಣವಿ ಬೇರಿಕೆ, ಅತಿಥಿಗಳು: ಅನುರಾಧಾ ವಿಕ್ರಾಂತ್, ನಂದಿನಿ ಮೆಹ್ತಾ, ಆಯೋಜನೆ: ನೃತ್ಯಕಲಾ ಗುರುಕುಲ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬಡಾವಣೆ, ಸಂಜೆ 6

ಪ್ರಣವಿ ಬೇರಿಕೆ

ಸರ್ವಸದಸ್ಯರ ವಾರ್ಷಿಕ ಸಭೆ: ಆಯೋಜನೆ: ರಾಷ್ಟ್ರೋತ್ಥಾನ ಪರಿಷತ್, ಸ್ಥಳ: ಕೇಶವಶಿಲ್ಪ, ಚಾಮರಾಜಪೇಟೆ, ಬೆಳಿಗ್ಗೆ 11

ತಿಂಗಳ ಮಾತುಕತೆ: ‘ಪುಸ್ತಕ ಮತ್ತು ಎನ್‌ಇಪಿ 2022’ರ ಬಗ್ಗೆ ಚರ್ಚೆ, ಸಂವಾದ, ಪ್ರಸ್ತಾವನೆ: ಕೆ.ಎಸ್. ವಿಮಲಾ, ಪುಸ್ತಕದ ಬಗ್ಗೆ: ಪ್ರೊ. ವಿನುತಾ, ‘ಎನ್‌ಇಪಿ ಸಾಧಕ–ಬಾಧಕಗಳು’: ಎಚ್.ಡಿ. ಉಮಾಶಂಕರ್, ಪ್ರತಿಕ್ರಿಯೆ: ರವಿಕುಮಾರ್ ಬಾಗಿ, ವಿ.ಎಲ್. ನರಸಿಂಹಮೂರ್ತಿ, ಭೀಮನಗೌಡ ಸುಂಕೇಶ್ವರಹಾಳ, ಉಪಸ್ಥಿತಿ: ಮಮತಾ, ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಆಯೋಜನೆ: ಪುಸ್ತಕ ಪ್ರೀತಿ, ಸ್ಥಳ: ಪುಸ್ತಕ ಪ್ರೀತಿ ಮಳಿಗೆ, ಎರಡನೇ ಮಹಡಿ, ನೆಟ್ಟಕಲ್ಲಪ್ಪ ವೃತ್ತ, ಬಸವನಗುಡಿ, ಮಧ್ಯಾಹ್ನ 3.30

ಎರಡು ಕೃತಿಗಳ ಲೋಕಾರ್ಪಣೆ: ‘ಹರಿಭಕ್ತಿಸಾರ ಚಂದ್ರಿಕೆ’, ಕೃತಿ ಬಿಡುಗಡೆ: ಸತ್ಯನಾರಾಯಣಾಚಾರ್ಯ, ‘ಷಾಷ್ಟಿಕ ವಂಶದ ಸಂಕ್ಷಿಪ್ತ ಚರಿತ್ರೆ ಮತ್ತು ಪಿತೃಋಣ’, ಕೃತಿ ಬಿಡುಗಡೆ: ಎ. ಹರಿದಾಸಭಟ್, ಸಭಾ ಅಧ್ಯಕ್ಷತೆ: 108 ಸುಜಯನಿಧಿ ತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 4

ಆನ್ ಇಂಡಿಯಾ ಕೆ ಪಾಪ್ ಸ್ಪರ್ಧೆ: ಹಾಡು ಹಾಗೂ ನೃತ್ಯ, ಆಯೋಜನೆ: ಕೊರಿಯನ್ ಕಲ್ಚರಲ್ ಸೆಂಟರ್ ಇಂಡಿಯಾ, ಸ್ಥಳ: ಕೃಷ್ಣದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ಮಲ್ಲೇಶ್ವರ, ಸಂಜೆ 4

ನೂತನ ವಿಪ್ರ ಶಾಸಕರಿಗೆ ಅಭಿನಂದನೆ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅಧ್ಯಕ್ಷತೆ: ಅಶೋಕ ಹಾರನಹಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ಆಚಾರ್ಯ ಪಾಠಶಾಲೆ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 4.30

ಕೊಂಡಜ್ಜಿ ಕೆ. ವೆಂಕಟೇಶ್ ಅವರ ‘ಅಮಾತ್ಯ ಲಕ್ಷ್ಮೀಧರ’ ಕೃತಿ ಅವಲೋಕನ: ಉದ್ಘಾಟನೆ: ಮಹೇಶ ಜೋಶಿ, ಪ್ರಸ್ತಾವನೆ: ಮಹಾಬಲಮೂರ್ತಿ ಕೊಡ್ಲೆಕೆರೆ, ಮುಖ್ಯ ಅತಿಥಿ: ಸದ್ಯೋಜಾತ ಭಟ್, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ, ಆಯೋಜನೆ: ಕೊಂಡಜ್ಜಿ ಮುದ್ರಣ ಮತ್ತು ಪ್ರಕಾಶನ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಸಂಜೆ 5

‘ಗ್ಲೋಬಲ್ ಮಾಲ್’ ಅನಾವರಣ: ಅತಿಥಿಗಳು: ಸುದೀಪ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ರವಿಚಂದ್ರನ್, ಸ್ಥಳ: ಮೈಸೂರು ರಸ್ತೆ, ಪಂತರಪಾಳ್ಯ, ನಾಯಂಡಹಳ್ಳಿ ಮೆಟ್ರೊ ನಿಲ್ದಾಣದ ಬಳಿ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಸಿರಿ ಎಚ್.ಎಸ್., ಸಾನ್ವಿ ಎಚ್.ಎಸ್., ಆಯೋಜನೆ: ಶಿವಪ್ರಿಯ ನೃತ್ಯ ಶಾಲೆ, ಸ್ಥಳ: ಪತ್ತಿ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5.30

ರಾಷ್ಟ್ರೀಯ ಕೈಮಗ್ಗ ಎಕ್ಸ್‌ಪೊ: ಮುಖ್ಯ ಅತಿಥಿ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಪಾಮಿ ಬ್ರಹ್ಮ, ಆಯೋಜನೆ: ಬ್ರಾಫ್ಟ್, ಸ್ಥಳ: ಶುಭಾ ಕನ್ವೆನ್ಷನ್, ಜೆ.ಪಿ.ನಗರ 7ನೇ ಹಂತ, ಸಂಜೆ 6

20ನೇ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಹಂ.ಪ. ನಾಗರಾಜಯ್ಯ, ಮಲ್ಲಿಕಾ ಘಂಟಿ, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರಶಸ್ತಿ ಪುರಸ್ಕೃತರು: ಪಿ.ಎಸ್. ಶಂಕರ್, ಕೌಶಿಕ್ ಕೂಡುರಸ್ತೆ, ಬಿ.ಎನ್. ಶ್ರೀರಾಮ, ಜಿ.ಎಚ್. ಕೃಷ್ಣಮೂರ್ತಿ, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 11

‘ಬಹುವಚನಕ್ಕೊಂದೇ ತತ್ವ’ ಕೃತಿಯ ಬಗ್ಗೆ ಲೇಖಕ ಅಜಕ್ಕಳ ಗಿರೀಶ ಭಟ್ಟ ಜತೆ ಮಾತುಕತೆ: ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು, ಸ್ಥಳ: ಕೇಶವಶಿಲ್ಪ, 3ನೇ ಮಹಡಿ, ಕೆಂಪೇಗೌಡನಗರ, ಸಂಜೆ 4.30



ಅಜಕ್ಕಳ ಗಿರೀಶ ಭಟ್ಟ

ಚಕ್ರವರ್ತಿ ಮಧುಸೂದನ್ ಅವರ ‘ಕಲಿಕೆಗೆ ಕೊನೆಯಿಲ್ಲ’ ಕೃತಿ ಬಿಡುಗಡೆ: ವೇಣುಗೋಪಾಲ ಚಕ್ರವರ್ತಿ, ಕೃತಿಯ ಬಗ್ಗೆ: ವೈ.ವಿ. ಗುಂಡೂರಾವ್, ಉಪಸ್ಥಿತಿ: ಸಂಪಿಗೆ ತೋಂಟದಾರ್ಯ, ಸಿ. ವೀರಣ್ಣ, ಎನ್. ರಾಮನಾಥ್, ಆಯೋಜನೆ: ತೇಜು ಪಬ್ಲಿಕೇಷನ್ಸ್, ಸ್ಥಳ: ಡಾ.ಸಿ. ಅಶ್ವತ್ಥ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 6

ಸಾಹಿತ್ಯ ಸಂಜೆ ವಿಶೇಷ ಉಪನ್ಯಾಸ: ‘ಗ್ರೀಕ್ ಸಾಹಿತ್ಯ ಹಾಗೂ ನಾಟಕಗಳು ತತ್ವ ಮತ್ತು ಪ್ರಯೋಗ’, ಉಪನ್ಯಾಸಕರು: ಶ್ರೀನಿವಾಸ ಪ್ರಭು, ಆಯೋಜನೆ: ಸುಚಿತ್ರ, ಸ್ಥಳ: ಭಾನು ನೆನಪಿನ ನಾಣಿ ಅಂಗಳ, ಸುಚಿತ್ರ ಪೂರ್ವಂಕರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 6.30

‘ಜೆಡಿಎಸ್ ಜತೆ ಮೈತ್ರಿ ಸಾಧ್ಯತೆ’

ರಾಮನಗರ: ‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜತೆ ಬಿಜೆಪಿ ಮೈತ್ರಿ ಆಗಬಹುದು ಅಂದುಕೊಂಡಿದ್ದೇನೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ ಹೇಳಿದರು.

ನಗರದಲ್ಲಿ ಶುಕ್ರವಾರ ನಡೆದ ಜಿಲ್ಲಾ ಬಿಜೆಪಿ ಕಾರ್ಯಕರ್ತರ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಬಾರಿ ಕಳೆದ ಸಲಕ್ಕಿಂತಲೂ ಹೆಚ್ಚು ಮಂದಿಯನ್ನು ಗೆಲ್ಲಿಸಬೇಕಿದೆ. ಹಾಗಾಗಿ, ಒಂದಿಷ್ಟು ಬದಲಾವಣೆ ಜತೆಗೆ ಚುನಾವಣೆ ಎದುರಿಸುತ್ತೇವೆ’ ಎಂದರು.


‘ಮೈತ್ರಿ ವಿಷಯ ಹಾಗೂ ಅಭ್ಯರ್ಥಿಗಳ ಆಯ್ಕೆ ಕುರಿತು ಪಕ್ಷದ ಹೈಕಮಾಂಡ್ ಚರ್ಚಿಸಿ ತೀರ್ಮಾನ ಕೈಗೊಳ್ಳಲಿದೆ. ಅವರ ನಿರ್ಧಾರಕ್ಕೆ ಬದ್ಧರಾಗಿ ಕೆಲಸ ಮಾಡಬೇಕಿದೆ. ವರಿಷ್ಠರು ಸೂಚನೆ ನೀಡಿದರೆ, ಚುನಾವಣೆಯಲ್ಲಿ ಸ್ಪರ್ಧೆ ಮಾಡುವೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಶಾಲೆಗಳ ದುರಸ್ತಿಗೆ ಪ್ರತ್ಯೇಕ ಅನುದಾನ ಮೀಸಲಿಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳನ್ನು ಉಳಿಸುವುದಕ್ಕೆ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ವಿಶೇಷ ಕಾರ್ಯಕ್ರಮ ರೂಪಿಸಿ ಅನುದಾನ ಮೀಸಲಿಡಬೇಕು ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್. ದೊರೆಸ್ವಾಮಿ ಆಗ್ರಹಿಸಿದ್ದಾರೆ.

‘ಸ್ವಾತಂತ್ರ್ಯ ಬಂದು 75 ವರ್ಷವಾಗಿದೆ. ಆದರೂ ಸರ್ಕಾರಿ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಭಾರತವನ್ನು ಜ್ಞಾನ ಕೇಂದ್ರಿತ ರಾಷ್ಟ್ರವನ್ನಾಗಿ ಮಾಡುವ ಕನಸಿಗೆ ಪ್ರಬಲ ಸವಾಲುಗಳಿವೆ. ‘ಸರ್ಕಾರಿ ಶಾಲೆಗಳ ದುಃಸ್ಥಿತಿಯು ಅತ್ಯಂತ ಆಘಾತಕಾರಿ’ ಎಂದು ನ್ಯಾಯ ಪೀಠವು ಅವಲೋಕನ ಮಾಡಿದೆ. ಶಾಲಾ ಶಿಕ್ಷಣ ಸಮಾಜ ನಿರ್ಮಾಣದ ಆಧಾರ ಸ್ತಂಭ. ಅದರ ಬಗ್ಗೆ ಎಲ್ಲ ವರ್ಗಗಳು ಕಾಳಜಿ ವಹಿಸಿ ಪೋಷಿಸಬೇಕು’ ಎಂದು ಹೇಳಿದ್ದಾರೆ.



ದೊರೆಸ್ವಾಮಿ


‘ಶಾಲಾ ದತ್ತು ಯೋಜನೆ ಅವಶ್ಯ. ನಾನು ಶಿಕ್ಷಣ ಇಲಾಖೆ ಸಲಹೆಗಾರನಾಗಿದ್ದ ಅವಧಿಯಲ್ಲಿ ಎರಡು ಸಾವಿರ ಸರ್ಕಾರಿ ಶಾಲೆಗಳನ್ನು ದಾನಿಗಳು ದತ್ತು ಪಡೆದುಕೊಂಡಿದ್ದರು. ಕೋವಿಡ್‌ನಿಂದ ಈ ಯೋಜನೆಗೆ ಹಿನ್ನಡೆ ಆಗಿತ್ತು. ಈ ಯೋಜನೆ ಮತ್ತೆ ಮುಂದುವರಿಯಬೇಕು. ಈಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ 30 ಸಾವಿರ ಶಾಲೆಗಳ ನಿರ್ಮಾಣ ಹಾಗೂ ದುರಸ್ತಿಗೆ ಪ್ರಸಕ್ತ ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಮೀಸಲಿಡುವಂತೆ ಕೋರಿದ್ದೇನೆ. ಮುಖ್ಯಮಂತ್ರಿಯೂ ಭರವಸೆ ನೀಡಿದ್ದಾರೆ’ ಎಂದು ಹೇಳಿದರು.

ಒಡಲಾಳ ನಾಟಕೋತ್ಸವ ನಾಳೆಯಿಂದ

ಬೆಂಗಳೂರು: ಕರ್ನಾಟಕ ಬೀದಿ ನಾಟಕ ಅಕಾಡೆಮಿಯಿಂದ ಸಿಜಿಕೆ ಬೀದಿರಂಗ ದಿನಾಚರಣೆಯ ಪ್ರಯುಕ್ತ ಮೂರು ದಿನಗಳ ಒಡಲಾಳ ನಾಟಕೋತ್ಸವ, ಸಿಜಿಕೆ ರಂಗ ಪುರಸ್ಕಾರ ಕಾರ್ಯಕ್ರಮ ಇದೇ 25ರಿಂದ 27ರವರೆಗೆ ಜಾಲಹಳ್ಳಿ ಕುವೆಂಪು ಕಲಾಕ್ಷೇತ್ರದಲ್ಲಿ ನಡೆಯಲಿದೆ.

25ರಂದು ಸಂಜೆ 6.30ಕ್ಕೆ ರಂಗವರ್ಣ ಬೆಂಗಳೂರು ಕಲಾವಿದರು ‘ಸಂಜೀವಿನಿ’ ನಾಟಕ ಪ್ರದರ್ಶಿಸಲಿದ್ದಾರೆ. 26ರಂದು ಸಂಜೆ 6.30ಕ್ಕೆ ರೂಪಾಂತರ ತಂಡದಿಂದ ‘ಚೋಮನ ದುಡಿ’ ನಾಟಕ ಪ್ರದರ್ಶನಗೊಳ್ಳಲಿದೆ. 27ರಂದು ಸಿಜಿಕೆ ಪ್ರಶಸ್ತಿ ಪ್ರದಾನ ನಡೆಯಲಿದೆ. ರಂಗ ನಿರ್ದೇಶಕರಾದ ಕೆಎಸ್‌ಡಿಎಲ್ ಚಂದ್ರು, ಕೃಷ್ಣಮೂರ್ತಿ ಕವತಾರ್, ಶಂಕರಪ್ಪ ಕೆ.ಜೆ. ಅವರಿಗೆ ಕ್ರಮವಾಗಿ 2021, 2022 ಮತ್ತು 2023ನೇ ಸಾಲಿನ ಸಿಜಿಕೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಅಂಗಾಂಗ ಜಾರುವಿಕೆ ವಹಿಸಿ ಎಚ್ಚರಿಕೆ



ಐವತ್ತು ವರ್ಷದ ಆಸುಪಾಸಿನ ಕೆಲವು ಮಹಿಳೆಯರಲ್ಲಿ ಕಿಬ್ಬೊಟ್ಟೆಯ ಅಂಗಗಳು(ಗರ್ಭಕೋಶ, ಮೂತ್ರಕೋಶ ಹಾಗೂ ಕರುಳು) ಜಾರುವ ಪ್ರಕ್ರಿಯೆ ಸಾಮಾನ್ಯ. ಇದು ಜೀವಕ್ಕೆ ಅಪಾಯ ತರದಿದ್ದರೂ ಜೀವನದ ಗುಣಮಟ್ಟದ ಮೇಲೆ ಪರಿಣಾಮ ಬೀರಬಹುದು. ಸೂಕ್ತ ತಪಾಸಣೆ ಮಾಡಿಸಿಕೊಂಡು, ಚಿಕಿತ್ಸೆ ಪಡೆಯುವುದೊಂದೇ ಪರಿಹಾರ.

ಡಾ. ವಸುಂಧರಾ ಭೂಪತಿ

'ಡಾಕ್ಟ್ರೆ ಜನನಾಂಗದ ಹೊರಭಾಗದಲ್ಲಿ ನಿಂಬೆಹಣ್ಣಿನ ಗಾತ್ರದ ಮಾಂಸಖಂಡ ಇದ್ದಂತೆ ಅನ್ನಿಸುತ್ತದೆ. ಮೂತ್ರ ಅಥವಾ ಮಲ ವಿಸರ್ಜನೆಗೆ ಹೋದಾಗ, ಕೈಗೆ ಸಿಗುತ್ತದೆ. ಇದರಿಂದ ನನಗೆ ತುಂಬಾ ಭಯವಾಗಿದೆ. ಇದು ಗಡ್ಡೆಯೇ? ಇದಕ್ಕೆ ಚಿಕಿತ್ಸೆ ಇದೆಯೇ' ?

'ನನ್ನ ಅಮ್ಮನಿಗೆ 60 ವರ್ಷ. ಅವರಿಗೆ ದೀರ್ಘ ಕಾಲದಿಂದ ಮಲಬದ್ಧತೆ ಸಮಸ್ಯೆಯಿದೆ. ಈಗ ಅವರಿಗೆ ಮಲವಿಸರ್ಜನೆ ಮಾಡುವಾಗ, ಒತ್ತಡ ಹಾಕುವುದರಿಂದ ವಸ್ತುವೊಂದು ಹೊರಗಡೆ ಬಂದಂತೆ ಅನ್ನಿಸುತ್ತದೆ. ಅದನ್ನು ಬೆರಳಿನಿಂದ ತಳ್ಳಿದಾಗ, ಒಳಗಡೆ ಹೋಗುತ್ತದೆ. ಇದಕ್ಕೆ ಕಾರಣವೇನು? ಅಮ್ಮನಿಗೆ ಏನಾಗಿರಬಹುದು? ನಮಗೆಲ್ಲಾ ತುಂಬಾ ಯೋಚನೆ ಆಗಿದೆ. ಆತಂಕವಾಗಿದೆ..'

ಇವು ಇತ್ತೀಚೆಗೆ ಕೆಲವುಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತಿರುವ ಸಾಮಾನ್ಯ ಆರೋಗ್ಯ ಸಮಸ್ಯೆಗಳು. ಈ ರೀತಿ ಗುದದ್ವಾರ- ಯೋನಿಯಲ್ಲಿ ಹೆಚ್ಚುವರಿಯಾಗಿ ಗಡ್ಡೆ ಅಥವಾ ವಸ್ತುಗಳು ಕಾಣಿಸಿಕೊಳ್ಳುವುದನ್ನು 'ಪೆಲ್ವಿಕ್ ಆರ್ಗನ್ ಪ್ರೊಲ್ಯಾಪ್ಸ್' ಎನ್ನುತ್ತಾರೆ. ಅಂದರೆ, ಮಹಿಳೆಯರ ಕಿಬ್ಬೊಟ್ಟೆಯಲ್ಲಿರುವ ಅಂಗಗಳು(ಗರ್ಭಕೋಶ, ಮೂತ್ರಕೋಶ ಹಾಗೂ ಕರುಳು) ಜಾರುವ ಪ್ರಕ್ರಿಯೆ. ಇದರಲ್ಲಿ ಗರ್ಭಕೋಶ ಜಾರುವಿಕೆಯನ್ನು 'ಯೂಟರೈನ್ ಪ್ರೋಲ್ಯಾಪ್ಸ್' ಎಂದೂ ಕರೆಯುತ್ತಾರೆ.

ಗರ್ಭಕೋಶ ಜಾರುವಿಕೆ, ಋತುಚಕ್ರಬಂಧಕ್ಕೆ(ಮೆನೊಪಾಸ್) ಹತ್ತಿರುವಿರುವಂಥ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಅನಾರೋಗ್ಯ ಸ್ಥಿತಿ. ಜಾಗತಿಕ ಅಂಕಿ ಅಂಶಗಳ ಪ್ರಕಾರ ಹೆರಿಗೆಯ ನಂತರ, 50 ವರ್ಷಕ್ಕಿಂತ ಹಿರಿಯ ಮಹಿಳೆಯರಲ್ಲಿ ಅರ್ಧದಷ್ಟು ಮಂದಿ ಪೆಲ್ವಿಕ್ ಆರ್ಗನ್ ಪ್ರೊಲ್ಯಾಪ್ಸ್‌ನ ಕೆಲವು ಲಕ್ಷಣಗಳನ್ನು ಹೊಂದಿರುತ್ತಾರೆ ಹಾಗೂ 80 ವರ್ಷ ವಯಸ್ಸಿನ ಹೊತ್ತಿಗೆ ಪ್ರತಿ ಹತ್ತರಲ್ಲಿ ಒಬ್ಬರು ಮಹಿಳೆಗೆ ಗರ್ಭಕೋಶ ಜಾರುವಿಕೆಯ ಸಮಸ್ಯೆಗೆ ಶಸ್ತ್ರಚಿಕಿತ್ಸೆಯ ಅಗತ್ಯ ಬೀಳುತ್ತದೆ.

ಆರಂಭಿಕ ಹಂತಗಳಲ್ಲಿ ಇದನ್ನು ಪತ್ತೆ ಮಾಡಿದರೆ ತುಂಬಾ ಸರಳವಾಗಿ ಚಿಕಿತ್ಸೆ ನೀಡಬಹುದು.

ಆನುವಂಶೀಯವಲ್ಲ..

ಗರ್ಭಕೋಶ ಜಾರುವಿಕೆ ಆನುವಂಶೀಯವಲ್ಲ. ಆನುವಂಶೀಯ ಎಂಬುದು ತಪ್ಪು ತಿಳಿವಳಿಕೆ. ಪದೇ ಪದೇ ಗರ್ಭಪಾತಗಳು ಆಗುವುದು, ಮೇಲಿಂದ ಮೇಲೆ ಹೆರಿಗೆ ಆಗುವುದು, ಉದರದ ಭಾಗಕ್ಕೆ ಪೆಟ್ಟು ಬೀಳುವುದು, ಬೊಜ್ಜು ಇರುವಿಕೆ ಮುಂತಾದ ಕಾರಣಗಳಿಂದ ಗರ್ಭಕೋಶ ತನ್ನ ಸ್ಥಾನದಿಂದ ಕೆಳಗಡೆ ಜಾರಬಹುದು.

ಶಸ್ತ್ರಚಿಕಿತ್ಸೆ ಅವಶ್ಯವೇ?

ಗರ್ಭಕೋಶ ಜಾರಿದಾಗ ಮಾತ್ರ ಶಸ್ತ್ರಚಿಕಿತ್ಸೆ ಅವಶ್ಯಕ ಇರುತ್ತದೆ. ಆದರೆ, ಯಾವುದೇ ಸಮಸ್ಯೆ ಇಲ್ಲದಿದ್ದರೆ, ಗರ್ಭಕೋಶ ಆರೋಗ್ಯ ಸ್ಥಿತಿಯಲ್ಲಿ ಇರುವಾಗ, ಗರ್ಭಕೋಶದ ಕೊಯ್ತೆಗೆತ (hystrectomy) ಮಾಡುವುದು ಸಲ್ಲದು.

ಹೀಗಾಗಲು ಕಾರಣವೇನು ?

ಗರ್ಭಾವಸ್ಥೆ ಹಾಗೂ ಹೆರಿಗೆಯಿಂದ ಕಿಬ್ಬೊಟ್ಟೆ ಭಾಗದಲ್ಲಿ ಸ್ನಾಯುಗಳು ಹಾಗೂ ಲಿಗಮೆಂಟ್ಸ್ ದುರ್ಬಲವಾಗುವುದು ಸಹಜ. ಮಗುವಿನ ಗಾತ್ರ ದೊಡ್ಡದಿದ್ದರೆ, ಹೆರಿಗೆ ಸಂದರ್ಭದಲ್ಲಿ ಇಕ್ಕಳದಂತಹ ಉಪಕರಣಗಳನ್ನು (ಫಾರ್ಸೆಪ್ಸ್) ಬಳಸಿದ್ದರೆ ಹೀಗಾಗುವ ಸಾಧ್ಯತೆ ಇರುತ್ತದೆ.

ಮಾತ್ರವಲ್ಲ, ಹೆರಿಗೆಗೆ ದೀರ್ಘ ಸಮಯ ತೆಗೆದುಕೊಂಡಿದ್ದಲ್ಲಿ, ಮಹಿಳೆಯೊಬ್ಬಳಿಗೆ ಹೆಚ್ಚು ಹೆರಿಗೆಗಳಾಗಿದ್ದರೂ, ಹೆರಿಗೆಗಳ ಅಂತರ ಎರಡು ವರ್ಷಗಳಿಗಿಂತ ಕಡಿಮೆ ಇದ್ದಲ್ಲಿ ಮತ್ತು ಪದೇ ಪದೇ ಗರ್ಭಪಾತಗಳಾಗುತ್ತಿದ್ದರೆ, ಅತಿಯಾದ ತೂಕ ಇರುವವರಿಗೂ ಹೀಗಾಗಬಹುದು.

ಮಲಬದ್ಧತೆ, ಬಹಳ ದಿನಗಳಿಂದ ಕಫದ ಜೊತೆಗೆ ಕೆಮ್ಮು ಇದ್ದರೆ, ಹೆಚ್ಚು ತೂಕವಿರುವ ವಸ್ತುವನ್ನು ಎತ್ತಿದಾಗ ಹೊಟ್ಟೆ ಮೇಲೆ ಭಾರ ಬಿದ್ದು ಒಳ ಅಂಗಾಂಗಗಳು ಜಾರಬಹುದು. ಗರ್ಭಕೋಶದ ನಿವಾರಣೆಯ ಬಳಿಕ ಇತರ ಅಂಗಗಳಿಗೆ ಇದ್ದ ಆಸರೆ ತಪ್ಪಿ ಬೇರೆ ಅಂಗಗಳು ಕೆಳಕ್ಕೆ ಜಾರಬಹುದು. ಹೀಗೆ ಗರ್ಭಕೋಶ, ಮೂತ್ರಕೋಶ, ಮೂತ್ರನಾಳ, ದೊಡ್ಡ ಕರುಳಿನ ಕೆಳಭಾಗ ಗುದದ್ವಾರ ಇತ್ಯಾದಿ ಬಹು ಅಂಗಗಳು ಒಟ್ಟಾಗಿ ಜಾರುವ ಅನಾರೋಗ್ಯ ಸ್ಥಿತಿಯನ್ನು ಮಲ್ಟಿ ಆರ್ಗನ್ ಪ್ರೊಲ್ಯಾಪ್ಸ್ ಅಥವಾ ಬಹು ಅಂಗ ಜಾರುವಿಕೆ ಎನ್ನುತ್ತಾರೆ. ಕೆಲವರಿಗೆ ಈ ತೊಂದರೆ ಇದ್ದರೂ, ಅದರ ಲಕ್ಷಣಗಳು ಅವರ ಗಮನಕ್ಕೆ ಬಂದಿರುವುದಿಲ್ಲ.

ಗರ್ಭಕೋಶ ಜಾರುವಿಕೆ

ಯೋನಿಯ ಮೇಲುಭಾಗದಲ್ಲಿ ಗರ್ಭಕೋಶವನ್ನು ಕಟ್ಟಿ ಹಿಡಿಯುವ ಬಂಧಕ ಅಂಗಾಶಗಳ ಗುಂಪೊಂದು ದುರ್ಬಲ ಗೊಂಡಾಗ ಗರ್ಭಕೋಶ ಕೆಳಜಾರುತ್ತದೆ. ಇದರ ಫಲವಾಗಿ ಯೋನಿಯ ಎದುರು ಮತ್ತು ಹಿಂಭಾಗದ ಗೋಡೆಗಳೆರಡೂ ದುರ್ಬಲಗೊಳ್ಳುತ್ತವೆ. ಗರ್ಭಕೋಶದ ಮುಂಭಾಗವನ್ನು ಗರ್ಭಕೋಶದ ಕಂಠ (ಸರ್ವಿಕ್ಸ್) ಎಂದು ಕರೆಯಲಾಗುತ್ತದೆ. ಈ ಸರ್ವಿಕ್ಸ್‌ನ ಸ್ಥಾನವನ್ನಾಧರಿಸಿ, ಜಾರುವಿಕೆ ಎಷ್ಟು ತೀವ್ರವಾಗಿದೆ ಎಂದು ವಿಶ್ಲೇಷಿಸಲಾಗುತ್ತದೆ.


ಮುಂದುವರಿದ ಹಂತಗಳಲ್ಲಿ ಜಾರುವಿಕೆ ಪತ್ತೆಯಾದಾಗ ಸಂಕೀರ್ಣ ಸಮಸ್ಯೆಗಳನ್ನು ತಡೆಯಲು ಮತ್ತು ಅಂಗಗಳ ಕಾರ್ಯಚಟುವಟಿಕೆಗಳನ್ನು ಮೊದಲಿನಂತೆ ಮಾಡಲು ರೋಗಿಗಳನ್ನು ತಜ್ಞ ಆರೋಗ್ಯ ಸೌಲಭ್ಯಗಳುಳ್ಳ ಆಸ್ಪತ್ರೆಗಳಿಗೆ ಕಳುಹಿಸಬೇಕು.

ಯಾವುದೇ ಲಕ್ಷಣಗಳು ಇರದಿದ್ದರೂ ಯೋನಿ ಪರೀಕ್ಷೆಯ ಮೂಲಕ ಒಳ ಅಂಗಗಳ ಜಾರುವಿಕೆಯನ್ನು ಕಂಡುಕೊಳ್ಳಬಹುದು. ಕೆಳಗೆ ಏನೋ ಬಂದಂತೆ ಅನಿಸಬಹುದು. ಕೈಗೆ ತಗುಲಬಹುದು. ಅತಿಯಾಗಿ ಬೆನ್ನುನೋವು ಬರಬಹುದು. ಕೆಳಗೆ ಎಳೆದಂತೆ, ಭಾರವಾದಂತೆ ಅನಿಸಬಹುದು. ಒಮ್ಮೊಮ್ಮೆ ಅದು ಪೂರ್ತಿ ಹೊರಬಂದು ಕಾಣಿಸಬಹುದು. ಹಾಗೇನಾದರೂ ಕಂಡುಬಂದರೆ ವೈದ್ಯರನ್ನು ಭೇಟಿಯಾಗಿ ಚಿಕಿತ್ಸೆ ಪಡೆದುಕೊಳ್ಳಬೇಕು. ತುಂಬಾ ದಿನ ಹಾಗೆಯೇ ಬಿಟ್ಟರೆ ಅಲ್ಸರ್ ಉಂಟಾಗಿ ಅಲ್ಲಿ ಸೋಂಕು ತಗುಲಬಹುದು.

ಪರಿಹಾರವೇನು ?

ಜೀವನಶೈಲಿ ಬದಲಾವಣೆ ಮಾಡಿಕೊಳ್ಳುವುದು, ದೇಹತೂಕ ಹೆಚ್ಚಿಗೆ ಇದ್ದರೆ ಇಳಿಸಿಕೊಳ್ಳಬೇಕು. ವ್ಯಾಯಾಮಗಳ ಮೂಲಕ ಕಿಬ್ಬೊಟ್ಟೆ ಭಾಗಗಳ ಲಿಗಮೆಂಟ್ಸ್ ಮತ್ತು ಸ್ನಾಯುಗಳ ಬಲವರ್ಧನೆಗೊಳಿಸುವುದು. ವೈದ್ಯರು, ವೆಜೈನಲ್ ಹಾರ್ಮೋನು ಕ್ರೀಮು, ಮಾತ್ರೆ ಬಳಸಲು ಸೂಚಿಸುತ್ತಾರೆ. ಇದರಿಂದ ಲಿಗಮೆಂಟ್, ಸ್ನಾಯುಗಳ ಬಲವರ್ಧನೆಗೆ ನೆರವಾಗುತ್ತದೆ. ಕೆಮ್ಮು ಮತ್ತು ಕಫ ಇದ್ದರೆ ಅದಕ್ಕೆ ಚಿಕಿತ್ಸೆ ಬೇಕಾಗುತ್ತದೆ. ರಿಂಗ್ ಮಾದರಿಯ ಪೇಸರಿ ಎಂಬ ಸಾಧನವನ್ನು ಅಳವಡಿಸಿ ತಾತ್ಕಾಲಿಕ ಪರಿಹಾರ ಒದಗಿಸುತ್ತಾರೆ. ಜೊತೆಗೆ ಯಾವ ಅಂಗ ಅಥವಾ ಅಂಗಗಳು ಎಷ್ಟರಮಟ್ಟಿಗೆ ಜಾರಿವೆ ಎನ್ನುವುದನ್ನು ಖಚಿತಪಡಿಸಿ ಕೊಂಡು ಕೆಲವು ಚಿಕಿತ್ಸಾ ಉಪಾಯಗಳನ್ನು ಅನುಸರಿಸಲಾಗುತ್ತದೆ. ಏನೂ ಪರಿಹಾರ ಮಾಡಿಕೊಳ್ಳದೇ ಇದ್ದರೆ ಸಮಸ್ಯೆ ಹಾಗೆಯೇ ಮುಂದುವರಿಯಬಹುದು ಅಥವಾ ಪರಿಸ್ಥಿತಿ ಇನ್ನೂ ಹದಗೆಡಬಹುದು.

ಕಿಬ್ಬೊಟ್ಟೆಯ ಒಳ ಅಂಗಗಳ ಜಾರುವಿಕೆ ಜೀವಕ್ಕೆ ಅಪಾಯ ತರದೇ ಇದ್ದರೂ ಜೀವನದ ಗುಣಮಟ್ಟದ ಮೇಲೆ ಮಾತ್ರ ಖಂಡಿತ ಪರಿಣಾಮ ಬೀರಬಹುದು. ❖



ಮಾವಿನ ಹಣ್ಣಿನ ಮಜಬೂತಾದ ಡೆಸರ್ಟ್

ನಳಪಾಕ

ಮಾವಿನ ಹಣ್ಣಿನಲ್ಲಿ ಜ್ಯೂಸ್, ಸೀಕರಣೆ, ಸಲಾಡ್, ಗೊಜ್ಜು.. ಇಂಥ ಖಾದ್ಯಗಳನ್ನು ಮಾಡುವುದು ಸಹಜ. ಆದರೆ, ಕೇಕ್, ಡೆಸರ್ಟ್, ಮೂಸ್, ಪುಡ್ಡಿಂಗ್‌ನಂತಹ ವಿಶೇಷ ತಿನಿಸುಗಳನ್ನೂ ಮಾಡಬಹುದು ಎನ್ನುತ್ತಾರೆ ಶಿವಮೊಗ್ಗದ ಪ್ರಭಾ ಪಿ. ಶಾಸ್ತ್ರಿ. ಬರಿ ಹೇಳುವುದಲ್ಲ, ಆ ತಿನಿಸುಗಳನ್ನು ತಯಾರಿಸುವ ರೆಸಿಪಿಗಳನ್ನೂ ಇಲ್ಲಿ ಪರಿಚಯಿಸಿದ್ದಾರೆ.

ಮಾವಿನ ಹಣ್ಣಿನ ಪುಡ್ಡಿಂಗ್

ಬೇಕಾಗುವ ಸಾಮಗ್ರಿ: ಹಾಲು-1 ಕಪ್, ಕಾರ್ನ್‌ಫ್ಲೋರ್-3 ಚಮಚ, ಸಕ್ಕರೆ-2 ಚಮಚ, ಮಾವಿನಹಣ್ಣು-1

ಮಾಡುವ ವಿಧಾನ: ಮಾವಿನ ಹಣ್ಣನ್ನು ಸಿಪ್ಪೆ ತೆಗೆದು ಹೆಚ್ಚಿ ಮಿಕ್ಸಿ ಜಾರಿಗೆ ಹಾಕಿ, ಸಕ್ಕರೆ ಹಾಕಿ ನುಣ್ಣಗೆ ರುಬ್ಬಿಕೊಂಡು ದಪ್ಪ ತಳದ ಪಾತ್ರೆಗೆ ಹಾಕಿ ಅರ್ಧ ಕಪ್ ಹಾಲು ಹಾಕಿ ಒಲೆಯ ಮೇಲೆ ಇಟ್ಟು ಮಗುಚುತ್ತಾ ಇರಿ. ಉಳಿದ ಹಾಲಿಗೆ ಕಾರ್ನ್‌ಫ್ಲೋರ್ ಹಾಕುತ್ತಾ ಕದಡುತ್ತಿರಿ. ಮತ್ತೆ ಮಗುಚಿ. ಅದು ಗಟ್ಟಿಯಾಗುತ್ತಾ ಬಂದಾಗ ಒಲೆಮೇಲಿಂದ ಇಳಿಸಿ. ತಣ್ಣಗಾದ ಮೇಲೆ ಬೌಲ್‌ಗೆ ಹಾಕಿ. ಅದನ್ನು ಎರಡು ಗಂಟೆ ಫ್ರಿಜ್‌ನಲ್ಲಿ ಇಟ್ಟು ತೆಗೆಯಿರಿ. ಮಾವಿನ ಪುಡ್ಡಿಂಗ್ ತಿನ್ನಲು ರೆಡಿ.



ಮಾವಿನಹಣ್ಣಿನ ಕೇಕ್

ಬೇಕಾಗುವ ಸಾಮಗ್ರಿಗಳು: ಮಾವಿನಹಣ್ಣಿನ ಪಲ್ಪ್ 1ಕಪ್, ಸಕ್ಕರೆ ಕಾಲು ಕಪ್, ಎಣ್ಣೆ ಕಾಲು ಕಪ್, ಹಾಲು ಅರ್ಧ ಕಪ್, ಗೋಧಿಹಿಟ್ಟು ಮುಕ್ಕಾಲು ಕಪ್, ಮೈದಾಹಿಟ್ಟು ಮುಕ್ಕಾಲು ಕಪ್, ನುಣ್ಣಗಿನ ಬಾದಾಮ್ ಪೌಡರ್ 2 ಟೇಬಲ್ ಚಮಚ, ಬೇಕಿಂಗ್ ಪೌಡರ್ ಅರ್ಧ ಟೀಚಮ, ಬೇಕಿಂಗ್ ಸೋಡಾ ಕಾಲು ಟೀ ಚಮಚ, ಸ್ವಲ್ಪ ಉಪ್ಪು.

ಮಾಡುವ ವಿಧಾನ: ಗೋದಿ ಹಿಟ್ಟು, ಬಾದಾಮ್ ಪೌಡರ್, ಬೇಕಿಂಗ್ ಸೋಡಾ, ಬೇಕಿಂಗ್ ಪೌಡರ್ ಎಲ್ಲವನ್ನೂ ಒಟ್ಟಿಗೆ ಹಾಕಿ ಜರಡಿ ಮಾಡಿ ಇಟ್ಟುಕೊಳ್ಳಬೇಕು. ಮಾವಿನ ಹಣ್ಣಿನ ಪಲ್ಪ್, ಸಕ್ಕರೆ, ಎಣ್ಣೆ, ಹಾಲು, ಹಾಕಿ ಚೆನ್ನಾಗಿ ಬೀಟ್ ಮಾಡಿಕೊಂಡು ಇದಕ್ಕೆ ಜರಡಿ ಮಾಡಿಟ್ಟ ಹಿಟ್ಟನ್ನು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ಜೊತೆಗೆ, ಕೇಕ್ ಟಿನ್ನಿಗೆ ತುಪ್ಪ ಸವರಿಡಿ. ಮಿಕ್ಸ್ ಮಾಡಿದ್ದನ್ನು ಕೇಕ್ ಟಿನ್ನಿಗೆ ಸುರಿದು ಸೆಟ್ ಮಾಡಿಕೊಳ್ಳಿ. ಓವನ್ ಪ್ರೀಹೀಟ್ ಮಾಡಿಕೊಂಡು, ಕೇಕ್ ಟಿನ್ನನ್ನು ಇಟ್ಟು, 350 ಡಿಗ್ರಿಯಲ್ಲಿ 30-33 ನಿಮಿಷ ಬೇಯಿಸಿ ತೆಗೆಯಿರಿ. ಈಗ ಮಾವಿನ ಹಣ್ಣಿನ ಕೇಕ್ ರೆಡಿ. ತಟ್ಟೆಯಲ್ಲಿರುವ ಕೇಕ್ ಬೇಕಾದ ಆಕಾರಕ್ಕೆ ಕಟ್ ಮಾಡಿ, ಸರ್ವ್ ಮಾಡಿ, ಸವಿಯಿರಿ.



ಡೆಸರ್ಟ್

ಬೇಕಾಗುವ ಸಾಮಗ್ರಿಗಳು: ಮಾವಿನ ಹಣ್ಣಿನ ಹೋಳು-1 ಬಟ್ಟಲು, ಕ್ರೀಮ್ ಅರ್ಧ ಬಟ್ಟಲು, ಸಕ್ಕರೆ -3 ಚಮಚ, ಕೇಸರಿ ಸ್ವಲ್ಪ, ಏಲಕ್ಕಿ ಪುಡಿ ಸ್ವಲ್ಪ, ಮೊಸರು-1 ಬಟ್ಟಲು, ಬಾದಾಮಿ, ಕಪ್ಪು ಒಣದ್ರಾಕ್ಷಿ, ಚೆರಿ ಹಣ್ಣು ಹೆಚ್ಚಿದ್ದು ಕಾಲು ಬಟ್ಟಲು.

ಮಾಡುವ ವಿಧಾನ: ಮೊಸರನ್ನು ಬಟ್ಟೆಯಲ್ಲಿ ಕಟ್ಟಿ ನೀರು ಬಸಿಯಲು ಇಡಬೇಕು. ಹೆಚ್ಚಿದ ಮಾವಿನ ಹಣ್ಣಿನ ಹೋಳು, ಸಕ್ಕರೆ, ಕೇಸರಿ, ಏಲಕ್ಕಿ ಪುಡಿ, ನೀರು ಬಿಸಿದ ಗಟ್ಟಿ ಮೊಸರು, ಕ್ರೀಮ್ ಎಲ್ಲವನ್ನು ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ರುಬ್ಬಿ ತೆಗೆಯಿರಿ. ಅದಕ್ಕೆ ಹೆಚ್ಚಿದ ಡ್ರೈಫ್ರೂಟ್ಸ್ ಅರ್ಧ ಭಾಗ ಹಾಕಿ. ಚೆನ್ನಾಗಿ ಕಲಸಿ ಬೌಲ್‌ನಲ್ಲಿ ಹಾಕಿ ಎರಡು ಗಂಟೆಗಳ ಕಾಲ ಫ್ರೀಜ್‌ನಲ್ಲಿ ಇಟ್ಟು ತೆಗೆಯಿರಿ. ನಂತರ ಅದಕ್ಕೆ ಉಳಿದ ಡ್ರೈಫ್ರೂಟ್ಸ್ ಹಾಕಿ ಹಾಕಿ ಅಲಂಕರಿಸಿ ಸವಿಯಿರಿ.

ಮಾವು ಮೊಮೊಸ್

ಬೇಕಾಗುವ ಸಾಮಗ್ರಿ: ಮಾವಿನ ಹಣ್ಣಿನ ಪಲ್ಪ್-1 ಕಪ್, ಅಕ್ಕಿ-1 ಕಪ್, ಬೆಲ್ಲ-ಕಾಲು ಕಪ್, ಕಾಯಿತುರಿ-1 ಕಪ್, ಏಲಕ್ಕಿ ಪುಡಿ ಸ್ವಲ್ಪ.

ಮಾಡುವ ವಿಧಾನ: ಮಾವಿನ ಹಣ್ಣಿನ ಪಲ್ಪ್, ಬೆಲ್ಲ, ಕಾಯಿ ತುರಿ ಹಾಕಿ ನೀರು ಹಾಕದೆ ರುಬ್ಬಿ ತೆಗೆದು, ಏಲಕ್ಕಿ ಪುಡಿ, ಸ್ವಲ್ಪ ಉಪ್ಪು ಹಾಕಿ ದಪ್ಪ ತಳದ ಪಾತ್ರೆಗೆ ಹಾಕಿ ಒಲೆಯ ಮೇಲೆ ಇಟ್ಟು ಗಟ್ಟಿಯಾಗುವವರೆವಿಗೂ ಮಗುಚಿ ಇಳಿಸಿ. ಅಕ್ಕಿಯನ್ನು ಎರಡು ಗಂಟೆ ನೆನಸಿಕೊಂಡು ನುಣ್ಣಗೆ ರುಬ್ಬಿ ನೀರು ದೋಸೆ ಹಿಟ್ಟಿನ ಹದಕ್ಕೆ ಇರಲಿ. ಅದನ್ನು ಒಲೆಯ ಮೇಲೆ ಇಟ್ಟು ಸ್ವಲ್ಪ ಉಪ್ಪು ಹಾಕಿ ಮಗುಚಿ. ಗಟ್ಟಿಯಾದಾಗ ಇಳಿಸಿ. ಸ್ವಲ್ಪ ಬಿಸಿ ಇರುವಾಗಲೇ ಚೆನ್ನಾಗಿ ನಾದಿ ಉಂಡೆ ಮಾಡಿಕೊಂಡು ತೆಳ್ಳಗೆ ತಟ್ಟಿ. ಅದರೊಳಗೆ ಮಾವಿನ ಹಣ್ಣಿನ ಹೂರಣ ಇಟ್ಟು ಮುಚ್ಚಿ. ಹಬೆಯಲ್ಲಿ 10 ನಿಮಿಷ ಬೇಯಿಸಿ.





ಮ್ಯಾಂಗೊ ಮೂಸ್

ಬೇಕಾಗುವ ಸಾಮಗ್ರಿಗಳು: ವಿಪ್ಪಿಂಗ್ ಕ್ರೀಮ್-1 ಕಪ್, ಮಾವಿನಹಣ್ಣು-1, ಸಕ್ಕರೆ-2 ಚಮಚ.

ಮಾಡುವ ವಿಧಾನ: ವಿಪ್ಪಿಂಗ್ ಕ್ರೀಮ್ ಅನ್ನು ಚೆನ್ನಾಗಿ ಒಣಗಿದ ತಣ್ಣಗಿನ ಪಾತ್ರೆಗೆ ಹಾಕಿ ಗಟ್ಟಿಯಾಗುವವರೆಗೆ ಬೀಟ್ ಮಾಡಬೇಕು. ಮಾವಿನ ಹಣ್ಣಿನ ಪಲ್ಪ್, ಸಕ್ಕರೆ ಹಾಕಿ ಚೆನ್ನಾಗಿ ರುಬ್ಬಿಕೊಳಬೇಕು. ಇವೆರಡನ್ನೂ ಚೆನ್ನಾಗಿ ಮಿಕ್ಸ್ ಮಾಡಿ ಸರ್ವಿಂಗ್ ಬೌಲ್‌ನಲ್ಲಿ ಹಾಕಿ ಮುಚ್ಚಿಟ್ಟು ಎರಡು ಗಂಟೆ ಫ್ರಿಜ್‌ನಲ್ಲಿ ಇಟ್ಟು ತೆಗೆಯಿರಿ. ಮಾವಿನ ಮೂಸ್ ಸವಿಯಲು ಸಿದ್ಧ.

ಮಳೆಗಾಲದ ವಾರ್ಡ್‌ರೋಬ್

ಋತ ರಾಘವಿ

ಫ್ಯಾಷನ್



ಮಳೆ ಅಂದರೆ ಯಾರಿಗೆ ತಾನೇ ಇಷ್ಟವಿಲ್ಲ. ಮಳೆ ಮನಸ್ಸಿಗೆ ಖುಷಿ ನೀಡುತ್ತದೆ. ಮಳೆಗಾಲಕ್ಕೆ ಧರಿಸಲೆಂದೇ ಸೂಕ್ತ ಬಟ್ಟೆಗಳಿವೆ. ಪರಿಸರದಲ್ಲಿ ಆಗುವ ಬದಲಾವಣೆಗಳಿಂದ ತುಸು ಜಾಗರೂಕರಾಗಿಯೇ ಬಟ್ಟೆ ಆಯ್ಕೆ ಮಾಡಿಕೊಳ್ಳುವುದು ಒಳಿತು. ಕೆಸರುಮಯ ರಸ್ತೆಯಲ್ಲಿ ಓಡಾಡಬೇಕಾದ ಪರಿಸ್ಥಿತಿ ಬರಬಹುದು; ಗಾಳಿ, ಮಳೆ ಅಷ್ಟೇನೂ ಉತ್ತಮ ವಾತಾವರಣವಿಲ್ಲದಿದ್ದಾಗಲೂ ತುಸು ಆಸ್ಥೆ ವಹಿಸಿದರೆ ಟ್ರೆಂಡಿಯಾಗಿ ಕಾಣಬಹುದು.

ಮಳೆಗಾಲದಲ್ಲಿ ಮನಸ್ಸಿಗೆ ಮುದ ನೀಡುವ ಬಣ್ಣ ಬಣ್ಣದ ಆರಾಮದಾಯಕವೆನಿಸುವ ಬಟ್ಟೆಗಳನ್ನು ಧರಿಸಬಹುದು. ಆಯಾ ಋತುವಿಗೆ ಹೊಂದುವಂಥ ಬಟ್ಟೆ ಧರಿಸುವುದು ಸಕಾರಾತ್ಮಕ ಪ್ರವೃತ್ತಿಯ ಸೂಚಕ.



ಜೀನ್ಸ್, ಮ್ಯಾಕ್ಸಿ ಸ್ಕರ್ಟ್ಸ್, ಲಾಂಗ್ ಪ್ಲಾಜೋಗಳನ್ನು ಪಕ್ಕಕ್ಕಿಟ್ಟು, ವಾರ್ಡ್‌ರೋಬ್‌ನಲ್ಲಿ ಮಳೆಗಾಲಕ್ಕೆಂದೇ ಹೊಸ ಬಟ್ಟೆಗಳನ್ನು ಜೋಡಿಸಿಡುವುದು ಒಳಿತು. ಮಳೆಗಾಲದಲ್ಲಿ ಬಟ್ಟೆಗಳಿಗೆ ಮಣ್ಣು, ಕೆಸರಿನ ಕಲೆ ಬೇಗನೆ ಆಗುವುದರಿಂದ ಚಿಕ್ಕ ಹಾಗೂ ಮಧ್ಯಮ ಅಳತೆಯ ಸ್ಕರ್ಟ್‌ಗಳನ್ನು ಆಯ್ದುಕೊಳ್ಳುವುದು ಒಳಿತು. ಲೆದರ್ ಶೂ ಹಾಗೂ ಹೀಲ್ಸ್ ಮಳೆಗಾಲಕ್ಕೆ ಅಗತ್ಯವಿರುವಂಥದ್ದು.

ಬಿಳಿ ಬಟ್ಟೆ ಬಳಕೆ ಕಡಿಮೆ ಮಾಡಿ: ಶುಭ್ರ ಶ್ವೇತ ವಸ್ತ್ರಗಳನ್ನು ತೊಟ್ಟರೆ ಮಳೆಗಾಲದಲ್ಲಿ ಕಲೆಯಾಗುವುದೇ ಹೆಚ್ಚು . ಬಿಳಿ ಬಟ್ಟೆ ಮೇಲೆ ನೀರು ಬಿದ್ದರೆ ಇನ್ನಷ್ಟು ಪಾರದರ್ಶಕವೆನಿಸುವ ಸಾಧ್ಯತೆ ಇರುತ್ತದೆ. ಬದಲಿಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಆಯ್ಕೆ ಮಾಡಿಕೊಳ್ಳಿ. ಕಾಮನಬಿಲ್ಲಿನ ಬಣ್ಣ, ದೊಡ್ಡ ದೊಡ್ಡ ಹೂಗಳಿರುವ (ಫ್ಲೋರಲ್) ಕುರ್ತಾಗಳು, ಸ್ಕರ್ಟ್‌ಗಳು, ಸೀರೆಗಳು ನಿಮ್ಮ ವಾರ್ಡ್‌ರೋಬ್‌ನಲ್ಲಿರಲಿ.

ಬೇಗ ಒಣಗುವ ಬಟ್ಟೆಗೆ ಆದ್ಯತೆ ಕೊಡಿ: ಮಳೆ ಯಾವಾಗ ಬಂದು ತೋಯುತ್ತೇವೋ ಹೇಳಲು ಬರುವುದಿಲ್ಲ. ಬಿಸಿಲು ಬೇಕಾದ ಹಾಗೇ ಸಿಗುವುದಿಲ್ಲ.ಹಾಗಾಗಿ ನೆನೆದರೂ ಬೇಗ ಒಣಗುವ ಬಟ್ಟೆಯನ್ನು ಆಯ್ಕೆ ಮಾಡಿಕೊಳ್ಳಿ. ನೈಲಾನ್, ಪಾಲಿಸ್ಟರ್, ಸಿಂಥೆಟಿಕ್ ಬ್ಲೆಂಡ್ ಆಗಿರುವ ಬಟ್ಟೆಗಳಿಗೆ ಆದ್ಯತೆ ನೀಡಬಹುದು. ಹಗುರವಾದ ಹತ್ತಿ ಹಾಗೂ ಲೆನಿನ್ ಬಟ್ಟೆಗಳು ಮಳೆಗಾಲಕ್ಕೆ ಹೇಳಿ ಮಾಡಿಸಿದವು.

ವಾಟರ್‌ಪ್ರೂಫ್ ಔಟ್‌ವೇರ್: ಗುಣಮಟ್ಟದ ವಾಟರ್‌ಪ್ರೂಫ್ ಜಾಕೆಟ್ , ರೇನ್‌ಕೋಟ್ ಮಳೆಗಾಲಕ್ಕೆ ಅಗತ್ಯವಿರುವಂಥದ್ದು. ಮೋಡ ಮುಸುಕಿದ ವಾತಾವರಣಕ್ಕೆ ರಂಗು ತುಂಬುವ ಗಾಢಬಣ್ಣದ ವಾಟರ್‌ಪ್ರೂಫ್ ಜಾಕೆಟ್‌ಗಳು, ರೇನ್‌ಕೋಟ್‌ಗಳನ್ನು ಬಳಸಿ. ಆದರೆ ಆರಾಮ ದಾಯಕವೆನಿಸುವಂಥ ಬಟ್ಟೆಯನ್ನು ಆಯ್ಕೆ ಮಾಡಿ.

ಫ್ಯಾಷನೇಬಲ್ ಛತ್ರಿಗಳು: ಮಳೆಗಾಲ ಅಂದಾಕ್ಷಣ ಮೊದಲಿಗೆ ಬೇಕಿರುವುದು ಛತ್ರಿಗಳು. ಇವು ಫ್ಯಾಷನೇಬಲ್ ಆಗಿದ್ದರಂತೂ ಮಳೆಗಾಲವನ್ನು ಇನ್ನಷ್ಟು ರಂಗಾಗಿಸುತ್ತದೆ. ಕಪ್ಪು ಬಣ್ಣದ ಛತ್ರಿಗಳು ಸಾಮಾನ್ಯವಾಗಿ ಬಳಕೆಯಲ್ಲಿದ್ದರೂ ಬಹಳ ಚಂದದ ಪ್ರಿಂಟ್ ಹಾಗೂ ಪ್ಯಾಟರ್ನ್‌ಗಳಿರುವ ಛತ್ರಿಗಳನ್ನು ಆಯ್ಕೆ ಮಾಡಿಕೊಳ್ಳಿ. ಅದರಲ್ಲೂ ಮಳೆ ಹನಿಯ ಚಿಟಪಟ ಸದ್ದು ಕೇಳಿಸುವ, ಮಳೆಹನಿ ಕಾಣಿಸುವ ಹಾಗೆ ಪಾರದರ್ಶಕವೆನಿಸುವ ಛತ್ರಿಗಳನ್ನು ಒಮ್ಮೆ ಹಿಡಿದರೆ ಮತ್ತೆ ಬಿಡುವುದು ಕಷ್ಟ. ಏನೇ ಆದರೂ ಧರಿಸುವ ದಿರಿಸಿಗೆ ಹೊಂದುವಂಥ ಛತ್ರಿಗಳಿರಲಿ.

ವಾಟರ್‌ಪ್ರೂಫ್ ಫೂಟ್‌ವೇರ್: ಪಾದಗಳು ತೋಯದಂತೆ ಮಾಡಲು ವಾಟರ್‌ಪ್ರೂಫ್ ಫೂಟ್‌ವೇರ್‌ಗಳಾದ ರೇನ್ ಬೂಟ್ಸ್ ಅಥವಾ ರಬ್ಬರ್ ಸೋಲ್ ಶೂ ಧರಿಸಿ. ಮಳೆ ಬಿದ್ದು ಎಲ್ಲೆಂದರಲ್ಲಿ ಪಾಚಿ ಬೆಳೆದು ನೆಲ ಜಾರುತ್ತಿರುತ್ತದೆ. ಇಂಥ ಸಮಯದಲ್ಲಿ ಈ ಶೂಗಳು ಸಹಕಾರಿ.

ಮಳೆ ಸಣ್ಣಗೆ ಆರಂಭವಾಗಿದೆ. ಇನ್ಯಾಕೆ ತಡ ವಾರ್ಡ್‌ರೋಬ್ ಅನ್ನು ಋತುವಿನ ಅನುಸಾರ ಜೋಡಿಸಲು ಮುಂದಾಗಿ. ❖

ಹದಿವಯಸ್ಸಿನವರನ್ನು ನಿಭಾಯಿಸುವುದು ಹೇಗೆ?

●ಅಕ್ಷತಾ (ಹೆಸರು ಬದಲಾಯಿಸಲಾಗಿದೆ) 17ರ ಹರೆಯದವಳು. ಪಿಯು ಓದುತ್ತಿದ್ದಳು. ಆಕೆ ಅನ್ಯ ಧರ್ಮೀಯ ಹುಡುಗನನ್ನು ಪ್ರೀತಿ ಮಾಡುತ್ತಿದ್ದಾಳೆ ಎಂದು ಮನೆಯವರಿಗೆ ತಿಳಿದಾಗ ಬುದ್ಧಿವಾದ ಹೇಳಿದ್ದರು. ಅವರ ಸಂಪರ್ಕ ಮುಂದುವರಿದಾಗ ಮೊಬೈಲ್ ಕಿತ್ತುಕೊಂಡಿದ್ದರು. ಆದರ ನಂತರ ಅಕ್ಷತಾ ಮನೆಯಲ್ಲಿ ಯಾರೊಡನೆಯೂ ಮಾತನಾಡದೆ ಮಂಕಾಗತೊಡಗಿದ್ದಳು.

●ಸುಮನ (ಹೆಸರು ಬದಲಿಸಿದೆ) 16 ವರ್ಷದವಳು. ಅನ್ಯ ಜಾತಿಯ ಹುಡುಗನ ಜೊತೆ ಓಡಾಡುತ್ತಿದ್ದಾಳೆ ಎಂದು ತಿಳಿದ ಮನೆಯವರು ಅವಳನ್ನು ದೈಹಿಕ ಹಿಂಸೆಯಿಂದ ಬದಲಾಯಿಸಲು ಪ್ರಯತ್ನಿಸಿದ್ದರು. ಕೊನೆಗೆ ಒಂದು ದಿನ ಆಕೆ ಕಾಲೇಜಿನಿಂದ ಮನೆಗೆ ಹಿಂದಿರುಗಲಿಲ್ಲ. ಅವಳನ್ನು ಹುಡುಕಿ ಕರೆತಂದ ಮೇಲೆ ಕೈದಿಯಂತೆ ಮನೆಯಲ್ಲಿಯೇ ಅವಳನ್ನು ಬಂಧಿಸಿ ಇಡಬೇಕಾಯಿತು.

ಈ ರೀತಿಯ ಘಟನೆಗಳು ನಮ್ಮ ಸುತ್ತಲೂ ನಡೆಯುತ್ತಲೇ ಇರುತ್ತವೆ. ಹೀಗಾದಾಗ ಹದಿಹರೆಯದ ಮಕ್ಕಳು ಅದರಲ್ಲೂ ಹೆಚ್ಚಾಗಿ ಹೆಣ್ಣುಮಕ್ಕಳು ಪೋಷಕರಿಗೆ ಹೊರೆಯಂತೆ ಕಾಣತೊಡಗುತ್ತಾರೆ. ಒಂದುಕಡೆ ಮಕ್ಕಳ ಭವಿಷ್ಯದ ಚಿಂತೆಯಿದ್ದರೆ ಮತ್ತೊಂದು ಕಡೆ ಸಾಮಾಜಿಕ ಧಾರ್ಮಿಕ ಕಟ್ಟುಪಾಡುಗಳ ಒತ್ತಡ ಪೋಷಕರನ್ನು ಹತಾಶೆ ಅಸಹಾಯಕತೆಗೆ ತಳ್ಳುತ್ತದೆ. ಬುದ್ಧಿವಾದ, ಶಿಸ್ತು, ದೈಹಿಕ ಹಿಂಸೆ ,ಮನೆಯಲ್ಲಿ ಬಂಧಿಸುವುದು ಯಾವುದರಿಂದಲೂ ಬದಲಾವಣೆ ಆಗಿರುವುದಿಲ್ಲ.

ಪೋಷಕರು, ಹಿರಿಯರು, ಅಧ್ಯಾಪಕರೆಲ್ಲ ಮೊದಲು ಹದಿಹರೆಯವನ್ನು ಅರ್ಥಮಾಡಿಕೊಳ್ಳಬೇಕು. ಮಕ್ಕಳು ಹರೆಯಕ್ಕೆ ಕಾಲಿಡುವುದು ಎಂದರೆ ಪ್ರಕೃತಿ ದೇಹವನ್ನು ಸಂತಾನೋತ್ಪತ್ತಿಗೆ ಸಿದ್ಧಪಡಿಸುವುದು ಎಂದರ್ಥ. ಇದಕ್ಕಾಗಿ ಹಾರ್ಮೋನ್‌ಗಳ ಮೂಲಕ ದೇಹದಲ್ಲಿ ವಿವಿಧ ಬದಲಾವಣೆಗಳಾಗುತ್ತವೆ. ಹೀಗೆ ಸಂತತಿಯನ್ನು ಮುಂದುವರಿಸಲು ಸಿದ್ಧವಾದ ಹೆಣ್ಣುಗಂಡುಗಳ ನಡುವೆ ಹಾರ್ಮೋನ್‌ಗಳ ಮೂಲಕವೇ ಪ್ರಕೃತಿ ಆಕರ್ಷಣೆಯನ್ನು ಕೂಡ ಮೂಡಿಸುತ್ತದೆ. ಹಾಗಾಗಿ ಆಕರ್ಷಣೆ ಎನ್ನುವುದು ಕೇವಲ ಮಾನಸಿಕ ಕ್ರಿಯೆಯಲ್ಲ, ಪ್ರಾಕೃತಿಕವಾಗಿ ನಡೆಯುವ ಜೀವರಾಸಾಯನಿಕ ಕ್ರಿಯೆ ಕೂಡ. ಪ್ರಕೃತಿ ಮಾನವ ನಿರ್ಮಿತ ಸಮಾಜದ ಜಾತಿ, ಧರ್ಮ, ಸಂಸ್ಕೃತಿ ವಿದ್ಯಾಭ್ಯಾಸ, ಆರ್ಥಿಕ ಪರಿಸ್ಥಿತಿ ಮುಂತಾದವುಗಳ ಆಧಾರದ ಮೇಲೆ ಆಕರ್ಷಣೆ ಮೂಡಿಸುವುದಿಲ್ಲ. ಪ್ರಕೃತಿಯ ಕಣ್ಣಿನಲ್ಲಿ ಮನುಷ್ಯರೆಲ್ಲಾ ಒಂದೇ ಕುಲ.

ಹಾಗಿದ್ದರೆ ಹದಿಹರೆಯದ ಮಕ್ಕಳನ್ನು ಸ್ವೇಚ್ಛಾಚಾರಕ್ಕೆ ಬಿಟ್ಟುಬಿಡಬೇಕೇ?, ಒಳ್ಳೆಯ ಭವಿಷ್ಯ ರೂಪಿಸುವುದು ಪೋಷಕರ ಜವಾಬ್ದಾರಿಯಲ್ಲವೇ? ಇವುಗಳಿಗೆ ಉತ್ತರ



ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

ಹುಡುಕೋಣ. ಆಕರ್ಷಣೆ ವಯೋಸಹಜವಾದರೂ ಅದನ್ನು ಸಮರ್ಥವಾಗಿ ನಿಭಾಯಿಸಲು ಬೇಕಾದ ಹಿಡಿತವನ್ನು (Impulse Control) ಕೂಡ ಪ್ರಕೃತಿ ಎಲ್ಲರಿಗೆ ನೀಡಿರುತ್ತದೆ. ಮಕ್ಕಳು ಬೆಳೆಯುತ್ತಾ ಬಂದಂತೆ ಅವರೊಳಗಿನ ಸ್ವಯಂನಿಗ್ರಹದ ವ್ಯವಸ್ಥೆಯನ್ನು ಜಾಗೃತಗೊಳಿಸುವಂತಹ ಭಾವನಾತ್ಮಕ ವಾತಾವರಣ ಕುಟುಂಬಗಳಲ್ಲಿರಬೇಕು. ಸಾಕಷ್ಟು ಕುಟುಂಬಗಳಲ್ಲಿ ಇಂಥ ಸೌಹಾರ್ದಯುತ ವಾತಾವರಣದ ಕೊರತೆ ಇದೆ.ಮಕ್ಕಳಿಗೆ ಅಭಿಪ್ರಾಯಗಳನ್ನು ತಿಳಿಸಲು ಮತ್ತು ಭಿನ್ನಾಭಿಪ್ರಾಯಗಳು ಇದ್ದಾಗ ಚರ್ಚೆ ಮಾಡಲು ಪೋಷಕರು ಮತ್ತು ಮಕ್ಕಳ ನಡುವೆ ಒಂದು ಆತ್ಮೀಯ ಸಂಬಂಧ ಇರಬೇಕಲ್ಲವೇ? ಅದು ಇಲ್ಲದಿರುವಾಗ ಏನಾಗಬಹುದು? ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಯಾರನ್ನೋ ಪ್ರೀತಿಸುತ್ತಿದ್ದಾಳೆ ಎಂದು ತಿಳಿದ ತಕ್ಷಣ ಅದನ್ನು ದೊಡ್ಡ ಅಪರಾಧವೆಂದು ಪರಿಗಣಿಸಿ ಅವಳ ಮೇಲೆ ಬುದ್ಧಿವಾದಗಳ ಪ್ರವಾಹವನ್ನು ಹರಿಸಲಾಗುತ್ತದೆ. ಪೋಷಕರು ಹೇಳಿದ ಎಲ್ಲಾ ಮಾತುಗಳು ಮಕ್ಕಳಿಗೆ ಗೊತ್ತಿರುವುದೇ! ಅಷ್ಟಾದ ಮೇಲೆಯೂ ಮಕ್ಕಳಿಗೆ ತಮ್ಮ ಆಕರ್ಷಣೆಯನ್ನು ನಿಭಾಯಿಸಲು ಸಾಧ್ಯವಾಗದಿದ್ದಾಗ ಅವರಿಂದ ಮೊಬೈಲ್ ಕಸಿದುಕೊಂಡು ಅವಮಾನ ಮಾಡುವುದು, ದೈಹಿಕ ಹಿಂಸೆಯಿಂದ ಬದಲಾಯಿಸಲು ಪ್ರಯತ್ನಿಸುವುದು, ಬೇರೆಬೇರೆ ನಿರ್ಬಂಧಗಳನ್ನು ಹೇರುವುದು ಅನಿವಾರ್ಯ ಎಂದು ಪೋಷಕರು ತಿಳಿಯುತ್ತಾರೆ. ತನ್ನೊಡನೆ ಆತ್ಮೀಯವಾಗಿ ನಡೆದುಕೊಳ್ಳದ, ತನ್ನನ್ನು ಗೌರವಿಸಿದ ತನಗೆ ಅವಮಾನಿಸಿ ತನ್ನನ್ನು ಹಿಡಿತದಲ್ಲಿ ಇಟ್ಟುಕೊಳ್ಳುವವರೊಡನೆ ಮಕ್ಕಳು ಒಡನಾಟವನ್ನು ನಿಲ್ಲಿಸುತ್ತಾರೆ. ಪ್ರಿಯಕರನಿಂದ ದೂರ ಮಾಡುವ ಇಂತಹ ಎಲ್ಲಾ ಪ್ರಯತ್ನದಿಂದ ಏನಾಗುತ್ತದೆ? ಮನೆಯವರಿಂದಲೂ ದೂರವಾಗಿ ತನ್ನ ನೋವನ್ನು ಅರ್ಥಮಾಡಿಕೊಳ್ಳಲು ಹೇಳಿಕೊಳ್ಳಲು ಇರುವವನು ಆ ಹುಡುಗ ಮಾತ್ರ ಎಂದು ಅವಳಿಗೆ ಅನ್ನಿಸಿರುತ್ತದೆಯಲ್ಲವೇ?. ಹಾಗಾಗಿ ಹೆಣ್ಣುಮಗಳನ್ನು ಹದ್ದುಬಸ್ತಿನಲ್ಲಿಡುವ ದಬ್ಬಾಳಿಕೆಯ ಪ್ರಯತ್ನದಿಂದ ಅವಳಿಗೆ ಹುಡುಗನ ಮೇಲಿರುವ ಆಕರ್ಷಣೆ ಹೆಚ್ಚಬಹುದೇ ಹೊರತು ಕಡಿಮೆಯಾಗುವುದಿಲ್ಲ. ಹೀಗೆ ಮಗಳನ್ನು ಹಿಡಿತದಲ್ಲಿ ಇಡುವ ಪ್ರಯತ್ನ ಮಾಡಿದಷ್ಟೂ ಅವಳು ಪೋಷಕರಿಂದ ಮಾನಸಿಕವಾಗಿ ದೂರಹೋಗುತ್ತಾಳೆ. ❖

ಪೋಷಕರೇನು ಮಾಡಬಹುದು?

- ಮಕ್ಕಳಿಗೆ ಅವರವರ ವಯಸ್ಸಿಗೆ ಸೂಕ್ತ ಲೈಂಗಿಕ ಶಿಕ್ಷಣ ನೀಡಬೇಕು. ಹದಿಹರೆಯದ ಮಕ್ಕಳಿಗೆ ದೇಹದಲ್ಲಿ ಆಗುವ ಬದಲಾವಣೆಗಳು ಮತ್ತು ಇದರಿಂದ ಮೂಡುವ ಆಕರ್ಷಣೆಗಳ ಕುರಿತು ಶಿಕ್ಷಣ ನೀಡಬೇಕು. ಪೋಷಕರಿಗೆ ಸಾಧ್ಯವಾಗದಿದ್ದರೆ ವೈದ್ಯರ ಅಥವಾ ಮನೋಚಿಕಿತ್ಸಕರ ಸಹಾಯ ಪಡೆಯಬಹುದು.
- ಆಕರ್ಷಣೆ ಸಹಜವಾದರೂ ಅದನ್ನು ಜವಾಬ್ದಾರಿಯಿಂದ ನಿಭಾಯಿಸುವುದು ಹೇಗೆ ಎನ್ನುವುದನ್ನು ಮಕ್ಕಳೊಡನೆ ಮಾತನಾಡಬೇಕು.
- ಸರಿ ತಪ್ಪುಗಳು, ಧರ್ಮ, ಸಮಾಜ, ಸಂಸ್ಕೃತಿಗಳಿಗಿಂತ ಹೆಚ್ಚಾಗಿ ಮಕ್ಕಳ ವೈಯುಕ್ತಿಕ ಬದುಕು ಮತ್ತು ಅವರ ಭವಿಷ್ಯಕ್ಕೆ ಹದಿಹರೆಯದ ಆಕರ್ಷಣೆಗಳು ಹೇಗೆ ಅಡ್ಡಿಯಾಗಬಲ್ಲವು ಎಂದು ಚರ್ಚಿಸಬೇಕು.
- ಪರಸ್ಪರ ಗೌರವ, ನಂಬಿಕೆಗಳಿಲ್ಲದ ವಾತಾವರಣದಲ್ಲಿ ಮಾನಸಿಕ ಸಂಬಂಧ ಕಡಿದು ಹೋಗುವುದು ಸಹಜ. ಮಕ್ಕಳ ಆಯ್ಕೆಯನ್ನು ಒಪ್ಪದಿದ್ದರೂ ಅವಳ ಮಾತುಗಳನ್ನು ಕೇಳುತ್ತಾ, ಗೌರವಿಸುವುತ್ತಾ ಸಂಬಂಧಗಳನ್ನು ಹಸನಾಗಿಸಿಕೊಳ್ಳಬೇಕು.
- ಬಲವಂತದ ಎಲ್ಲಾ ಪ್ರಯತ್ನಗಳೂ ಅಪಾಯಕಾರಿಯಾಗಬಲ್ಲವು ಎನ್ನುವ ಎಚ್ಚರಿಕೆ ಇರಲಿ.
- ಅಗತ್ಯವಿದ್ದರೆ ಮನೋಚಿಕಿತ್ಸಕರ ನೆರವು ಪಡೆಯಿರಿ. ಇಲ್ಲಿಯೂ ಮಕ್ಕಳನ್ನು ದೂಷಿಸಿ ಅವರನ್ನು ಸರಿದಾರಿಗೆ ತರುವ ಉದ್ದೇಶ ಹೊಂದಿರಬಾರದು.

ಏನಾದ್ರೂ ಕೇಳ್ಬೋದು: ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ದಾಸ್ತಾನು ಇದ್ದರೂ ಕೊಡದ ಕೇಂದ್ರ ಸರ್ಕಾರ: ಸಚಿವ ಮುನಿಯಪ್ಪ ಆರೋಪ

‘ಅಕ್ಕಿ ನೀಡಲು ಪೀಯೂಷ್ ನಕಾರ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬಡತನ ರೇಖೆಗಿಂತ ಕೆಳಗಿರುವವರಿಗೆ ಅನ್ನ ಭಾಗ್ಯ ಯೋಜನೆಯಡಿ ತಲಾ 5 ಕೆ.ಜಿ. ಅಕ್ಕಿ ಒದಗಿಸಲು ತಿಂಗಳಿಗೆ 2.28 ಲಕ್ಷ ಟನ್ ಅಕ್ಕಿ ನೀಡುವಂತೆ ಕೇಂದ್ರ ಸರ್ಕಾರವನ್ನು ಕೇಳಿಕೊಂಡಿದ್ದೆ. ಅಕ್ಕಿ ನೀಡಲು ಕೇಂದ್ರ ಆಹಾರ ಸಚಿವ ಪೀಯೂಷ್ ಗೋಯಲ್ ನಿರಾಕರಿಸಿದ್ದಾರೆ ಎಂದು ರಾಜ್ಯದ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಆರೋಪಿಸಿದರು.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಶುಕ್ರವಾರ ಭೇಟಿ ಮಾಡಿ ಸುಮಾರು ಅರ್ಧ ಗಂಟೆ ಸಮಾಲೋಚನೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆಗೆ ಮಾತನಾಡಿದರು.

‘ಕೇಂದ್ರದ ಬಳಿ ಸಾಕಷ್ಟು ಅಕ್ಕಿ ದಾಸ್ತಾನು ಇದೆ. ಅದನ್ನು ಕೊಡಿ ಎಂದರೂ ಕೊಡುತ್ತಿಲ್ಲ. ಕೇಂದ್ರ ಸರ್ಕಾರ ರಾಜಕಾರಣ ಮಾಡುತ್ತಿರುವುದು ಸ್ಪಷ್ಟ. ಇದರಲ್ಲಿ ರಾಜಕೀಯ ದುರುದ್ದೇಶ ಇದೆ’ ಎಂದರು.

‘ರಾಜ್ಯಕ್ಕೆ ತಿಂಗಳಿಗೆ 2.28 ಲಕ್ಷ ಟನ್ ಅಕ್ಕಿ ಬೇಕಿದೆ. ಗೋಯಲ್ ಅವರು ಅಕ್ಕಿ ಕೊಡುತ್ತಾರೆ ಎಂಬ ಆಶಾಭಾವನೆಯಿಂದ ಬಂದಿದ್ದೆ. ಅವರು ಹಾರಿಕೆಯ ಉತ್ತರ ನೀಡಿದ್ದಾರೆ. ಮುಕ್ತ ಮಾರುಕಟ್ಟೆಯಲ್ಲಿ ಖರೀದಿ ಮಾಡಿ ಎಂಬ ಸಲಹೆ ನೀಡಿದ್ದಾರೆ. 15 ಲಕ್ಷ ಟನ್ ಅಕ್ಕಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುತ್ತಿದ್ದಾರೆ. ಅದನ್ನು ನಮಗೆ ಕೊಡಿ ಎಂದರೂ ಒಪ್ಪಿಲ್ಲ’ ಎಂದರು.

ಅಕ್ಕಿ ಸರಬರಾಜು ಮಾಡಲು ಮೂರು ಸಂಸ್ಥೆಗಳಿಂದ ದರ ಪಟ್ಟಿ ಕೇಳಲಾಗಿತ್ತು. ಈ ಸಂಸ್ಥೆಗಳು ದರಪಟ್ಟಿ ಒದಗಿಸಿವೆ. ಈ ದರಪಟ್ಟಿಯನ್ನು ನೋಡಿಲ್ಲ. ದರ ಪಟ್ಟಿ ಬಗ್ಗೆ ಸಿ.ಎಂ ಅವರೊಂದಿಗೆ ಸಮಾಲೋಚಿಸಲಾಗುವುದು. 3–4 ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. ಸಾಗಣೆ ವೆಚ್ಚ ಸೇರಿ ಪ್ರತಿ ಕೆ.ಜಿ. ಅಕ್ಕಿ ಬೆಲೆ ₹40 ದಾಟದಂತೆ ನೋಡಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.



ಪೀಯೂಷ್ ಗೋಯಲ್ ಅವರಿಗೆ ಕೆ.ಎಚ್.ಮುನಿಯಪ್ಪ ಮನವಿ ಸಲ್ಲಿಸಿದರು

‘ಪ್ರತಾಪ್ ಸಿಂಹಗೆ ಒಕ್ಕೂಟ ವ್ಯವಸ್ಥೆ ಅರಿವಿಲ್ಲ’

ಚಿಕ್ಕಬಳ್ಳಾಪುರ: ‘ಸಂಸದ ಪ್ರತಾಪ್ ಸಿಂಹ ಅವರಿಗೆ ಒಕ್ಕೂಟ ವ್ಯವಸ್ಥೆ ಅರಿವಿಲ್ಲ. ಕೇಂದ್ರ ಸರ್ಕಾರವನ್ನು ಕೇಳುವಂತಿಲ್ಲ ಎಂದರೆ ನಾವು ಕೇಂದ್ರ ಸರ್ಕಾರಕ್ಕೆ ತೆರಿಗೆ ಏಕೆ ಕಟ್ಟಬೇಕು’ ಎಂದು ಶಾಸಕ ಪ್ರದೀಪ್ ಈಶ್ವರ್ ಪ್ರಶ್ನಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಂಸದರಾಗಿ ನೀವು ಗೆದ್ದಿರುವುದು ಏಕೆ? ರಾಜ್ಯ ಸರ್ಕಾರದ ಪಾಲನ್ನು ಇವರು ತರಬೇಕು ಅಲ್ಲವೇ? ಇವರು ಏಕೆ ಆಯ್ಕೆ ಆಗಿದ್ದಾರೆ’ ಎಂದರು.

ಕೇಂದ್ರ ಸರ್ಕಾರವನ್ನು ಉಚಿತವಾಗಿ ಅಕ್ಕಿ ನೀಡಿ ಎಂದು ಕೇಳಿಲ್ಲ. ತಿಂಗಳಿಗೆ ಅಕ್ಕಿಗೆ ₹830 ಕೋಟಿ ವೆಚ್ಚವಾಗುತ್ತದೆ. ಈ ಹಣವನ್ನು ಕೊಡುತ್ತೇವೆ ಎಂದರೂ ಅಕ್ಕಿ ಕೊಡುತ್ತಿಲ್ಲ. ಕಾಂಗ್ರೆಸ್‌ಗೆ ಹೆಸರು ಬರುತ್ತದೆ ಎನ್ನುವ ಕಾರಣದಿಂದ ಕೇಂದ್ರ ಸರ್ಕಾರ ಹೀಗೆ ಮಾಡುತ್ತಿದೆ ಎಂದು ದೂರಿದರು.

‘ಅನ್ನಭಾಗ್ಯ ವಿಳಂಬ: ಸಮಸ್ಯೆಯಾಗದು’

ಮೈಸೂರು: ‘ಅನ್ನಭಾಗ್ಯ ಯೋಜನೆ ಜಾರಿಗೊಳಿಸುವುದು ಒಂದೆರಡು ತಿಂಗಳು ತಡವಾದರೂ ಸಮಸ್ಯೆಯಾಗದು’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಕೇಂದ್ರದಿಂದ ಅಕ್ಕಿ ಸಿಗದಿದ್ದರೂ ಪರ್ಯಾಯ ಮಾರ್ಗಗಳಿವೆ. ಈಗಾಗಲೇ ಐದು ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತಿದೆ. ಅಕ್ಕಿ ಬದಲಿಗೆ ಬೇರೆ ಧಾನ್ಯಗಳನ್ನೂ ನೀಡಬಹುದು, ಆತಂಕ ಪಡಬೇಕಿಲ್ಲ’ ಎಂದು ನಗರದಲ್ಲಿ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ಆಗಸ್ಟ್‌ನಿಂದ ಗೃಹ ಲಕ್ಷ್ಮಿ ಜಾರಿ’

ಬೆಂಗಳೂರು: ‘ಗೃಹಲಕ್ಷ್ಮಿ’ ಯೋಜನೆ ಆಗಸ್ಟ್ ತಿಂಗಳಿನಿಂದ ಜಾರಿಗೆ ಬರಲಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಇತರ ಸಚಿವರ ಜತೆ ಶುಕ್ರವಾರ ನಡೆದ ಸಭೆಯ ಬಳಿಕ ಅವರು ವಿಷಯ ತಿಳಿಸಿದರು.

‘ಯೋಜನೆಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ರೂಪುರೇಷೆ ಸಿಗಲಿದೆ. ಯೋಜನೆ ಜಾರಿಗೆ ಪ್ರತ್ಯೇಕ ಆ್ಯಪ್ ಈಗಾಗಲೇ ತಯಾರಾಗಿದ್ದು, ಈ ಕುರಿತು ಸಿಎಂ ಜತೆ ಚರ್ಚೆ ನಡೆಸಲಾಗುವುದು. ಅಲ್ಲದೇ, ಇದಕ್ಕೆ ಯಾವ ದಿನದಿಂದ ಅರ್ಜಿ ಸ್ವೀಕಾರ ಮಾಡಬೇಕು ಎಂಬುದನ್ನು ಮುಖ್ಯಮಂತ್ರಿ ಗಮನಕ್ಕೆ ತಂದು ನಿರ್ಧಾರ ಮಾಡುತ್ತೇವೆ’ ಎಂದರು.

ಮೂವರು ಪೊಲೀಸರ ಅಮಾನತು

ಪ್ರಜಾವಾಣಿ ವಾರ್ತೆ

ರಾಮನಗರ: ಪಾನಮತ್ತರಾಗಿ ಸಾರ್ವಜನಿಕರೊಂದಿಗೆ ಗಲಾಟೆ ಮಾಡಿಕೊಂಡ ಮೂವರು ಪೊಲೀಸರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಅಮಾನತುಗೊಳಿಸಿದ್ದಾರೆ.

ಮಾಗಡಿ ಪೊಲೀಸ್ ಠಾಣೆ ಎಎಸ್‌ಐ ಮಂಜುನಾಥ್ ಕೆ.ಎನ್, ಚನ್ನಪಟ್ಟಣ ಪುರ ಪೊಲೀಸ್ ಠಾಣೆ ಹೆಡ್ ಕಾನ್‌ಸ್ಟೆಬಲ್ ನಾರಾಯಣಮೂರ್ತಿ ಹಾಗೂ ಎಸ್‌ಪಿ ಕಚೇರಿ ಎಎಸ್‌ಐ ಗೋವಿಂದಪ್ಪ ಜಿ.ಎಸ್ ಅಮಾನತುಗೊಂಡವರು. ಇವರು ಸಂಬಂಧಿಕರು.

ನಾಲ್ಕೈದು ತಿಂಗಳಿಂದ ಕರ್ತವ್ಯಕ್ಕೆ ಗೈರಾಗಿದ್ದ ಮಂಜುನಾಥ್ ಮತ್ತು ನಾರಾಯಣಮೂರ್ತಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದಕ್ಕಾಗಿ, ಎಸ್‌.ಪಿ ಕಚೇರಿಗೆ ಗುರುವಾರ ಮಧ್ಯಾಹ್ನ ಬಂದಿದ್ದರು. ಆದರೆ, ವರದಿ ಮಾಡಿಕೊಳ್ಳದೆ ಕಚೇರಿಯಲ್ಲಿದ್ದ ಗೋವಿಂದಪ್ಪ ಅವರೊಂದಿಗೆ ಮದ್ಯದ ಪಾರ್ಟಿ ಮಾಡಿದ್ದರು.

ಬಳಿಕ ಮಾಗಡಿ ಕಡೆಗೆ ತೆರಳುವಾಗ, ಮಾರ್ಗಮಧ್ಯೆ ಸಾರ್ವಜನಿಕರನ್ನು ಅವಾಚ್ಯವಾಗಿ ನಿಂದಿಸಿ ಗಲಾಟೆ ಮಾಡಿದ್ದರು. ಸಾರ್ವಜನಿಕರು ಇವರ ಕಾರನ್ನು ಹಿಂಬಾಲಿಸಿ ಅಡ್ಡ ಹಾಕಿ, ಮೂವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಈ ವೇಳೆ, ಎಎಸ್‌ಐ ಮಂಜುನಾಥ್ ಅರೆನಗ್ನರಾಗಿದ್ದರು. ಇನ್ನಿಬ್ಬರು ತಮ್ಮ ಸಮವಸ್ತ್ರವನ್ನು ಕಾರಿನಲ್ಲಿ ನೇತು ಹಾಕಿದ್ದರು.

ಈ ಕುರಿತು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದ ವಿಡಿಯೊವನ್ನು ಪೊಲೀಸ್ ವರಿಷ್ಠಾಧಿಕಾರಿಗೆ ಕಳುಹಿಸಿದ್ದರು. ಮೂವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಮದ್ಯ ಕುಡಿದಿರುವುದು ದೃಢಪಟ್ಟಿದೆ. ಬೆನ್ನಲ್ಲೇ, ಎಸ್‌.ಪಿ ಅಮಾನತು ಮಾಡಿದ್ದಾರೆ.

ಸೌಜನ್ಯಾ ಹತ್ಯೆಯ ಸಾಕ್ಷ್ಯನಾಶ, ಕರ್ತವ್ಯಲೋಪ: ಆರೋಪ

‘ಪೊಲೀಸರ ವಿರುದ್ಧ ಹೈಕೋರ್ಟ್ ಮೊರೆ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಧರ್ಮಸ್ಥಳದ ಪಾಂಗಳ ಗ್ರಾಮದ ವಿದ್ಯಾರ್ಥಿನಿ ಸೌಜನ್ಯಾ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದಲ್ಲಿ ತನಿಖಾಧಿಕಾರಿಗಳು, ಪೊಲೀಸರು ಮತ್ತು ವೈದ್ಯಕೀಯ ವರದಿ ನೀಡಿರುವ ವೈದ್ಯರು ಲೋಪ ಎಸಗಿರುವುದು ಸ್ಪಷ್ಟವಾಗಿದೆ. ಇವರ ವಿರುದ್ಧ ಹೈಕೋರ್ಟ್ ಮೊರೆ ಹೋಗುತ್ತೇವೆ’ ಎಂದು ಸೌಜನ್ಯಾ ಕುಟುಂಬದ ಪರವಾಗಿ ಹೋರಾಟ ನಡೆಸುತ್ತಿರುವ ಬೆಳ್ತಂಗಡಿಯ ‘ಪ್ರಜಾಪ್ರಭುತ್ವ ವೇದಿಕೆ’ಯ ಮುಖ್ಯಸ್ಥ ಮಹೇಶ್ ಶೆಟ್ಟಿ ತಿಮರೋಡಿ ಹಾಗೂ ವಕೀಲೆ ಅಂಬಿಕಾ ಪ್ರಭು ತಿಳಿಸಿದರು.

ಸಂತೋಷ್ ರಾವ್ ಅವರ ಮಾನವ ಹಕ್ಕು ಉಲ್ಲಂಘನೆ ಆಗಿರುವ ಬಗ್ಗೆಯೂ ಪೊಲೀಸ್ ಇಲಾಖೆ ವಿರುದ್ಧ ಹೋರಾಟ ನಡೆಸುತ್ತೇವೆ ಎಂದು ಶುಕ್ರವಾರ ಇಲ್ಲಿ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

‘ಆರೋಪಿ ಸಂತೋಷ್ ರಾವ್ ತಪ್ಪಿತಸ್ಥ ಅಲ್ಲ ಎಂಬುದನ್ನು ನಾವು 10 ವರ್ಷ ಹಿಂದೆಯೇ ಹೇಳಿದ್ದೇವೆ. ಆದರೆ, ಪೊಲೀಸರು ‘ದೊಡ್ಡವರ’ ಒತ್ತಡಕ್ಕೆ ಮಣಿದು, ಸಂತೋಷ್ ರಾವ್ ಅವರನ್ನು ತಪ್ಪಿತಸ್ಥನ್ನಾಗಿಸಿ, ನಿಜವಾದ ಅಪರಾಧಿಗಳನ್ನು ರಕ್ಷಿಸಲು ವ್ಯವಸ್ಥೆ ಮಾಡಿಕೊಂಡಿದ್ದರು. ನಿಜ ಆರೋಪಿಗಳ ವಿರುದ್ಧದ ಎಲ್ಲಾ ಸಾಕ್ಷ್ಯಗಳನ್ನು ಹಂತಹಂತವಾಗಿ ನಾಶ ಪಡಿಸಿದ್ದರು’ ಎಂದು ಮಹೇಶ್ ಶೆಟ್ಟಿ ಆರೋಪಿಸಿದರು.

‘ಸೌಜನ್ಯಾ ಪರವಾಗಿ ಸಾಕ್ಷ್ಯ ಹೇಳಲು ಬಂದಿದ್ದವರಲ್ಲಿ ಒಬ್ಬರು ನೇಣು ಹಾಕಿಕೊಂಡು, ಇನ್ನೊಬ್ಬರು ಬಾವಿಗೆ ಬಿದ್ದು, ಮತ್ತೊಬ್ಬರು ಅಸೌಖ್ಯದಿಂದ ನಂತರದ ದಿನಗಳಲ್ಲಿ ಸಾವನ್ನಪ್ಪಿದ್ದರು. ಇವೆಲ್ಲವೂ ಶಂಕಾಸ್ಪದ ಸಾವುಗಳೇ ಆಗಿವೆ. ನನ್ನನ್ನು ಹತ್ಯೆ ಮಾಡುವ ಪ್ರಯತ್ನಗಳೂ ಆಗಿವೆ. ಪೊಲೀಸ್ ಇಲಾಖೆಯ ಒಳಗಿನವರೇ ಸಕಾಲದಲ್ಲಿ ಮಾಹಿತಿ ನೀಡಿದ್ದರಿಂದ ನಾನು ಒಂದು ತಿಂಗಳ ಕಾಲ ತಲೆ ಮರೆಸಿಕೊಂಡು ಪ್ರಾಣ ಉಳಿಸಿಕೊಂಡಿದ್ದೇನೆ. ಸಂತೋಷ್ ರಾವ್ ನಿರಪರಾಧಿ ಎಂದು ನ್ಯಾಯಾಲಯ ಹೇಳಿರುವುದರಿಂದ ನಮ್ಮ ವಾದಕ್ಕೆ ಪುಷ್ಟಿ ಸಿಕ್ಕಿದಂತಾಗಿದೆ. ನಿಜವಾದ ಅಪರಾಧಿಗಳ ಬಂಧನವಾಗುವವರೆಗೆ ನಮ್ಮ ಹೋರಾಟ ಮುಂದುವರಿಯಲಿದೆ’ ಎಂದರು.

ಪೊಲೀಸರು ಎಸಗಿದ್ದಾರೆ ಎನ್ನಲಾದ 28 ಪ್ರಮುಖ ಲೋಪಗಳ ಪಟ್ಟಿಯನ್ನು ಅವರು ಬಿಡುಗಡೆ ಮಾಡಿದರು.

‘ಸಂತೋಷ್ ರಾವ್ ಅವರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಅವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸುವುದಕ್ಕೂ ಮುನ್ನ, ಅವರ ಲೈಂಗಿಕ ಕ್ರಿಯೆ ನಡೆಸುವ ಸಾಮರ್ಥ್ಯದ ಪರೀಕ್ಷೆ ನಡೆಸಿದ್ದೂ ದಾಖಲಾಗಿದೆ. ಇವೆಲ್ಲವೂ ಸಾಕ್ಷ್ಯಗಳನ್ನು ನಾಶಪಡಿಸುವ ಹುನ್ನಾರಗಳೇ ಆಗಿದ್ದವು. ಪ್ರಕರಣದ ಮರು ತನಿಖೆ ನಡೆಸಬೇಕಾದರೆ ಸುಪ್ರೀಂ ಕೋರ್ಟ್ ಮೊರೆಹೋಗಬೇಕು. ಅಷ್ಟು ಆರ್ಥಿಕ ಶಕ್ತಿ ನಮ್ಮಲ್ಲಿ ಇಲ್ಲ. ಸರ್ಕಾರವೇ ಆರ್ಥಿಕ ನೆರವು ನೀಡಿದರೆ ನಾವು ಸುಪ್ರೀಂ ಕೋರ್ಟ್ ಮೊರೆಹೋಗಲು ಸಿದ್ಧ’ ಎಂದು ಅಂಬಿಕಾ ಪ್ರಭು ತಿಳಿಸಿದರು.

ಸೌಜನ್ಯಾ ತಾಯಿ ಕುಸುಮಾವತಿ, ಮಾವ ವಿಠ್ಠಲ ಗೌಡ, ಸಾಮಾಜಿಕ ಕಾರ್ಯಕರ್ತೆ ಪ್ರಸನ್ನಾ ರವಿ ಮಾಧ್ಯಮಗೋಷ್ಠಿಯಲ್ಲಿದ್ದರು.

ಸೌಜನ್ಯಾ ಪ್ರತಿಮೆ ಸ್ಥಾಪನೆ

‘ನಮ್ಮ ಹೋರಾಟ ಉಸಿರು ಇರುವವರೆಗೆ ನಡೆಯಲಿದೆ. ಮುಂದಿನ ಹಂತವಾಗಿ ಸೌಜನ್ಯಾ ಅವರ ಸಮಾಧಿಯ ಬಳಿಯಲ್ಲೇ ಆಕೆಯ ದೊಡ್ಡ ಪ್ರತಿಮೆಯನ್ನು ಸ್ಥಾಪಿಸುತ್ತೇವೆ. ಆಕೆ ಒಂದು ಶಕ್ತಿಯಾಗಲಿದ್ದಾಳೆ, ಆ ಮಾರ್ಗವಾಗಿ ಧರ್ಮಸ್ಥಳಕ್ಕೆ ಬರುವ ಭಕ್ತರು ಮಾತ್ರವಲ್ಲ, ಅತ್ಯಾಚಾರ ನಡೆಸಿ ಕೊಲೆ ಮಾಡಿದವರು ಸಹ ಅದನ್ನು ನಿತ್ಯವೂ ನೋಡಿಯೇ ಮುಂದೆ ಸಾಗುವಂತಾಗಬೇಕು. ಧರ್ಮದ ಹೆಸರಿನಲ್ಲಿ ನಡೆಯುವ ‘ಧಾರ್ಮಿಕ ಭಯೋತ್ಪಾದನೆ’ಯ ಭೀಕರತೆಯ ಅರಿವು ಎಲ್ಲರಿಗೂ ಆಗಬೇಕು. ನಮ್ಮ ಹೋರಾಟ ಕ್ಷೇತ್ರದ ವಿರುದ್ಧವಲ್ಲ, ಅಪರಾಧಿಗಳ ವಿರುದ್ಧ ಮಾತ್ರ’ ಎಂದು ಮಹೇಶ್ ಶೆಟ್ಟಿ ಹೇಳಿದರು.

ಮುಖ್ಯಾಂಶಗಳು

- 28 ಪ್ರಮುಖ ಲೋಪಗಳ ಪಟ್ಟಿ ಬಿಡುಗಡೆ
- ಹಂತಹಂತವಾಗಿ ಎಲ್ಲಾ ಸಾಕ್ಷ್ಯಗಳ ನಾಶ–ಆರೋಪ
- ನಿಜವಾದ ಆರೋಪಿಗಳನ್ನು ರಕ್ಷಿಸಲು ಪೊಲೀಸರಿಂದ ಕ್ರಮ– ದೂರು

ರಾಜ್ಯದ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಮಂಗಳೂರು: ಬಾಗಲಕೋಟೆ, ವಿಜಯಪುರ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಶುಕ್ರವಾರ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ, ಮುಂಡಗೋಡ, ಯಲ್ಲಾಪುರ, ಜೊಯಿಡಾದಲ್ಲಿ ಮಳೆಯಾಯಿತು. ಬಾಗಲಕೋಟೆ ಜಿಲ್ಲೆಯ ಕಲಾದಗಿ ಮತ್ತು ಬಾದಾಮಿ ತಾಲ್ಲೂಕಿನ ಗುಳೇದಗುಡ್ಡದಲ್ಲಿ ಮಳೆ ಸುರಿಯಿತು.

ವಿಜಯಪುರ ಜಿಲ್ಲೆಯ ನಾಲತವಾಡ ಸಮೀಪದ ಟಕ್ಕಳಕಿ-ಇಂಗಳಗಿ ಹಾಗೂ ಬಲದಿನ್ನಿ ಕಾರಕೂರ ಗ್ರಾಮಗಳಲ್ಲಿ ಅರ್ಧ ಗಂಟೆ ಉತ್ತಮ ಮಳೆಯಾಗಿದೆ. ಹುಬ್ಬಳ್ಳಿಯಲ್ಲಿ ಬೆಳಿಗ್ಗೆ ತುಂತುರು ಮಳೆ ಬಿದ್ದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧಾರಾಕಾರ ಮಳೆಯಾಗಿದ್ದು, ಮೂಡುಶೆಡ್ಡೆಯಲ್ಲಿ ಮನೆಯೊಂದು ಭಾಗಶಃ ಕುಸಿದಿದೆ. ಮಂಗಳೂರು ನಗರದಲ್ಲಿ ಜೋರು ಮಳೆಯಾಗಿದ್ದು, ಕೆಲವೆಡೆ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ಪ್ರಮುಖ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆ ಕಂಡುಬಂತು.

ರಾಜ್ಯದ ಕರಾವಳಿ ಭಾಗದಲ್ಲಿ ಇದೇ 27ರವರೆಗೂ ಭಾರಿ ಮಳೆಯಾಗಲಿದೆ. ಅರಬ್ಬಿ ಸಮುದ್ರದಲ್ಲಿ ಗಂಟೆಗೆ ಸರಾಸರಿ 40 ಕಿ.ಮೀಯಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಕಾರವಾರದಲ್ಲಿ ಶುಕ್ರವಾರ ಧಾರಾಕಾರ ಮಳೆಯಾಯಿತು

‘ಯೆಲ್ಲೊ’, ‘ಆರೇಂಜ್ ಅಲರ್ಟ್’

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆ ಚುರುಕುಗೊಳ್ಳುವ ಸಾಧ್ಯತೆಯಿದ್ದು, ಮುಂದಿನ ನಾಲ್ಕು ದಿನಗಳಲ್ಲಿ ಕರಾವಳಿ, ಮಲೆನಾಡು, ದಕ್ಷಿಣ ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಗಡುಗು ಸಹಿತ ಧಾರಾಕಾರ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಮುನ್ಸೂಚನೆ ನೀಡಿದೆ.

ಇದೇ 24 ಮತ್ತು 25ರಂದು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. 26ರಂದು ಉತ್ತರ ಕನ್ನಡಕ್ಕೆ ‘ಆರೇಂಜ್ ಅಲರ್ಟ್’ ಹಾಗೂ ಕಲಬುರಗಿ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

27ರಂದು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ‘ಆರೇಂಜ್ ಅಲರ್ಟ್’ ಹಾಗೂ ಶಿವಮೊಗ್ಗ, ಕಲಬುರಗಿ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಅಸ್ಸಾಂ, ಅರುಣಾಚಲ ಪ್ರದೇಶದಲ್ಲಿ ಪ್ರವಾಹ ಸ್ಥಿತಿ

ಗುವಾಹಟಿ/ಇಟಾನಗರ (ಪಿಟಿಐ): ಭಾರಿ ಮಳೆಯ ಪರಿಣಾಮ ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ಹಲವು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಹಲವೆಡೆ ಭೂಕುಸಿತ ಸಂಭವಿಸಿದೆ. ಜನಜೀವನ ಅಸ್ತವ್ಯಸ್ತಗೊಂಡಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಅಸ್ಸಾಂನಲ್ಲಿ ಪ್ರವಾಹಕ್ಕೆ ಸಿಲುಕಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಪ್ರವಾಹಪೀಡಿತ ಸ್ಥಳದಲ್ಲಿರುವ ಸುಮಾರು 5 ಲಕ್ಷ ಜನರ ಬದುಕು ಡೋಲಾಯಮಾನವಾಗಿದೆ. ಬ್ರಹ್ಮಪುತ್ರ ಸೇರಿದಂತೆ ರಾಜ್ಯದ ಪ್ರಮುಖ ನದಿಗಳು ಅಪಾಯಮಟ್ಟ ಮೀರಿ ಹರಿಯುತ್ತಿವೆ. ಈವರೆಗೆ 16 ಜಿಲ್ಲೆಗಳು, ನಾಲ್ಕು ಉಪ ವಿಭಾಗಗಳು ಸಂಪೂರ್ಣವಾಗಿ ಪ್ರವಾಹಪೀಡಿತವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರೀ ಮಳೆಯು ಕೆಲ ದಿನಗಳ ಕಾಲ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

14,000ಕ್ಕೂ ಹೆಚ್ಚು ಜನರು 83 ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಪಡೆದಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ, ಸರ್ಕಾರೇತರ ಸಂಘಟನೆಗಳು ಮತ್ತು ಸ್ಥಳೀಯರು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಬಂದ್: ಅರುಣಾಚಲ ಪ್ರದೇಶದ ಬಂದೇರದೇವ ಮತ್ತು ನಿರ್ಜುಲಿ ನಡುವಿನ ರಾಷ್ಟ್ರೀಯ ಹೆದ್ದಾರಿಯು ಗುರುವಾರ ಸಂಜೆ ಜಲಾವೃತವಾಗಿತ್ತು. ಪುರೋಯಿಕ್ ಕಾಲೊನಿಯನ್ನು ಸಂಪರ್ಕಿಸುವ ಸೇತುವೆಯೂ ಹಾನಿಗೊಳಗಾಗಿದೆ. ಬಾಲಿಪರಾ–ಚರ್‌ದ್ವಾರ್–ತವಾಂಗ್ ಮಧ್ಯೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲೂ ಭೂಕುಸಿತ ಉಂಟಾಗಿ ವಾಹನಗಳ ಸಂಚಾರಕ್ಕೆ ತೊಡಕುಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹರಿಯಾಣ, ಪಂಜಾಬ್‌ನಲ್ಲಿ ಮಳೆ: ಹರಿಯಾಣ, ಪಂಜಾಬ್‌ನ ಕೆಲವು ಭಾಗಗಳಲ್ಲಿ ಶುಕ್ರವಾರ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹರಿಯಾಣದ ಅಂಬಾಲ, ಕರ್ನಾಲ್, ರೋಹ್ಟಕ್, ಪಂಚಕುಲಾ, ಕುರುಕ್ಷೇತ್ರ ಮತ್ತು ಫತೇಹಬಾದ್‌ನಲ್ಲಿ ಮಳೆಯಾಗಿದೆ. ಪಂಜಾಬ್‌ನ ಫತೇಗಢ ಸಾಹಿಬ್, ಎಸ್‌ಬಿಎಸ್ ನಗರ ಮತ್ತು ರೂಪ್‌ನಗರ ಸಾಧಾರಣ ಮಳೆಯಾಗಿದೆ ಎಂದು ತಿಳಿಸಿದ್ದಾರೆ. ಹಲವು ದಿನಗಳಿಂದ ಎರಡೂ ರಾಜ್ಯಗಳಲ್ಲಿ ಬಿಸಿಲ ಧಗೆ ಹೆಚ್ಚಾಗಿತ್ತು.

ತಯಾರಕರ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಿ ಅಬಕಾರಿ ಇಲಾಖೆಯಿಂದ ಮೇ 22ರಂದು ಆದೇಶ

ಮದ್ಯದ ಭದ್ರತಾ ಚೀಟಿ ವೆಚ್ಚವೂ ಗ್ರಾಹಕರಿಗೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಬಾಟಲಿಗಳ ಮುಚ್ಚಳದ ಮೇಲೆ ಅಂಟಿಸುವ ಅಬಕಾರಿ ಭದ್ರತಾ ಚೀಟಿ (ಇಎಎಲ್) ವೆಚ್ಚವನ್ನು ಮದ್ಯ ತಯಾರಕರ ಬದಲಿಗೆ ಗ್ರಾಹಕರಿಗೆ ವರ್ಗಾಯಿಸಲಾಗಿದೆ. ಇದರಿಂದಾಗಿ ಗ್ರಾಹಕರು ಪ್ರತಿ ಬಾಟಲಿ ಮದ್ಯಕ್ಕೆ 31.74 ಪೈಸೆಯಷ್ಟು ಹೆಚ್ಚುವರಿ ದರ ಪಾವತಿಸಬೇಕಾಗಿದೆ.

ಈ ಹಿಂದೆ ಇಎಎಲ್ ವೆಚ್ಚವೂ ಸೇರಿ ಮದ್ಯದ ಬಾಟಲಿಯ ಗರಿಷ್ಠ ಮಾರಾಟ ದರ ನಿಗದಿಯಾಗುತ್ತಿತ್ತು. ಅದರಲ್ಲಿ ಮದ್ಯ ತಯಾರಕರೇ ಇಎಎಲ್ ವೆಚ್ಚ ಭರಿಸಬೇಕಿತ್ತು. ಕರ್ನಾಟಕ ಮದ್ಯ ತಯಾರಕರ ಸಂಘದ ಮನವಿ ಆಧರಿಸಿ ಮೇ 22ರಂದು ಆದೇಶ ಹೊರಡಿಸಿರುವ ಅಬಕಾರಿ ಆಯುಕ್ತರು, ಮದ್ಯದ ಬಾಟಲಿಯ ಮೇಲಿನ ಮುದ್ರಿತ ದರದಿಂದ ಇಎಎಲ್ ವೆಚ್ಚವನ್ನು ಹೊರಗೆ ಇರಿಸಿದ್ದಾರೆ.

'ಮದ್ಯ ಮತ್ತು ವೈನ್ ಉತ್ಪನ್ನಗಳ ಗರಿಷ್ಠ ಮಾರಾಟ ದರ (ಎಂಆರ್‌ಪಿ) ಲೆಕ್ಕ ಹಾಕುವಾಗ ಅಬಕಾರಿ ಭದ್ರತಾ ಚೀಟಿಗಳ ವೆಚ್ಚವನ್ನು ಘೋಷಿತ ಬೆಲೆಯಲ್ಲಿ ತೋರಿಸದೇ ಪ್ರತ್ಯೇಕ ಭಾಗವಾಗಿ ತೋರಿಸಬೇಕು' ಎಂದು ಅಬಕಾರಿ ಆಯುಕ್ತ ಜೆ. ರವಿಶಂಕರ್ ಆದೇಶದಲ್ಲಿ ತಿಳಿಸಿದ್ದಾರೆ.

60 ಎಂ.ಎಲ್. ಮದ್ಯದ ಬಾಟಲಿ, 180 ಎಂ.ಎಲ್. ಮದ್ಯದ ಬಾಟಲಿ ಸೇರಿದಂತೆ ಎಲ್ಲ ಅಳತೆಯ ಬಾಟಲಿಗಳಿಗೂ ಒಂದು ಭದ್ರತಾ ಚೀಟಿ ಅಂಟಿಸಬೇಕಾಗುತ್ತದೆ. ಅದರ ಜತೆಗೆ, ಪ್ರತಿಯೊಂದು ಮದ್ಯದ ಪೆಟ್ಟಿಗೆಗೆ ತಲಾ ಎರಡು ಚೀಟಿಗಳನ್ನು ಅಂಟಿಸಬೇಕಾಗುತ್ತದೆ. ಈ ಎಲ್ಲ ವೆಚ್ಚವನ್ನೂ ಈಗ ಗ್ರಾಹಕರ ಮೇಲೆ ಹೊರಿಸಲಾಗಿದೆ.

ಎರಡೂವರೆ ವರ್ಷದ ಹಿಂದಿನ ಬೇಡಿಕೆ: ಇಎಎಲ್ ವೆಚ್ಚವನ್ನು ಮದ್ಯ ತಯಾರಕರ ಬದಲಿಗೆ ಗ್ರಾಹಕರಿಂದ ಸಂಗ್ರಹಿಸುವಂತೆ ಕರ್ನಾಟಕ ಮದ್ಯ ತಯಾರಕರ ಸಂಘದ ಅಧ್ಯಕ್ಷರು 2020ರ ಆಗಸ್ಟ್ 12ರದು ಅಬಕಾರಿ ಇಲಾಖೆಗೆ ಮನವಿ ಸಲ್ಲಿಸಿದ್ದರು. ಆ ಮನವಿಯನ್ನು ಆಧರಿಸಿ, ಬಿಜೆಪಿ ಸರ್ಕಾರದ ಕೊನೆಯ ಅವಧಿಯಲ್ಲಿ ಅಂದರೆ, 2023ರ ಮಾರ್ಚ್ 28ರಂದು ಅಬಕಾರಿ ಆಯುಕ್ತರು ಆದೇಶವೊಂದನ್ನು ಹೊರಡಿಸಿದ್ದರು. ಆ ಆದೇಶದಲ್ಲೇ ಜುಲೈ 1ರಿಂದ ಅನ್ವಯವಾಗುವಂತೆ ಇಎಎಲ್ ವೆಚ್ಚವನ್ನು ಮದ್ಯದ ಬಾಟಲಿಯ ಘೋಷಿತ ಬೆಲೆಯಿಂದ ಹೊರಗಿಡುವಂತೆ ತಿಳಿಸಲಾಗಿತ್ತು.

ಮೇ 22ರಂದು ಮತ್ತೊಂದು ಆದೇಶ ಹೊರಡಿಸಿರುವ ಅಬಕಾರಿ ಆಯುಕ್ತರು, ಮಾರ್ಚ್ 28ರ ಆದೇಶದಂತೆ ಮದ್ಯದ ದರ ನಿಗದಿಗೆ ಆದೇಶಿಸಿದ್ದಾರೆ. ಎಲ್ಲ ಮದ್ಯ ತಯಾರಕರು ಹಾಗೂ ಮದ್ಯ ಮಾರಾಟಗಾರರು ಮದ್ಯದ ಬಾಟಲಿಗಳ ಪರಿಷ್ಕೃತ ದರ ಪಟ್ಟಿಯನ್ನು ಅಬಕಾರಿ ಇಲಾಖೆಯಿಂದ ಪಡೆದುಕೊಳ್ಳುವಂತೆ ಸೂಚಿಸಿದ್ದಾರೆ.

ಅಕ್ರಮ: ಆರೋಪ ಅಲ್ಲಗಳೆದ ಹಣಕಾಸು ಇಲಾಖೆ ಅಧಿಕಾರಿ

ಅಬಕಾರಿ ಭದ್ರತಾ ಚೀಟಿಗಳ ವೆಚ್ಚವನ್ನು ಗ್ರಾಹಕರ ಮೇಲೆ ವರ್ಗಾಯಿಸಿರುವ ಪ್ರಕರಣದಲ್ಲಿ ಅಬಕಾರಿ ಹಾಗೂ ಹಣಕಾಸು ಇಲಾಖೆ ಅಧಿಕಾರಿಗಳು ಬೃಹತ್ ಪ್ರಮಾಣದ ಅವ್ಯವಹಾರ ನಡೆಸಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ದಿನೇಶ್ ಕಲ್ಲಹಳ್ಳಿ, ಚಾಮರಾಜಪೇಟೆಯ ವಕೀಲ ಗಿರೀಶ್ ಆರೋಪಿಸಿದ್ದಾರೆ.

ಆರೋಪದ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಹಣಕಾಸು ಇಲಾಖೆ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, 'ಇದು ಕ್ಷುಲ್ಲಕ ಆರೋಪ. ಅದರಲ್ಲಿ ಹುರುಳಿಲ್ಲ' ಎಂದರು.

₹1,000 ಕೋಟಿ ಹೊರೆ?

ಅಬಕಾರಿ ಭದ್ರತಾ ಚೀಟಿಗಳ ಮುದ್ರಣ ದರ ಪ್ರತಿ ಚೀಟಿಗೆ 27 ಪೈಸೆ ಇತ್ತು. ಅದನ್ನು 31.74 ಪೈಸೆಗೆ ಹೆಚ್ಚಿಸಲಾಗಿದೆ. ಗ್ರಾಹಕರು ಪ್ರತಿ ಬಾಟಲಿ ಮದ್ಯ ಖರೀದಿಗೆ ₹31.10 ಇಎಎಲ್ ವೆಚ್ಚ ನೀಡಬೇಕು. ಇದರಿಂದಾಗಿ ಮದ್ಯ ಕುಡಿಯುವ ಗ್ರಾಹಕರಿಗೆ ವರ್ಷಕ್ಕೆ ₹1,000 ಕೋಟಿಯಷ್ಟು ಹೊರೆ ಬೀಳಲಿದೆ ಎಂದು ಅಂದಾಜಿಸಲಾಗಿದೆ. ಈ ಮೊತ್ತವನ್ನು ಇದುವರೆಗೂ ಮದ್ಯ ತಯಾರಕರೇ ಭರಿಸುತ್ತಿದ್ದರು. ಗ್ರಾಹಕರಿಗೆ ಈ ಮೊತ್ತ ವರ್ಗಾವಣೆಯಾಗಿರುವುದರಿಂದ ಮದ್ಯ ತಯಾರಕರಿಗೆ ಇಷ್ಟು ಬೃಹತ್ ಮೊತ್ತ ಉಳಿಯಲಿದೆ.

ಕಮಿಷನ್ ದಂಧೆಗೆ ಸಂಪೂರ್ಣ ಕಡಿವಾಣ: ಸಿದ್ದರಾಮಯ್ಯ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಂದ ಕಮಿಷನ್ ವಸೂಲಿ ಮಾಡುವ ದಂಧೆಗೆ ಸಂಪೂರ್ಣ ಕಡಿವಾಣ ಹಾಕುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಿಗೆ ಶುಕ್ರವಾರ ಭರವಸೆ ನೀಡಿದ್ದಾರೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ನೇತೃತ್ವದ ನಿಯೋಗ ಮುಖ್ಯಮಂತ್ರಿಯವರನ್ನು ಭೇಟಿಮಾಡಿ, ರಾಜ್ಯದಲ್ಲಿ ಗುತ್ತಿಗೆದಾರರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿತು. ಹಿಂದಿನ ಸರ್ಕಾರದ ವಿರುದ್ಧ ಗುತ್ತಿಗೆದಾರರ ಸಂಘವು ಮಾಡಿದ್ದ ಶೇಕಡ 40ರಷ್ಟು ಕಮಿಷನ್ ಆರೋಪವೂ ಚರ್ಚೆಯಲ್ಲಿ ಪ್ರಸ್ತಾಪವಾಗಿದ್ದು, ತಮ್ಮ ಸರ್ಕಾರದಲ್ಲಿ ಅಂತಹ ದಂಧೆಗೆ ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ತಿಳಿಸಿದರು.

ಬಾಕಿ ಪಾವತಿಗೆ ಕ್ರಮ: 'ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ಗುತ್ತಿಗೆದಾರರಿಗೆ ₹ 15,000 ಕೋಟಿಗೂ ಹೆಚ್ಚಿನ ಬಿಲ್ ಪಾವತಿ ಬಾಕಿ ಇದೆ. ಇದರಿಂದ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿಲ್ ಪಾವತಿಯಲ್ಲಿ ನಿಯಮ ಪಾಲನೆ ಮತ್ತು ಪಾರದರ್ಶಕತೆ ಇಲ್ಲದಿರುವುದರಿಂದ ರಾಜಕೀಯ ಪ್ರಭಾವ ಹೊಂದಿಲ್ಲದ ಗುತ್ತಿಗೆದಾರರಿಗೆ ಅನ್ಯಾಯ ಆಗುತ್ತಿದೆ. ತಕ್ಷಣವೇ ಬಾಕಿ ಬಿಲ್ ಪಾವತಿಗೆ ಕ್ರಮ ಜರುಗಿಸಬೇಕು' ಎಂದು ನಿಯೋಗ ಮನವಿ ಮಾಡಿತು.

'ಹಿಂದಿನ ಸರ್ಕಾರದ ಅವಧಿಯಲ್ಲಿನ ಆರ್ಥಿಕ ಅಶಿಸ್ತು ಹಾಗೂ ಕಮಿಷನ್ ಹಾವಳಿಯಿಂದ ಗುತ್ತಿಗೆದಾರರಿಗೆ ಸಮಸ್ಯೆಯಾಗಿದೆ. ಬಿಜೆಪಿ ಸರ್ಕಾರ ರಾಜ್ಯದ ಆರ್ಥಿಕತೆಯನ್ನು ಹಳಿ ತಪ್ಪಿಸಿದೆ. ಅದನ್ನು ಸರಿಪಡಿಸಲು ಸ್ವಲ್ಪ ಕಾಲಾವಕಾಶ ಅಗತ್ಯ. ಬಜೆಟ್ ಅಧಿವೇಶನದ ಬಳಿಕ ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಬಾಕಿ ಬಿಲ್ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ಆರಂಭವಾಗಿದ್ದ ವಿವಿಧ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಈ ಸರ್ಕಾರ ಸ್ಥಗಿತಗೊಳಿಸಿದೆ. ತಕ್ಷಣವೇ ಆ ಟೆಂಡರ್ ಪ್ರಕ್ರಿಯೆಗಳನ್ನು ಮುಂದುವರಿಸಲು ಆದೇಶ ನೀಡಬೇಕು. ಬಿಬಿಎಂಪಿಯಲ್ಲಿನ ಗುತ್ತಿಗೆದಾರರ ಬಾಕಿ ಬಿಲ್ ಪಾವತಿ ಮಾಡಬೇಕು ಎಂದು ಗುತ್ತಿಗೆದಾರರ ಸಂಘದ ನಿಯೋಗ ಒತ್ತಾಯಿಸಿತು. ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಾದ ಆರ್.ಅಂಬಿಕಾಪತಿ, ಜಿ.ಎಂ. ರವೀಂದ್ರ, ಸಂಕಾಗೌಡ ಶಾನಿ, ನಾಗರಾಜ್, ಆರ್.ಮಂಜುನಾಥ್, ರಮೇಶ್ ನಿಯೋಗದಲ್ಲಿದ್ದರು.

ಭ್ರಷ್ಟಾಚಾರ ವಿರುದ್ಧದ ಹೋರಾಟ ನಿಲ್ಲದು: ಕೆಂಪಣ್ಣ

ಬೆಂಗಳೂರು: 'ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ ಕಮಿಷನ್ ದಂಧೆ ವಿರುದ್ಧ ಹೋರಾಟ ನಡೆಸಿದ್ದೆವು. ಈಗಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕಮಿಷನ್ ದಂಧೆ ನಡೆದರೂ ಬಹಿರಂಗಪಡಿಸುತ್ತೇವೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಾಕಿ ಇರುವ ಬಿಲ್ ಪಾವತಿ ಕುರಿತು ಮನವಿ ಮಾಡಲು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದೆವು. ಹಿಂದಿನ ಸರ್ಕಾರದ ಅವಧಿಯ ಕಮಿಷನ್ ದಂಧೆ ಕುರಿತು ಏನು ಹೇಳಬೇಕಿತ್ತೋ ಅದನ್ನು ಹೇಳಿದ್ದೇವೆ' ಎಂದರು.

'ಕಾಂಗ್ರೆಸ್ ಸರ್ಕಾರದಲ್ಲಿ ಕಮಿಷನ್ ನಿಗದಿಯಾಗಿದೆ' ಎಂಬ ಬಿಜೆಪಿ ಮುಖಂಡರ ಆರೋಪ ಕುರಿತು ಕೇಳಿದಾಗ, 'ಈ ಸರ್ಕಾರದಲ್ಲಿ ಈವರೆಗೆ ಯಾರೂ ನಮ್ಮ ಬಳಿ ಕಮಿಷನ್ ಕೇಳಿಲ್ಲ. ಯಾರಾದರೂ ಸಚಿವರು ಅಥವಾ ಅಧಿಕಾರಿಗಳು ಕಮಿಷನ್‌ಗೆ ಬೇಡಿಕೆ ಇಟ್ಟರೆ ಅದನ್ನೂ ಬಹಿರಂಗಪಡಿಸುತ್ತೇವೆ' ಎಂದು ಉತ್ತರಿಸಿದರು.

'ಹಿಂದಿನ ಸರ್ಕಾರದ ವಿರುದ್ಧದ ಆರೋಪಕ್ಕೆ ದಾಖಲೆ ಒದಗಿಸಿಲ್ಲ' ಎಂಬ ಟೀಕೆ ಬಗ್ಗೆ ಕೇಳಿದಾಗ, 'ಆ ವಿಚಾರ ಈಗ ನ್ಯಾಯಾಲಯದಲ್ಲಿದೆ. ಸೂಕ್ತ ಸಂದರ್ಭದಲ್ಲಿ ಬಹಿರಂಗಪಡಿಸುತ್ತೇವೆ' ಎಂದರು.

ಸುದ್ದಿ 2 ನಿಮಿಷ

ರೈತರ ಹಿತಕ್ಕಾಗಿ ಹಾಲಿನ ದರ ಏರಿಕೆ: ಸಚಿವ ರಾಜಣ್ಣ ಸ್ಪಷ್ಟನೆ

ಹಾಸನ: 'ಹಾಲಿನ ದರ ಹೆಚ್ಚಿಸಬೇಕೆಂಬುದು ನನ್ನ ಅಭಿಪ್ರಾಯ, ಸರ್ಕಾರದ್ದಲ್ಲ. ಉತ್ಪಾದನಾ ವೆಚ್ಚ ಹೆಚ್ಚಿರುವುದರಿಂದ ಪರಿಹಾರವಾಗಿ ರೈತರಿಗೆ ಹೆಚ್ಚುವರಿಯಾಗಿ ₹ 5 ದೊರಕಿಸುವುದು ನನ್ನ ಉದ್ದೇಶ' ಎಂದು ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಸ್ಪಷ್ಟಪಡಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ದರ ಏರಿಕೆ ವಿಷಯದಲ್ಲಿ ಎಲ್ಲರೂ ಗ್ರಾಹಕರ ಬಗ್ಗೆ ಮಾತನಾಡುತ್ತಿದ್ದಾರೆಯೇ ಹೊರತು, ರೈತರ ಬಗ್ಗೆ ಹೇಳುತ್ತಿಲ್ಲ. ಜಾನುವಾರುಗಳ ಆಹಾರ ಪದಾರ್ಥದ ಬೆಲೆ ಹೆಚ್ಚಿ ಹಾಲು ಉತ್ಪಾದಕರಿಗೆ ಈಗಾಗಲೇ ತೊಂದರೆಯಾಗಿದೆ. ಚರ್ಮಗಂಟು ರೋಗದಿಂದ ಜಾನುವಾರುಗಳು ಸಾವನ್ನಪ್ಪಿ ನಷ್ಟ ಅನುಭವಿಸುತ್ತಿದ್ದಾರೆ' ಎಂದರು.

'ದರ ಹೆಚ್ಚಿಸುವುದೆಂದರೆ ಗ್ರಾಹಕರಿಗೆ ಹೊರೆ ಮಾಡುವುದಲ್ಲ. ರೈತರ ಹಿತಾಸಕ್ತಿ ಕಾಪಾಡುವುದು' ಎಂದರು.

'ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲಾಗುವುದು. ಪಡಿತರ ಅಕ್ಕಿಯೊಂದಿಗೆ 2 ಕೆ.ಜಿ. ಜೋಳ, ರಾಗಿ ಅಥವಾ ಗೋಧಿ ಸೇರಿಸಿ 10 ಕೆ.ಜಿ. ಧಾನ್ಯ ಕೊಡುತ್ತೇವೆ' ಎಂದರು.

'ಹಾಸನದಲ್ಲಿ ಜೂನ್ 27ರಂದು ನಡೆಯಲಿರುವ ರಾಜ್ಯಮಟ್ಟದ ಕೆಂಪೇಗೌಡ ಜಯಂತಿಗೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿಯನ್ನು ಆಹ್ವಾನಿಸಲಾಗುವುದು' ಎಂದರು.



ಡಂಡೀ ವಿ.ವಿಗೆ ರಾಜ್ಯದ 13 ವಿದ್ಯಾರ್ಥಿಗಳು

ಬೆಂಗಳೂರು: ಸ್ಕಾಟ್‌ಲೆಂಡ್‌ನ ಡಂಡೀ ವಿಶ್ವವಿದ್ಯಾಲಯದಲ್ಲಿ ನಡೆಯುವ ಸಂಶೋಧನೆ ಆಧಾರಿತ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜ್ಯದ ಮೂರು ವಿಶ್ವವಿದ್ಯಾಲಯಗಳ 13 ವಿದ್ಯಾರ್ಥಿಗಳಿಗೆ ಅವಕಾಶ ದೊರೆತಿದೆ.

ಗುಲ್ಬರ್ಗಾ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಜೂನ್ 25ರಿಂದ ಜುಲೈ 2ರವರೆಗೆ ಡಂಡೀ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವರು. ವಿದ್ಯಾರ್ಥಿಗಳ ಪ್ರಯಾಣ ಹಾಗೂ ವಸತಿಗೆ ಬ್ರಿಟಿಷ್ ಕೌನ್ಸಿಲ್ ವ್ಯವಸ್ಥೆ ಮಾಡಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಾಲ್ಕು ತಿಂಗಳು ವಿವಿಧ ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ. ವಿದ್ಯಾರ್ಥಿಗಳು ರೂಪಿಸಿದ ನವೀನ ರೀತಿಯ ಸಂಶೋಧನಾ ಯೋಜನೆಗಳ ಆಧಾರದಲ್ಲಿ ತಂಡವನ್ನು ಆಯ್ಕೆ ಮಾಡಲಾಗಿದೆ. ಉನ್ನತ ಶಿಕ್ಷಣ ಪರಿಷತ್ತು, ಸ್ಥಳೀಯ ಹಾಗೂ ಡಂಡೀ ವಿಶ್ವವಿದ್ಯಾಲಯಗಳು ತರಬೇತಿ ನೀಡಿವೆ. ಅಲ್ಲದೇ, ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಲ್ಲಿ 12 ತಿಂಗಳ ಸ್ನಾತಕೋತ್ತರ ಕೋರ್ಸ್‌ಗೆ ಪ್ರವೇಶ ಪಡೆಯಲು ಬ್ರಿಟಿಷ್ ಕೌನ್ಸಿಲ್ ವಿದ್ಯಾರ್ಥಿವೇತನವನ್ನೂ ನೀಡಿದೆ ಎಂದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಶರಣ ಬಸವೇಶ್ವರ ಕಾಲೇಜಿನ ಐವರು ವಿದ್ಯಾರ್ಥಿಗಳು 'ಸ್ಥಳೀಯ ಬುಡಕಟ್ಟು ಜನರ ವ್ಯಕ್ತಿಚಿತ್ರಣ ಮತ್ತು ಜೀವನಿರೋಧಕ ಶಕ್ತಿ' ಕುರಿತು, ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳು 'ಡೀಸೆಲ್‌ಗೆ ಪರ್ಯಾಯವಾಗಿ ಪ್ಲಾಸ್ಟಿಕ್ ಮತ್ತು ಅಡುಗೆ ಎಣ್ಣೆ ತ್ಯಾಜ್ಯದಿಂದ ಇಂಧನ ಉತ್ಪಾದನೆ', ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಾಲ್ವರು ವಿದ್ಯಾರ್ಥಿಗಳು 'ಸೌರಶಕ್ತಿ ಬಳಸಿ ನೀರಿನ ಸದ್ಬಳಕೆ ಮಾಡುವ ಸ್ವಯಂಚಾಲಿತ ನೀರಾವರಿ ವ್ಯವಸ್ಥೆ'ಯ ಪ್ರಾತ್ಯಕ್ಷಿಕೆಗಳನ್ನು ಸಿದ್ಧಪಡಿಸಿದ್ದಾರೆ ಎಂದು ವಿವರ ನೀಡಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಕೊಡಿ: ವರಿಷ್ಠರಿಗೆ ಸೋಮಣ್ಣ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ನನಗೂ ಒಂದು ಅವಕಾಶ ಕೊಡಿ' ಎಂದು ಮಾಜಿ ಸಚಿವ ವಿ.ಸೋಮಣ್ಣ ಪಕ್ಷದ ವರಿಷ್ಠರಿಗೆ ಮನವಿ ಮಾಡಿದ್ದಾರೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಯಾರನ್ನು ನೇಮಿಸುತ್ತಾರೆ ಎಂಬ ಚರ್ಚೆ ನಡೆಯುತ್ತಿರುವ ಮಧ್ಯೆಯೇ ಸೋಮಣ್ಣ ಅವರು ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿ ತಮ್ಮ ಆಕಾಂಕ್ಷೆ ತೋಡಿಕೊಂಡರು.

'ಅಧ್ಯಕ್ಷ ಸ್ಥಾನಕ್ಕೆ ಗಾಂಭೀರ್ಯ ತರುವುದರ ಜತೆಗೆ ನನಗೆ ನೀಡುವ ಕೆಲಸವನ್ನು ಸವಾಲಾಗಿ ತೆಗೆದುಕೊಂಡು ಕಾರ್ಯ ನಿರ್ವಹಿಸುತ್ತೇನೆ. ದೊಡ್ಡ ರಾಜಕಾರಣಿಗಳ ಗರಡಿಯಲ್ಲಿ ಪಳಗಿರುವ ನನಗೆ 100 ದಿನ ಕೊಟ್ಟು ನೋಡಲಿ. ಸುಳ್ಳು ಹೇಳಲ್ಲ, ಹೇಡಿಯೂ ಅಲ್ಲ. ಕೊಟ್ಟ ಕೆಲಸವನ್ನು ಪ್ರಾಣದ ಹಂಗು ತೊರೆದು ಸಾಧಿಸಿ ತೋರಿಸಿದ್ದೇನೆ' ಎಂದರು.

'ಈ ವಿಚಾರವಾಗಿ ಕೇಂದ್ರದ ನಾಯಕರಿಗೆ ಪತ್ರ ಬರೆದಿದ್ದೇನೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಿಟ್ಟು ಇತರ ಎಲ್ಲ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದೇನೆ. ರಾಜಕೀಯದಲ್ಲಿ 45 ವರ್ಷಗಳ ಅನುಭವ ಇದೆ. ಪಕ್ಷದಲ್ಲಿ ಶಿಸ್ತು ಮೂಡಿಸುತ್ತೇನೆ. ಅಜಾಗ್ರತೆ ಆಗಿರುವುದನ್ನು ಜಾಗ್ರತೆ ಮಾಡುತ್ತೇನೆ' ಎಂದು ಹೇಳಿದರು.

'ಒಂದು ವೇಳೆ ನಾನು ಅಧ್ಯಕ್ಷನಾದರೆ ನನ್ನ ಮಾತು ಎಲ್ಲರೂ ಕೇಳಬೇಕು. ಬೇರೆಯವರು ಇದ್ದಾಗ ಕೇಳಲಿಲ್ಲವೇ? ಯಡಿಯೂರಪ್ಪ ಅವರು ರಾಷ್ಟ್ರೀಯ ನಾಯಕರು. ಅವರ ಬಳಿಯೂ ಹೋಗುತ್ತೇನೆ. ಸಹಕಾರ ಕೇಳುತ್ತೇನೆ' ಎಂದರು.



ಸಮಾಲೋಚನೆ– ಸಂಗೀತ

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ 'ವೈ–20 ಸಮಾಲೋಚನೆ - ಯುವಜನ ಆರೋಗ್ಯದ ಬಗ್ಗೆ ಚರ್ಚೆ' ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್, ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ಪ್ರೊ.ಬಿಂದು ಕುಟ್ಟಿ, ಗಾಯಕಿ, ಸಂಗೀತಗಾರ್ತಿ ಮತ್ತು ನಟಿ ವಸುಂಧರಾ ದಾಸ್ ಡ್ರಮ್ ಬಾರಿಸಿದರು

-ಪ್ರಜಾವಾಣಿ ಚಿತ್ರ/ ರಂಜು ಪಿ



ಬೆಂಗಳೂರಿನಲ್ಲಿ ಶುಕ್ರವಾರ ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಾಲು ಹೊದಿಸಿ ಸ್ವಾಗತಿಸಿದರು

ಶಾಶ್ವತ ಅಲೆಮಾರಿ ಆಯೋಗ ರಚನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲೆಮಾರಿ ಜನಾಂಗದ ಸ್ಥಿತಿಗತಿಗಳ ಸುಧಾರಣೆಗೆ ಶಾಶ್ವತ ಅಲೆಮಾರಿ ಆಯೋಗ ರಚಿಸಬೇಕು ಎಂದು ನಗರದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಎಸ್‌ಸಿ, ಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ಹಾಗೂ ಹಿಂದುಳಿದ ಅಲೆಮಾರಿಗಳ ಸಮನ್ವಯ ಒಕ್ಕೂಟದ ಮುಖಂಡರು ಆಗ್ರಹಿಸಿದ್ದಾರೆ.

ಅಲೆಮಾರಿ ಜನಾಂಗಗಳು ಶಿಕ್ಷಣ, ಉದ್ಯೋಗ, ಆರ್ಥಿಕ, ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿವೆ. ಪ್ರಸ್ತುತ ಜನಾಂಗದ ಅಭಿವೃದ್ಧಿಗೆ ಇರುವ ಕಾರ್ಯಕ್ರಮಗಳ ಜತೆಗೆ ಹೆಚ್ಚುವರಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮ ರೂಪಿಸಲು, ಸ್ಥಿತಿಗತಿಗಳ ವೈಜ್ಞಾನಿಕವಾಗಿ ಅಧ್ಯಯನ ನಡೆಸಲು ತಜ್ಞರು, ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಅಲೆಮಾರಿ ಆಯೋಗ ರಚನೆಯ ಅಗತ್ಯವಿದೆ ಎಂದು ಮುಖಂಡರಾದ ವೆಂಕಟರಮಣಯ್ಯ, ಇಂದೂಧರ ಹೊನ್ನಾಪುರ, ಕಿರಣ್ ಕುಮಾರ್ ಕೊತ್ತಗೆರೆ, ಮಂಜುನಾಥ್ ದಾಯತ್ಕರ್, ವೆಂಕಟೇಶ ದೊರ, ಬಸವರಾಜು ನಾರಯಣಂಕರ್, ಲೋಹಿತಾಕ್ಷ, ಗೋಪಾಲಕೃಷ್ಣ, ಸಿದ್ದಪ್ಪಾಜಿ ಕಮ್ಮಾರ, ರಾಘವೇಂದ್ರ ಮುಕ್ರಿ, ಶೇಖರ್ ಜಟ್ಟಿ ಹಳ್ಳೇರ್ ಪ್ರತಿಪಾದಿಸಿದರು.

ರಾಜ್ಯದಲ್ಲಿ ಅಲೆಮಾರಿಗಳಿಗೆ ಜಾತಿ ಪ್ರಮಾಣ ಪತ್ರ ಸಿಗುವಲ್ಲೂ ತೊಡಕುಗಳಿವೆ. ನಿರ್ದಿಷ್ಟ ನೆಲೆ ಮತ್ತು ವೃತ್ತಿ ಇಲ್ಲದ ಕಾರಣ ಸಮೀಕ್ಷೆಗಳಲ್ಲೂ ನಿಖರ ಮಾಹಿತಿ ಸಿಕ್ಕಿಲ್ಲ. ಪಾರಂಪರಿಕ ಕಸುಬುಗಳೂ ರೂಪಾಂತರಗೊಂಡಿವೆ. ಕೇಂದ್ರ ಸರ್ಕಾರದ ನಿರ್ದೇಶನದಂತೆ ಸಮಾಜ ಕಲ್ಯಾಣ ಇಲಾಖೆ ಸಮೀಕ್ಷೆ ನಡೆಸಬೇಕು. ವಸ್ತುನಿಷ್ಠ ವರದಿ ಸಿದ್ಧಪಡಿಸಬೇಕು. ಅಲೆಮಾರಿ ಜನರ ಅಸ್ಮಿತೆಗೆ ಜೀವತುಂಬಬೇಕು ಎಂದು ಮುಖಂಡರು ಒತ್ತಾಯಿಸಿದ್ದಾರೆ.

ಸಮುದಾಯಗಳ ಕುಲಃಶಾಸ್ತ್ರ ಅಧ್ಯಯನ ನಡೆಸಬೇಕು. ಪರ್ಯಾಯ ಹೆಸರುಗಳನ್ನು ಗುರುತಿಸಿ, ಅಲೆಮಾರಿಗಳಿಗೆ ಜಾತಿಪತ್ರ ನೀಡಬೇಕು. ನಾಗರಿಕ ಸೌಲಭ್ಯ ಕಲ್ಪಿಸಬೇಕು. ಶಾಶ್ವತ ವಸತಿ ಕಲ್ಪಿಸಲು ಬಜೆಟ್‌ನಲ್ಲಿ ಇಟ್ಟಿದ್ದ ₹ 550 ಕೋಟಿಯನ್ನು ಬಳಕೆ ಮಾಡಬೇಕು. ಅರ್ಜಿ ಸಲ್ಲಿಸಿದ ಎಲ್ಲರಿಗೂ ಮನೆ ನಿರ್ಮಿಸಿಕೊಡಬೇಕು ಎಂದೂ ಆಗ್ರಹಿಸಿದ್ದಾರೆ.

'ಶಿಬಿರಕ್ಕೂ ಮುನ್ನವೇ ವಿಮರ್ಶೆ ಸಲ್ಲ'

ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಕುರಿತ ಆಕ್ಷೇಪಕ್ಕೆ ಯು.ಟಿ.ಖಾದರ್ ಸಮಜಾಯಿಷಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ನೂತನ ಶಾಸಕರಿಗೆ ತರಬೇತಿ ನೀಡಲು ಶಿಬಿರ ಆಯೋಜಿಸಿ, ಸಂಸದೀಯಪಟುಗಳು, ಮಾಜಿ ಸ್ಪೀಕರ್‌ಗಳು, ಮಾಜಿ ಕಾನೂನು ಸಚಿವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಿದ್ದೇವೆ. ಶಿಬಿರ ಇನ್ನೂ ಆರಂಭವೇ ಆಗಿಲ್ಲ. ಅದಕ್ಕೆ ಮುನ್ನವೇ ಆ ಬಗ್ಗೆ ವಿಶ್ಲೇಷಣೆ ಮಾಡುವುದು ಸರಿಯಲ್ಲ. ತರಬೇತಿ ಶಿಬಿರ ನಡೆದ ಬಳಿಕ ವಿಮರ್ಶೆ ಮಾಡಿದರೆ ಅದಕ್ಕೊಂದು ಅರ್ಥವಿದೆ' ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಸಂಸದೀಯ ಪಟುಗಳಾದ ಎಚ್.ಕೆ.ಪಾಟೀಲ, ಬಿ.ಎಲ್.ಶಂಕರ್, ಕೃಷ್ಣ ಭೈರೇಗೌಡ, ಟಿ.ಬಿ.ಜಯಚಂದ್ರ, ಸುರೇಶ್ ಕುಮಾರ್, ಮುಖ್ಯಮಂತ್ರಿ ಚಂದ್ರು ನೂತನ ಶಾಸಕರಿಗೆ ತರಬೇತಿ ಕೊಡುತ್ತಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ ಅವರ ಜೊತೆ ಸಂವಾದ ಏರ್ಪಡಿಸಿದ್ದೇವೆ. ಜೊತೆಗೆ ರಾಜಕೀಯ ಹಾಗೂ ಜನರ ಕೆಲಸಗಳನ್ನು ಒತ್ತಡರಹಿತವಾಗಿ ನಿಭಾಯಿಸುವ ಬಗ್ಗೆ ತಿಳಿಸಲು ಕೆಲವೊಂದು ಆಧ್ಯಾತ್ಮಿಕ ವ್ಯಕ್ತಿಗಳನ್ನು ಆಹ್ವಾನಿಸಿದ್ದೇವೆ. ಕೆಲವರು ಒಪ್ಪಿದ್ದಾರೆ. ಯಾರೆಲ್ಲ ಭಾಗವಹಿಸುತ್ತಾರೆ ಎಂಬುದು ಇನ್ನೂ ಖಚಿತವಾಗಿಲ್ಲ' ಎಂದರು.

'ಶಿಬಿರದ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಳ್ಳದೇ ಮಾಧ್ಯಮಗಳಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ಬಂದ ಮಾಹಿತಿ ಆಧಾರದಲ್ಲಿ ನನ್ನ ಹತ್ತಿರ ಸ್ಪಷ್ಟನೆ ಕೇಳದೆಯೇ, ತಕ್ಷಣವೇ ಹೇಳಿಕೆ ಕೊಡುವುದು, ಸಾಮಾಜಿಕ ಮಾಧ್ಯಮಗಳಲ್ಲಿ ಬರೆಯುವುದು ಅವರವರ ವ್ಯಕ್ತಿತ್ವಕ್ಕೆ ಬಿಟ್ಟದ್ದು. ಅದರ ಬಗ್ಗೆ ನಾನೇನೂ ಹೇಳಲು ಹೋಗುವುದಿಲ್ಲ. ಅವರೇ ಆತ್ಮಾವಲೋಕನ ಮಾಡಿಕೊಳ್ಳಲಿ' ಎಂದು ಹೇಳಿದರು.

'ರವಿಶಂಕರ ಗುರೂಜಿ ಊರಿನಲ್ಲೇ ಇಲ್ಲ. ನಾನು ಅವರನ್ನು ಆಗಾಗ ಭೇಟಿ ಆಗುತ್ತಿರುತ್ತೇನೆ. ಆರೋಗ್ಯ ಸಚಿವನಾಗಿದ್ದಾಗಿನಿಂದಲೂ ಅವರ ಜೊತೆ ಆತ್ಮೀಯ ಮತ್ತು ಮಾನವೀಯ ಸಂಬಂಧವಿದೆ. ಊರಿನಲ್ಲೇ ಇಲ್ಲದ ಅವರನ್ನು ಆಹ್ವಾನಿಸಿದ್ದೇನೆ ಎಂದು ಹೇಳುವುದು ಸರಿಯಲ್ಲ' ಎಂದರು.

'ತರಬೇತಿ ಹೇಗೆ ನಡೆಯುತ್ತದೆ ನೋಡಲಿ. ಚೆನ್ನಾಗಿದ್ದರೆ ಅಥವಾ ಏನಾದರೂ ಹೆಚ್ಚು ಕಡಿಮೆ ಇದ್ದರೆ ಆಗ ಸಲಹೆ ನೀಡಲಿ. ಮುಂದೆಯೂ ಇಂತಹ ಬಹಳಷ್ಟು ತರಬೇತಿ ಶಿಬಿರಗಳು ನಡೆಯಲಿವೆ. ಯಾರಿಗೆಲ್ಲ ಅವಕಾಶ ಬೇಕೋ ಆಗಲೂ ನೀಡಬಹುದು' ಎಂದರು.

ಸಚಿವರ ಜೊತೆ ಸಭೆ ನಡೆಸಿದ ಖಾದರ್: ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಶುಕ್ರವಾರ ನಡೆದ ಜಿಲ್ಲಾ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ವೇದಿಕೆ ಹಂಚಿಕೊಂಡರು. ಸಚಿವರ ಜೊತೆ ಸೇರಿ ಸಭೆ ನಡೆಸಿದರು.



ಮಂಗಳೂರಿನಲ್ಲಿ ಶುಕ್ರವಾರ ನಡೆದ ಕೆಡಿಪಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿದರು. ಎಸ್‌ಪಿ ಸಿ.ಬಿ. ರಿಷ್ಯಂತ್, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್, ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

'ಕನಿಷ್ಠ ವೇತನ ಕಾಯ್ದೆ ತಿದ್ದುಪಡಿಗೆ ಚಿಂತನೆ'

ಬೆಂಗಳೂರು: ಸದ್ಯದ ಪರಿಸ್ಥಿತಿಗೆ ಪೂರಕವಾಗಿ ಕನಿಷ್ಠ ವೇತನ ಕಾಯ್ದೆಗೆ ತಿದ್ದುಪಡಿ ತರುವ ಚಿಂತನೆ ನಡೆದಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಕನಿಷ್ಠ ವೇತನ ಕಾಯ್ದೆ ತಿದ್ದುಪಡಿಯೂ ಸೇರಿದಂತೆ ಹಲವು ಬೇಡಿಕೆಗಳನ್ನು ಕಾರ್ಮಿಕ ಸಂಘಟನೆಗಳ ಪ್ರಮುಖರು ಮಂಡಿಸಿದ್ದಾರೆ. ಎಲ್ಲ ಬೇಡಿಕೆಗಳನ್ನೂ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಈಗ ದುಡಿಮೆಯ ಸ್ವರೂಪ ಬದಲಾಗಿದೆ. ಮನೆಯಿಂದ ಕೆಲಸ ಮಾಡುವವರ ಸಂಖ್ಯೆಯೂ ಹೆಚ್ಚುತ್ತಿದೆ. ಅವರದ್ದೇ ಸಂಘಟನೆಯೂ ಇದೆ. ಎಲ್ಲ ಕಾರ್ಮಿಕರಿಗೆ ಅನುಕೂಲವಾಗುವಂತೆ ನಿರ್ಧಾರ ಕೈಗೊಳ್ಳುತ್ತೇವೆ ಎಂದರು.

ಸುಧಾ ಮೂರ್ತಿ, ವಿಜಯಶ್ರೀ, ಚಳ್ಳೂರಗೆ ಸಾಹಿತ್ಯ ಪುರಸ್ಕಾರ

ಒಂದನೇ ಪುಟದಿಂದ...

ಪ್ರಶಸ್ತಿ ಪುರಸ್ಕೃತರು ತಲಾ ₹50 ಸಾವಿರ ನಗದು ಹಾಗೂ ಫಲಕಗಳನ್ನು ಪಡೆಯಲಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಅಕಾಡೆಮಿ ಪ್ರಕಟಣೆ ತಿಳಿಸಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಳ್ಳೂರಿನ ಮಂಜುನಾಯಕ ಅವರು ಪತ್ರಕರ್ತರಾಗಿದ್ದು, ಪ್ರಸ್ತುತ ಕನ್ನಡದ ಮನರಂಜನಾ ವಾಹಿನಿ ಕಲರ್ಸ್ ಕನ್ನಡದಲ್ಲಿ ಉದ್ಯೋಗಿ. 'ಫೂ ಮತ್ತು ಇತರ ಕತೆಗಳು' ಅವರ ಮೊದಲ ಕಥಾಸಂಕಲನವಾಗಿದೆ.

ವಿಜಯಶ್ರೀ ಹಾಲಾಡಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಾಲಾಡಿ ಗ್ರಾಮದವರು. 'ಬೀಜ ಹಸಿರಾಗುವ ಗಳಿಗೆ', 'ಪಪ್ಪು ನಾಯಿಯ ಪ್ರೀತಿ' ಇವರ ಕೃತಿಗಳು. 'ಪಪ್ಪು ನಾಯಿಯ ಪ್ರೀತಿ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2015ರ ಪುಸ್ತಕ ಬಹುಮಾನ ದೊರೆತಿದೆ.

ಯುವ ಪುರಸ್ಕಾರಕ್ಕೆ ಕನ್ನಡ ಹಿರಿಯ ವಿಮರ್ಶಕರಾದ ಡಾ.ಎಚ್.ಎಸ್. ರಾಘವೇಂದ್ರ ರಾವ್, ಡಾ.ಕೆ.ಮರುಳಸಿದ್ಧಪ್ಪ, ಎಂ.ಆರ್. ಕಮಲಾ ತೀರ್ಪುಗಾರರಾಗಿದ್ದರು. ಬಾಲ ಸಾಹಿತ್ಯ ಪುರಸ್ಕಾರಕ್ಕೆ ಲೇಖಕರಾದ ಡಾ.ಜಯಶ್ರೀ ಸಿ.ಕಂಬಾರ, ಡಾ.ಆನಂದ ವಿ.ಪಾಟೀಲ, ಡಾ.ಮೂಡ್ನಾಕೂಡು ಚಿನ್ನಸ್ವಾಮಿ ತೀರ್ಪುದಾರರಾಗಿದ್ದರು.

साहित्य अकादेमी

ಬಜೆಟ್ ಅಧಿವೇಶನದ ಬಳಿಕ ತಜ್ಞರ ಜತೆ ಚರ್ಚಿಸಿ ಶಿಫಾರಸು- ಸಿ.ಎಂ

ಒಬಿಸಿ ಪಟ್ಟಿಗೆ ಪಂಚಮಸಾಲಿ ಸೇರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯವನ್ನು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲು ಶಿಫಾರಸು ಮಾಡುವ ಬಗ್ಗೆ ಬಜೆಟ್ ಅಧಿವೇಶನದ ಬಳಿಕ ಸಂವಿಧಾನ ತಜ್ಞರ ಸಭೆ ಕರೆದು ಸಂವಿಧಾನಾತ್ಮಕವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಶುಕ್ರವಾರ ತಮ್ಮನ್ನು ಭೇಟಿ ಮಾಡಿದ ನಿಯೋಗದ ಜತೆ ಅವರು ಮಾತನಾಡಿದರು.


ಕಾಟಾಚಾರಕ್ಕಾಗಿ ಮೀಸಲಾತಿ ಕೊಡಬಾರದು. ಬಿಜೆಪಿಗೆ ಮೀಸಲಾತಿ ಕೊಡುವುದು ಬೇಕಾಗಿರಲಿಲ್ಲ. ಆದ್ದರಿಂದಲೇ ನ್ಯಾಯಾಲಯಕ್ಕೆ ಹೋದರೆ ಬಿದ್ದು ಹೋಗುವ ರೀತಿಯಲ್ಲಿ ಕಾಟಾಚಾರಕ್ಕೆ ಮೀಸಲಾತಿ ಕೊಟ್ಟಿದ್ದರು. ಇದರಿಂದ ಗೊಂದಲ ಸೃಷ್ಟಿಯಾಗಿದೆ. ಸಂವಿಧಾನ ತಜ್ಞರ ಜತೆ ಚರ್ಚಿಸಿ ಗೊಂದಲ ಬಗೆಹರಿಸಬೇಕಾಗಿದೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಹಿಂದಿನ ಸರ್ಕಾರ ಮೀಸಲಾತಿ ವಿಚಾರದಲ್ಲಿ ತರಾತುರಿಯಲ್ಲಿ ನಿರ್ಧಾರ ಕೈಗೊಂಡು ಗೊಂದಲ ಸೃಷ್ಟಿಸಿದೆ. ಮೂಗಿಗೆ ತುಪ್ಪ ಸವರುವ ಬದಲು ಹಣೆಗೆ ತುಪ್ಪ ಸವರಿದೆ ಎಂದ ಮುಖ್ಯಮಂತ್ರಿಯವರು, ಮೀಸಲಾತಿ ವಿಚಾರವಾಗಿ ಆತುರದ ನಿರ್ಧಾರ ಸಲ್ಲದು. ಸಂವಿಧಾನಾತ್ಮಕ, ಕಾನೂನಿನ ಚೌಕಟ್ಟಿನಲ್ಲಿ ತೀರ್ಮಾನ ಮಾಡಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ವಿನಯ್ ಕುಲಕರ್ಣಿ, 'ಮುಸ್ಲಿಂ ಸಮುದಾಯದ ಮೀಸಲಾತಿ ಕಿತ್ತುಕೊಳ್ಳುವುದನ್ನು ನಾವು ಅಂದೇ ವಿರೋಧಿಸಿದ್ದೆವು' ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಸ್ವಾಮೀಜಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿದಲ್ಲಿ ಅವರೂ ಮುಖ್ಯವಾಹಿನಿಗೆ ಬರಲು ಅನುಕೂಲವಾಗುತ್ತದೆ ಎಂದರು.

ಪಂಚಮಸಾಲಿ ಸಮುದಾಯದ 15 ಮಂದಿ ಶಾಸಕರು ಮತ್ತು ಪ್ರಮುಖರು ಹಾಜರಿದ್ದರು. ಸಿದ್ದರಾಮಯ್ಯ ಭೇಟಿ ಬಳಿಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ನಿಯೋಗ, ಮನವಿ ಸಲ್ಲಿಸಿತು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಜತೆ ಮಾತುಕತೆ ನಡೆಸಿದರು.

ಸಿ.ಎಂ ಕೊಂಡಾಡಿದ ಸ್ವಾಮೀಜಿ

ಜಯಮೃತ್ಯುಂಜಯ ಸ್ವಾಮೀಜಿ ಅವರು ಸಭೆಯಲ್ಲಿ ಮಾತನಾಡಿ, 'ನುಡಿದಂತೆ ನಡೆದ ಮುಖ್ಯಮಂತ್ರಿಗಳು ನೀವು. ಬಸವಣ್ಣ ಅವರ ಭಾವಚಿತ್ರವನ್ನು ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯಗೊಳಿಸಿದವರು, ರಾಣಿ ಚನ್ನಮ್ಮ ಜಯಂತಿಯನ್ನು ಮೊದಲಬಾರಿಗೆ ಆಚರಿಸಿದವರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಪ್ರಾಯೋಜಿತ ಉಗ್ರವಾದ ಕಡಿವಾಣಕ್ಕೆ ಕ್ರಮ ಅಗತ್ಯ’

ವಾಷಿಂಗ್ಟನ್ (ಪಿಟಿಐ): ಯಾವುದೇ ನೆಪಗಳಿಗೆ ಆಸ್ಪದ ನೀಡದೆ ಸರ್ಕಾರಿ ಪ್ರಾಯೋಜಿತ ಭಯೋತ್ಪಾದನೆಯನ್ನು ಹತ್ತಿಕ್ಕಲು ಕಠಿಣ ಕ್ರಮ ಜರುಗಿಸಬೇಕಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ಪರೋಕ್ಷವಾಗಿ ನೆರೆಯ ಪಾಕಿಸ್ತಾನ ವಿರುದ್ಧ ಹರಿಹಾಯ್ದರು.

‘9/11 ಕೃತ್ಯ ಸಂಭವಿಸಿ ಎರಡು ದಶಕ, 26/11 ಕೃತ್ಯ ಘಟಿಸಿ ದಶಕಗಳೇ ಕಳೆದುಹೋಗಿವೆ. ಆದರೆ, ಭಯೋತ್ಪಾದನೆ ಮತ್ತು ತೀವ್ರಗಾಮಿತನ ಇನ್ನೂ ಉಳಿದುಕೊಂಡಿವೆ. ಇಡೀ ಜಗತ್ತಿಗೆ ಬೆದರಿಕೆ ಒಡ್ಡುತ್ತಿವೆ’ ಎಂದು ಮೋದಿ ವಸ್ತುಸ್ಥಿತಿ ಗಮನಕ್ಕೆ ತಂದರು.

ಇಂಥ ಪ್ರತಿಗಾಮಿ ಚಿಂತನೆಗಳು ಹೊಸ ಗುರುತು, ಹೊಸ ಮಾದರಿ ಪಡೆಯುತ್ತಿರುತ್ತವೆ. ಆದರೆ, ಅವುಗಳ ಉದ್ದೇಶ ಒಂದೇ ಆಗಿರುತ್ತದೆ. ಭಯೋತ್ಪಾದನೆ ಎಂಬುದು ಮನುಕುಲದ ವೈರಿ. ಇದನ್ನು ಹತ್ತಿಕ್ಕಲು ‘ಆದರೆ, ಹೋದರೆ ಎಂಬ ನೆಪಗಳಿರಬಾರದು’ ಎಂದರು.

ಬಾಂಧವ್ಯ ವೃದ್ಧಿ: ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಭಯ ನಾಯಕರು ‘ಜಗತ್ತು ಹೆಚ್ಚು ಬಲವಾಗುತ್ತಿರುವ, ಹತ್ತಿರವಾಗುತ್ತಿರುವ ಮತ್ತು ಉಜ್ವಲಗೊಳ್ಳುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಉಭಯ ದೇಶಗಳ ನಡುವಿನ ಬಾಂಧವ್ಯವು ಮತ್ತಷ್ಟು ಗಟ್ಟಿಯಾಗುತ್ತಿದೆ’ ಎಂದರು.

‘ಮನುಷ್ಯ ಒಳಗೊಳ್ಳುವ ಎಲ್ಲ ಸ್ತರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಭಾರತ ಮತ್ತು ಅಮೆರಿಕ ಸಹಭಾಗಿತ್ವ ಹೊಂದುತ್ತಿದೆ. ಸೆಮಿಕಂಡಕ್ಟರ್ ಪೂರೈಕೆ ವ್ಯವಸ್ಥೆ ಬಲಪಡಿಸುವುದು, ಆರ್‌ಎಎನ್ ಟೆಲಿಕಮ್ಯುನಿಕೇಷನ್ಸ್ ನೆಟ್‌ವರ್ಕ್, ಜಂಟಿ ತಾಲೀಮು ಸೇರಿದಂತೆ ರಕ್ಷಣಾ ಕ್ಷೇತ್ರದ ಪಾಲುದಾರಿಕೆ, ರಕ್ಷಣಾ ಪರಿಕರಗಳ ಉದ್ಯಮದಲ್ಲಿ ಹೆಚ್ಚಿನ ಸಹಕಾರಕ್ಕೆ ತೀರ್ಮಾನಿಸಲಾಗಿದೆ’ ಎಂದು ಬೈಡನ್ ವಿವರಿಸಿದರು.

‘ಉಭಯ ದೇಶಗಳ ಆರ್ಥಿಕ ಸಂಬಂಧ ಪ್ರವರ್ಧಮಾನಗೊಳ್ಳುತ್ತಿದೆ. ವ್ಯಾಪಾರ ವಹಿವಾಟು ಕಳೆದ ಒಂದು ದಶಕದಲ್ಲಿ ಬಹುತೇಕ ದುಪ್ಪಟ್ಟಾಗಿದ್ದು ಉಭಯ ರಾಷ್ಟ್ರಗಳಲ್ಲಿ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗಿವೆ’ ಎಂದು ಉದಾಹರಿಸಿದರು.

‘2ನೇ ಬಾರಿ ಭಾಷಣ ಮಾಡಿದ ಹಿರಿಮೆ’

ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಎರಡನೇ ಬಾರಿಗೆ ಮಾತನಾಡಿದ ಹಿರಿಮೆಗೆ ಪ್ರಧಾನಿ ಮೋದಿ ಪಾತ್ರರಾದರು. ಮೊದಲ ಬಾರಿಗೆ ಅವರು ಈ ಹಿಂದೆ 2016ರಲ್ಲಿ ಮಾತನಾಡಿದ್ದರು.

ವೀಕ್ಷಕರ ಗ್ಯಾಲರಿಯಲ್ಲಿ ಭಾರತ ಮೂಲದ ಹಲವರು ಆಸೀನರಾಗಿದ್ದರು. ಭಾಷಣದ ನಡುವೆ ಹಲವು ಬಾರಿ ‘ಮೋದಿ ಮೋದಿ’, ‘ಭಾರತ್ ಮಾತಾಕಿ ಜೈ’ ಘೋಷಣೆಗಳು ಕೇಳಿಬಂದವು. ಮೋದಿ ಆಗಮನ ಮತ್ತು ನಿರ್ಗಮನದ ವೇಳೆಯೂ ಕರತಾಡನ ವ್ಯಕ್ತವಾಯಿತು.

ಭಾರತ ಮೂಲದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹೆಸರು ಉಲ್ಲೇಖಿಸಿದಾಗಲು ಕರತಾಡನ ವ್ಯಕ್ತವಾಯಿತು. ಭಾಷಣ ಮುಗಿಯುತ್ತಿದ್ದಂತೆ ಅವರನ್ನು ಸುತ್ತುವರಿದ ಹಲವು ಸಂಸದರು, ಪ್ರಧಾನಿ ಭಾಷಣ ಒಳಗೊಂಡಿದ್ದ ಕೈಪಿಡಿಗೆ ಅವರ ಹಸ್ತಾಕ್ಷರ ಪಡೆದು, ಸೆಲ್ಫಿಯನ್ನು ತೆಗೆದುಕೊಂಡರು.

ಉಕ್ರೇನ್ ಮೇಲಿನ ದಾಳಿ ಖಂಡಿಸದ ಭಾರತ • ರಷ್ಯಾಕ್ಕೆ ಸೂಚ್ಯ ಸಂದೇಶ ರವಾನಿಸಿದ ಪ್ರಧಾನಿ ನರೇಂದ್ರ ಮೋದಿ

‘ದೇಶಗಳ ಗಡಿ, ಸಾರ್ವಭೌಮತೆ ಗೌರವಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕ ಸಂಸತ್‌ನ ಜಂಟಿ ಅಧಿವೇಶನ ಉದ್ದೇಶಿಸಿ ಗುರುವಾರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಉಕ್ರೇನ್ ಮೇಲೆ ಆಕ್ರಮಣ ನಡೆಸುತ್ತಿರುವ ರಷ್ಯಾದ ನಡೆಯನ್ನು ನೇರವಾಗಿ ಖಂಡಿಸಲಿಲ್ಲ. ಮೊದಲಿನಿಂದಲೂ ಭಾರತ ತಳೆದಿರುವ ನಿಲುವಿಗೆ ಅಂಟಿಕೊಂಡರು.

‘ವಿಶ್ವಸಂಸ್ಥೆಯ ಸಂವಿಧಾನದಲ್ಲಿ ಹೇಳಿರುವಂತೆ ಅಂತರರಾಷ್ಟ್ರೀಯ ಕಾನೂನು, ತತ್ವಗಳನ್ನು, ಎಲ್ಲ ದೇಶಗಳ ಸಾರ್ವಭೌಮತೆ, ಏಕತೆಯನ್ನು ಗೌರವಿಸಬೇಕು’ ಎಂದರು. ಅಮೆರಿಕದ ಈ ನಿಲುವನ್ನು ಭಾರತ ಬೆಂಬಲಿಸುತ್ತದೆ ಎಂಬ ಸಂದೇಶವನ್ನು ಸೂಚ್ಯವಾಗಿ ರಷ್ಯಾಕ್ಕೆ ರವಾನಿಸಿದರು.

‘ಇದು ಯುದ್ಧದ ಕಾಲವಲ್ಲ ಎಂಬುದನ್ನು ಮತ್ತೊಮ್ಮೆ ಹೇಳಲು ಬಯಸುವೆ. ಇದು ಮಾತುಕತೆ ಮತ್ತು ರಾಜತಾಂತ್ರಿಕತೆಯ ಯುಗ’ ಎಂದೂ ಹೇಳಿದರು.

‘ಉಕ್ರೇನ್ ಮೇಲಿನ ಯುದ್ಧ ಒಪ್ಪಲಾಗದು ಎಂಬ ನನ್ನ ನಿಲುವನ್ನು ರಷ್ಯಾ ಅಧ್ಯಕ್ಷರಿಗೆ ಅವರಿಗೆ ನೇರವಾಗಿಯೇ ತಿಳಿಸಿದ್ದೇನೆ’ ಎಂದರು. ಆದರೆ, ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಉಜ್ಬೇಕಿಸ್ತಾನದ ಸಮರಕಂಡ್‌ನಲ್ಲಿ ಪುಟಿನ್ ಅವರೊಂದಿಗೆ ಸಭೆ ನಡೆಸಿದ್ದನ್ನು ಪ್ರಸ್ತಾಪಿಸಲಿಲ್ಲ. ‘ಯುದ್ಧದಿಂದ ಸಂಭವಿಸುತ್ತಿರುವ ಸಾವು–ನೋವು ತಡೆ ಗಟ್ಟಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ನಾವು ಮಾಡಬೇಕು’ ಎಂದರು.

ಜಂಟಿ ಹೇಳಿಕೆ: ‘ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಿಂದಾಗಿ ಉದ್ಭವಿಸಿರುವ ಆಹಾರ ಮತ್ತು ಇಂಧನ ಸಮಸ್ಯೆಯನ್ನು ಬಗೆಹರಿಸಲು ಎರಡೂ ದೇಶಗಳು ಒಟ್ಟಾಗಿ ಶ್ರಮಿಸುತ್ತಿವೆ’ ಎಂದು ಅಧ್ಯಕ್ಷ ಜೋ ಬೈಡನ್ ತಿಳಿಸಿದ್ದಾರೆ.

ಮೋದಿ ಹಾಗೂ ಬೈಡನ್ ಮಾತುಕತೆ ನಡೆದ ನಂತರ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ಈ ವಿಷಯ ತಿಳಿಸಲಾಗಿದೆ.



ಪ್ರಧಾನಿ ಮೋದಿ ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದರು —ಎಪಿ ಚಿತ್ರ

ಭಾರತದ ಪ್ರತಿ ಪ್ರಧಾನಿ, ಅಮೆರಿಕದ ಅಧ್ಯಕ್ಷರು ದ್ವಿಪಕ್ಷೀಯ ಬಾಂಧವ್ಯ ಮುಂದುವರಿಸಿದ್ದಾರೆ. ಆದರೆ, ನಮ್ಮ ಪೀಳಿಗೆ ಇದನ್ನು ಹೊಸ ಎತ್ತರಕ್ಕೆ ಒಯ್ದಿದೆ.
ನರೇಂದ್ರ ಮೋದಿ, ಪ್ರಧಾನಿ

ಸ್ವಾತಂತ್ರ್ಯವನ್ನು ಪ್ರೀತಿಸುವ ಹೆಮ್ಮೆಯ ರಾಷ್ಟ್ರಗಳ ಸಂಬಂಧ 21ನೇ ಶತಮಾನದ ಬಾಂಧವ್ಯವನ್ನು ವ್ಯಾಖ್ಯಾನಿಸಲಿದೆ. ಎರಡು ರಾಷ್ಟ್ರಗಳ ಸಂವಿಧಾನದ ಮೊದಲ ಮೂರು ಪದಗಳು ಒಂದೇ ಆಗಿವೆ: ವಿ ದ ಪೀಪಲ್
ಜೋ ಬೈಡನ್, ಅಮೆರಿಕ ಅಧ್ಯಕ್ಷ

ಭಾರತ, ಅಮೆರಿಕ ನಡುವಣ ಬಾಂಧವ್ಯ ಹಿಂದೆಂದಿಗಿಂತಲೂ ಗಟ್ಟಿಯಾಗಿದೆ. ಸುಭದ್ರ ಜಗತ್ತು ನಿರ್ಮಾಣಕ್ಕಾಗಿ ಒಟ್ಟಾಗಿ ನಾವು ಭವಿಷ್ಯವನ್ನು ರೂಪಿಸಬಹುದು
ಕಮಲಾ ಹ್ಯಾರಿಸ್
ಅಮೆರಿಕದ ಉಪಾಧ್ಯಕ್ಷೆ

‘ಸಹಭಾಗಿತ್ವ, ತಂತ್ರಜ್ಞಾನ ವಿನಿಮಯ’

ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಪ್ರಧಾನಿ ನರೇಂದ್ರ ಮೋದಿ, ‘ತಂತ್ರಜ್ಞಾನದ ವಿನಿಮಯ, ಜಂಟಿ ಅಭಿವೃದ್ಧಿ ಮತ್ತು ಉತ್ಪಾದನೆಗೆ ಪೂರಕವಾಗಿ ನಮ್ಮ ಬಾಂಧವ್ಯವು ಬದಲಾಗಿದೆ’ ಎಂದರು.

- ವಾಯುಪಡೆಯ ಹಗುರ ಯುದ್ಧ ವಿಮಾನ ‘ಎಂಕೆ2 ತೇಜಸ್’ನ ಎಫ್414 ಎಂಜಿನ್‌ಗಳನ್ನು ಜಂಟಿಯಾಗಿ ತಯಾರಿಸಲು ಜಿಇ ಏರೋಸ್ಪೇಸ್ ಸಂಸ್ಥೆ ಒಪ್ಪಂದ ಮಾಡಿಕೊಂಡಿದೆ.
- ಕಂಪ್ಯೂಟರ್ ಚಿಪ್‌ಗಳನ್ನು ತಯಾರಿಸುವ ಮೈಕ್ರಾನ್, ಗುಜರಾತ್‌ನಲ್ಲಿ ₹22,540 ಕೋಟಿ ವೆಚ್ಚದಲ್ಲಿ ಸೆಮಿಕಂಡಕ್ಟರ್‌ಗಳ ಸಂಯೋಜನೆ ಘಟಕ ಸ್ಥಾಪಿಸಲಿದೆ.
- ಭಾರತದ ಗಗನಯಾತ್ರಿಯೊಬ್ಬರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ 2024ರಲ್ಲಿ ಕಳುಹಿಸಲಿವೆ.

ರಾಹುಲ್ ನಡೆಗೆ ವ್ಯಂಗ್ಯ

ಭಾರತ ಜೊತೆಗಿನ ಬಾಂಧವ್ಯವನ್ನು ಸಂಭ್ರಮಿಸಲು ಎಲ್ಲ ಸಂಸದರು ಒಟ್ಟುಗೂಡಿದ್ದೀರಿ ಎಂದು ಶ್ಲಾಘಿಸಿದ ಪ್ರಧಾನಿ ಮೋದಿ, ‘ನಮ್ಮ ಚಿಂತನೆಗಳಲ್ಲಿ ಸ್ಪರ್ಧೆ ಇರಬೇಕು. ಆದರೆ, ದೇಶದ ಬಗ್ಗೆ ಮಾತನಾಡುವಾಗ ಒಗ್ಗೂಡಬೇಕು’ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಆಗಾಗ್ಗೆ ವಿದೇಶ ಪ್ರವಾಸದ ವೇಳೆ ತಮ್ಮ ಸರ್ಕಾರವನ್ನು ಟೀಕಿಸುವುದನ್ನು ಪರೋಕ್ಷವಾಗಿ ಉಲ್ಲೇಖಿಸಿ ಪ್ರಧಾನಿ ಈ ಮಾತು ಹೇಳಿದರು.

ಮೋದಿಗೆ ಔತಣ, ಗಣ್ಯರು ಭಾಗಿ

ವಾಷಿಂಗ್ಟನ್ (ಪಿಟಿಐ): ಪ್ರಧಾನಿ ಮೋದಿ ಗೌರವಾರ್ಥ ಏರ್ಪಡಿಸಿದ್ದ ಔತಣಕೂಟಕ್ಕೆ ಭಾರತ ಮತ್ತು ಅಮೆರಿಕದ ವಿವಿಧ ಉದ್ಯಮಗಳ ಹಲವು ಗಣ್ಯರಿಗೆ ಆಹ್ವಾನ ನೀಡಲಾಗಿತ್ತು.

ಹೆಸರಾಂತ ಉದ್ಯಮಿಗಳಾದ ಮುಖೇಶ್ ಅಂಬಾನಿ, ಗೂಗಲ್ ಸಿಇಒ ಸುಂದರ್ ಪಿಚ್ಚೈ, ಆ್ಯಪಲ್ ಸಿಇಒ ಟಿಮ್ ಕುಕ್ ಸೇರಿದಂತೆ ಸುಮಾರು 400 ಮಂದಿಯನ್ನು ಆತಿಥ್ಯ ವಹಿಸಿದ್ದ ಅಧ್ಯಕ್ಷ ಜೋ ಬೈಡನ್ ಮತ್ತು ಜಿಲ್ ಬೈಡನ್ ದಂಪತಿ ಆಹ್ವಾನಿಸಿದ್ದರು.

ಉದ್ಯಮಿ ಆನಂದ್ ಮಹೀಂದ್ರಾ, ಕಾರ್ಪೊರೇಟ್ ವಲಯದ ಪ್ರಮುಖರಾದ ಇಂದಿರಾ ನೂಯಿ, ಮೈಕ್ರೋಸಾಫ್ಟ್ ಸಿಇಒ ಸತ್ಯ ನಾಡೆಲ್ಲಾ, ಅಡೋಬ್ ಸಿಇಒ ಶಂತನು ನಾರಾಯಣ್, ಮಾನವ ಹಕ್ಕುಗಳ ಹೋರಾಟದ ಕಾರ್ಯಕರ್ತ ಮಾರ್ಟಿನ್ ಲೂಥರ್ ಕಿಂಗ್–3, ಟೆನ್ನಿಸ್ ಪಟು ಬಿಲ್ಲಿ ಜೀನ್ ಕಿಂಗ್, ಚಿತ್ರ ನಿರ್ಮಾಪಕರಾದ ಎಂ.ನೈಟ್ ಶ್ಯಾಮಲನ್, ಫ್ಯಾಷನ್ ಡಿಸೈನರ್ ರಾಲ್ಫ್ ಲಾರೇನ್, ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತರಾದ ಜೋಷುಆ ಬೆಲ್, ಉದ್ಯಮಿ ಫ್ರಾಂಕ್ ಇಸ್ಲಾಂ, ಭಾರತ ಮೂಲದ ಸಂಸದರಾದ ಪ್ರಮೀಳಾ ಜಯಪಾಲ್, ಶ್ರೀ ಥಾಣೆದಾರ್, ರೊ ಖನ್ನಾ, ಅಮಿ ಬೆರಾ, ರಾಜಾ ಕೃಷ್ಣಮೂರ್ತಿ, ಅಧ್ಯಕ್ಷ ಬೈಡನ್ ಕುಟುಂಬ ಸದಸ್ಯರು, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಆಹ್ವಾನಿತರಾಗಿದ್ದ ಪ್ರಮುಖರು.

ಮುಸಲ್ಮಾನರ ಹಕ್ಕುಗಳ ರಕ್ಷಣೆ: ಬರಾಕ್ ಒಬಾಮ ಎಚ್ಚರಿಕೆ

‘ಅಲ್ಪಸಂಖ್ಯಾತ ಮುಸಲ್ಮಾನರ ಹಕ್ಕುಗಳನ್ನು ಗೌರವಿಸದೇ ಇದ್ದಲ್ಲಿ ಭಾರತ ಪ್ರತ್ಯೇಕವಾಗಿ ಉಳಿಯುವ ಅಪಾಯವಿದೆ’ ಎಂದು ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಎಚ್ಚರಿಸಿದ್ದಾರೆ.

ಸಿಎನ್‌ಎನ್‌ಗೆ ನೀಡಿದ ಸಂದರ್ಶನದಲ್ಲಿ ಅವರು, ಮೈತ್ರಿ ರಾಷ್ಟ್ರಗಳ ಜೊತೆಗೆ ಮಾನವ ಹಕ್ಕುಗಳ ವಿಷಯದ ಚರ್ಚೆ ಎಂದಿಗೂ ಸಂಕೀರ್ಣವಾದುದು. ಪ್ರಧಾನಿ ಮೋದಿ ಅವರ ಜೊತೆಗಿನ ಭೇಟಿಯಲ್ಲಿ ಭಾರತದಲ್ಲಿ ಅಲ್ಪಸಂಖ್ಯಾತ ಮುಸಲ್ಮಾನರ ರಕ್ಷಣೆ ಕುರಿತು ಅಧ್ಯಕ್ಷರು ಪ್ರಸ್ತಾಪಿಸುವುದು ಅಗತ್ಯ’ ಎಂದು ಗುರುವಾರ ಹೇಳಿದರು.

ಮೋದಿ ಅವರ ಜೊತೆಗೆ ಚರ್ಚೆಗೆ ಅವಕಾಶವಿದ್ದರೆ, ನೀವು ಭಾರತದಲ್ಲಿ ಮುಸಲ್ಮಾನರ ಹಕ್ಕುಗಳನ್ನು ರಕ್ಷಿಸಲು ಒತ್ತು ನೀಡದೇ ಇದ್ದರೆ, ಭಾರತ ಹಿಂದೆ ಸರಿಯುವ ಸಾಧ್ಯತೆಗಳಿವೆ ಎಂದು ಅವರ ಗಮನಕ್ಕೆ ತರುತ್ತೇನೆ ಎಂದರು.

ಭಾರತದಲ್ಲಿನ ದೊಡ್ಡಮಟ್ಟದ ಆಂತರಿಕ ತಿಕ್ಕಾಟ ಗಮನಿಸಿದರೆ ನಿಮಗೆ ಏನಾಗುತ್ತಿದೆ ಎಂದು ತಿಳಿಯಲಿದೆ. ಅದು, ಮುಸ್ಲಿಂ ಇಂಡಿಯಾ ಅಷ್ಟೇ ಅಲ್ಲದೆ, ಹಿಂದೂ ಇಂಡಿಯಾ ಹಿತಾಸಕ್ತಿಗೂ ವಿರೋಧಾಭಾಸವಾದುದು ಎಂದು ಹೇಳಿದರು.

ಸಿಗದ ಕಾಂಗ್ರೆಸ್ ಬೆಂಬಲ: ಎಎಪಿ ಸಿಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಸೇವಾ ವಲಯದ ಮೇಲಿನ ನಿಯಂತ್ರಣ ಕುರಿತು ಸುಗ್ರೀವಾಜ್ಞೆ ತಂದಿರುವ ಕೇಂದ್ರ ಸರ್ಕಾರದ ವಿರುದ್ಧ ಹೋರಾಡುವ ವಿಷಯದಲ್ಲಿ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ನಡುವಿನ ಭಿನ್ನಾಭಿಪ್ರಾಯವು ‘ಒಗ್ಗಟ್ಟಿನ’ ಸಭೆಯಲ್ಲೂ ಶಮನವಾಗಲಿಲ್ಲ.

ಎಎಪಿ ಸಂಸ್ಥಾಪಕ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಎಎಪಿಯ ರಾಜ್ಯಸಭಾ ಸದಸ್ಯರಾದ ಸಂಜಯ್ ಸಿಂಗ್ ಹಾಗೂ ರಾಘವ್ ಚಡ್ಡಾ ಸಭೆಯಲ್ಲಿ ಭಾಗಿಯಾಗಿದ್ದರು. ಸುಗ್ರೀವಾಜ್ಞೆ ವಿರುದ್ಧದ ಹೋರಾಟದ ಮೂಲಕವೇ ವಿಪಕ್ಷಗಳು ಬಿಜೆಪಿಗೆ ಬಲವಾದ ಸಂದೇಶ ರವಾನಿಸಬೇಕು ಎಂದು ಎಎಪಿ ಮುಖಂಡರು ಪ್ರತಿಪಾದಿಸಿದರು. ಹೋರಾಟಕ್ಕೆ ಬೆಂಬಲ ಸೂಚಿಸುವುದಾಗಿ ಕಾಂಗ್ರೆಸ್ ನಾಯಕರು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಬೇಕು ಎಂದು ಎಎಪಿ ನಾಯಕರು ಪಟ್ಟು ಹಿಡಿದರು. ಇದಕ್ಕೆ ಕಾಂಗ್ರೆಸ್ ಪಾಳಯದಿಂದ ಸಕಾರಾತ್ಮಕ ಪ್ರತಿಕ್ರಿಯೆ ಬರಲಿಲ್ಲ.

‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಸಂವಿಧಾನ ವಿರೋಧಿ ಮಸೂದೆಗಳನ್ನು ನಮ್ಮ ಪಕ್ಷ ವಿರೋಧಿಸುತ್ತದೆ. ಸುಗ್ರೀವಾಜ್ಞೆ ಕುರಿತು ಸಮಯ ಬಂದಾಗ ಪಕ್ಷ ಸೂಕ್ತ ನಿಲುವು ತಾಳಲಿದೆ’ ಎಂದು ಕಾಂಗ್ರೆಸ್ ನಾಯಕರು ಪ್ರತಿಪಾದಿಸಿದರು. ಈ ಮಾತಿಗೆ ಉಳಿದ ಪಕ್ಷಗಳ ನಾಯಕರು ಸಹಮತ ವ್ಯಕ್ತಪಡಿಸಿದರು. ಇದರಿಂದ ಮುನಿಸಿಕೊಂಡ ಎಎಪಿ ನಾಯಕರು ಪತ್ರಿಕಾಗೋಷ್ಠಿಗೆ ಗೈರುಹಾಜರಾದರು.

‘ಅವರು ತುರ್ತಾಗಿ ವಿಮಾನ ನಿಲ್ದಾಣಕ್ಕೆ ತೆರಳಬೇಕಿತ್ತು. ಹಾಗಾಗಿ, ಪತ್ರಿಕಾಗೋಷ್ಠಿಗೆ ಹಾಜರಾಗಲಿಲ್ಲ. ನಮ್ಮ ಈ ಪ್ರಯತ್ನಕ್ಕೆ ಎಷ್ಟೊಂದು ನಾಯಕರು ಕೈಜೋಡಿಸಿದ್ದಾರೆ ಎಂಬುದರ ಬಗ್ಗೆ ಗಮನ ಕೊಡಿ’ ಎಂದು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಸಮಜಾಯಿಷಿ ನೀಡಿದರು. ಕಾಂಗ್ರೆಸ್‌ನ ‘ಜಾಣ ಮೌನ’ವನ್ನು ಖಂಡಿಸಿ ಎಎಪಿ ನಾಯಕರು ಹೇಳಿಕೆ ಬಿಡುಗಡೆ ಮಾಡಿದರು.

ಈ ಸಂಬಂಧ ಟ್ವಿಟರ್ ಖಾತೆಯಲ್ಲಿ ಶುಕ್ರವಾರ ಸಂಜೆ ಹೇಳಿಕೆ ಬಿಡುಗಡೆ ಮಾಡಿದ ಎಎಪಿ ನಾಯಕರು, ಕಾಂಗ್ರೆಸ್‌ನ ಧೋರಣೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ‘ಸಮಾನ ಮನಸ್ಕ ಪಕ್ಷಗಳ ಸಭೆಯಲ್ಲಿ 15 ಪಕ್ಷಗಳ ನಾಯಕರು ಪಾಲ್ಗೊಂಡಿದ್ದರು. ಈ ಪೈಕಿ, 12 ಪಕ್ಷಗಳು ರಾಜ್ಯಸಭೆಯ ಪ್ರತಿನಿಧಿಗಳನ್ನು ಹೊಂದಿವೆ. ಕಾಂಗ್ರೆಸ್ ಹೊರತುಪಡಿಸಿ 11 ಪಕ್ಷಗಳು ಸುಗ್ರೀವಾಜ್ಞೆಯನ್ನು ವಿರೋಧಿಸಿದವು. ಈ ಬಗ್ಗೆ ರಾಜ್ಯಸಭೆಯಲ್ಲಿ ಧ್ವನಿ ಎತ್ತುವುದಾಗಿ ಹೇಳಿದವು. ಕೇಂದ್ರದ ಕರಾಳ ಸುಗ್ರೀವಾಜ್ಞೆಯನ್ನು ವಿರೋಧಿಸುವಂತೆ ಹಲವು ಪಕ್ಷಗಳು ಕಾಂಗ್ರೆಸ್‌ನ ಒತ್ತಾಯಿಸಿದವು. ಆದರೆ, ಕಾಂಗ್ರೆಸ್ ನಿರಾಕರಿಸಿತು. ಕಾಂಗ್ರೆಸ್‌ನ ಮೌನ ಅನುಮಾನಕ್ಕೆ ಕಾರಣವಾಗಿದೆ’ ಎಂದು ವ್ಯಾಖ್ಯಾನಿಸಿದರು. ಕೇಂದ್ರ ಸರ್ಕಾರದ ಸುಗ್ರೀವಾಜ್ಞೆ ವಿರುದ್ಧ ಆಮ್ ಆದ್ಮಿ ಪಕ್ಷವು ಹೋರಾಟ ನಡೆಸುತ್ತಿದೆ. ಈ ಹೋರಾಟಕ್ಕೆ ಕಾಂಗ್ರೆಸ್ ಬೆಂಬಲ ನೀಡಬೇಕು ಎಂಬುದು ಎಎಪಿಯ ವಾದ. ಎಎಪಿಗೆ ಯಾವುದೇ ಕಾರಣಕ್ಕೂ ಬೆಂಬಲ ನೀಡಬಾರದು ಎಂದು ಕಾಂಗ್ರೆಸ್‌ನ ದೆಹಲಿ ಹಾಗೂ ಪಂಜಾಬ್ ಘಟಕಗಳು ಹೈಕಮಾಂಡ್‌ಗೆ ಒತ್ತಡ ಹೇರಿವೆ. ಒಂದು ವೇಳೆ, ಹೋರಾಟಕ್ಕೆ ಬೆಂಬಲ ನೀಡುವುದಾಗಿ ಕೈ ಪಾಳಯ ಪ್ರಕಟಿಸದಿದ್ದರೆ ಸಭೆಯಿಂದ ಹೊರಕ್ಕೆ ಹೋಗುವುದಾಗಿ ಎಎಪಿ ನಾಯಕರು ಈ ಹಿಂದೆ ಎಚ್ಚರಿಸಿದರು. ಈ ಮಾತಿಗೆ ಕಾಂಗ್ರೆಸ್ ನಾಯಕರು ತಿರುಗೇಟು ನೀಡಿದ್ದರು.

ಹೆಚ್ಚು ಸ್ಥಾನ ಗೆಲ್ಲಲು ಸೂತ್ರ

543 ಸದಸ್ಯ ಬಲವನ್ನು ಹೊಂದಿರುವ ಲೋಕಸಭೆಯಲ್ಲಿ 17 ಪಕ್ಷಗಳ ಒಟ್ಟು ಬಲವು 200ಕ್ಕಿಂತ ಕಡಿಮೆ ಇದೆ. ಹಲವು ರಾಜ್ಯಗಳಲ್ಲಿ ಈ ಪಕ್ಷಗಳು ಪರಸ್ಪರ ಎದುರಾಳಿಗಳು ಆಗಿವೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮಹಾ ಮೈತ್ರಿ ಕೂಟ ರಚಿಸಿ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಬಿಜೆಪಿಯನ್ನು ಮಣಿಸಬೇಕು ಎಂಬುದು ಈ ನಾಯಕರ ಹಂಬಲ. ಈ ಸೂತ್ರ ಅನುಸರಿಸಿದರೆ ಕನಿಷ್ಠ 300 ಲೋಕಸಭಾ ಚುನಾವಣೆಗಳನ್ನು ಗೆಲ್ಲಬಹುದು ಎಂಬುದು ಈ ಕೂಟದ ಲೆಕ್ಕಾಚಾರ. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 50 ಸ್ಥಾನಗಳನ್ನು ಗೆದ್ದಿತ್ತು. ಕಾಂಗ್ರೆಸ್ ನಾಯಕತ್ವದಲ್ಲಿ ವಿಪಕ್ಷಗಳ ಕೂಟ ಕಟ್ಟಿಕೊಳ್ಳುವುದಕ್ಕೆ ಈಗಲೂ ಹಲವು ಪಕ್ಷಗಳ ತಕರಾರು ಇದೆ.

ರಾಹುಲ್ ಮದುವೆಯಾಗಿ: ಲಾಲು

‘ರಾಹುಲ್ ಗಾಂಧಿ ಅವರು ನನ್ನ ಸಲಹೆಯನ್ನು ಮೊದಲೇ ಪಾಲಿಸಲಿಲ್ಲ. ಅವರು ಮೊದಲೇ ಮದುವೆಯಾಗಬೇಕಿತ್ತು. ಆದರೆ, ಇನ್ನೂ ತಡವಾಗಿಲ್ಲ. ಚಿಂತೆ ಬೇಡ’.

ಹೀಗೆಂದು ರಾಹುಲ್ ಗಾಂಧಿ ಅವರಿಗೆ ಕಿವಿಮಾತು ಹೇಳಿದವರು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್, ಹಿರಿಯ ನಾಯಕನ ಮಾತು ಕೇಳಿ ರಾಹುಲ್ ಜೋರಾಗಿ ನಕ್ಕರು. ಲಾಲು ಮಾತಿನಿಂದ ಪತ್ರಿಕಾಗೋಷ್ಠಿಯಲ್ಲಿ ನಗುವಿನ ಅಲೆ ಎದ್ದಿತು. ‘ಮದುವೆಯಾಗಲು ನೀವು ನಿರಾಕರಿಸಿದ್ದರಿಂದ ನಿಮ್ಮ ತಾಯಿ (ಸೋನಿಯಾ ಗಾಂಧಿ) ಚಿಂತಿತರಾಗಿದ್ದಾರೆ’ ಎಂದೂ ಲಾಲು ಹೇಳಿದರು. ‘ನಿಮ್ಮ ಮದುವೆಯ ಮೆರವಣಿಗೆಯಲ್ಲಿ ನಾವು ಭಾಗವಾಗಲು ಬಯಸುತ್ತೇವೆ’ ಎಂದರು.

ಯಾರು ಏನಂದರು?

ಬಜರಂಗ ಬಲಿ ನಮ್ಮೊಂದಿಗಿದ್ದಾರೆ....ಬಿಜೆಪಿ ಮತ್ತು ನರೇಂದ್ರ ಮೋದಿಯವರು ಮುಂದೆ ಕಠಿಣ ದಿನಗಳನ್ನು ಎದುರಿಸಲಿದ್ದಾರೆ
ಲಾಲು ಪ್ರಸಾದ್
ಆರ್‌ಜೆಡಿ ಮುಖ್ಯಸ್ಥ

ಗಾಂಧಿಯ ಭಾರತವನ್ನು ಗೋಡ್ಸೆಯ ದೇಶವಾಗಲು ನಾವು ಬಿಡುವುದಿಲ್ಲ
ಮೆಹಬೂಬಾ ಮುಫ್ತಿ, ಪಿಡಿಪಿ ನಾಯಕಿ

ಪಟ್ನಾದಿಂದ ಪ್ರಾರಂಭವಾಗುವ ಯಾವುದೇ ಸಾರ್ವಜನಿಕ ಹೋರಾಟವು ಚಳವಳಿಯ ಆಕಾರವನ್ನು ಪಡೆದುಕೊಳ್ಳುತ್ತದೆ
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ 17 ಪಕ್ಷಗಳು ‘ಅಧಿಕಾರಕ್ಕಾಗಿ ಅಲ್ಲ, ಆದರೆ ತತ್ವಗಳಿಗಾಗಿ’ ಒಂದಾಗಿವೆ
ಒಮರ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಮುಖಂಡ

ಬಿಜೆಪಿಯ ಒಂಬತ್ತು ವರ್ಷಗಳ ಆಡಳಿತವು ನಮ್ಮ ದೇಶದ ಸಂವಿಧಾನಕ್ಕೆ ವಿನಾಶಕಾರಿ ಮತ್ತು ಹಾನಿಕಾರಕ
ಡಿ.ರಾಜಾ, ಸಿಪಿಐ ನಾಯಕ

ಜೆ.ಪಿ ಚಳವಳಿಯಂತೆಯೇ ನಮ್ಮ ಐಕ್ಯರಂಗವು ಸಾರ್ವಜನಿಕರ ಆಶೀರ್ವಾದವನ್ನು ಪಡೆಯುತ್ತದೆ
ಶರದ್ ಪವಾರ್, ಎನ್‌ಸಿಪಿ ಮುಖ್ಯಸ್ಥ

‘ದೇಶವನ್ನು ಉಳಿಸಲು ನಾವು ಒಟ್ಟಾಗಿ ಕೆಲಸ ಮಾಡಬೇಕಾಗಿದೆ ಎಂಬ ಸಂದೇಶವು ಈ ಸಭೆಯಲ್ಲಿ ಸಿಕ್ಕಿದೆ’
ಅಖಿಲೇಶ್ ಯಾದವ್
ಸಮಾಜವಾದಿ ಪಕ್ಷದ ನಾಯಕ

ಮೋದಿ ಸೋಲಿಸಲಾಗದ ಕಾಂಗ್ರೆಸ್: ಇರಾನಿ

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಲಿಸುವ ಸಾಮರ್ಥ್ಯ ಕಾಂಗ್ರೆಸ್ ಪಕ್ಷಕ್ಕಿಲ್ಲ. ಹೀಗಾಗಿ ಅದು ಇತರ ಪಕ್ಷಗಳ ಬೆಂಬಲ ಯಾಚಿಸುತ್ತಿದೆ ಎಂದು ಬಿಜೆಪಿ ಶುಕ್ರವಾರ ಹೇಳಿದೆ.

ಪಕ್ಷದ ವಿರುದ್ಧ ಮೈತ್ರಿಕೂಟ ರಚಿಸುವ ಕುರಿತು ಚರ್ಚಿಸಲು ಪಟ್ನಾದಲ್ಲಿ ಪ್ರಮುಖ ವಿರೋಧ ಪಕ್ಷಗಳ ನಾಯಕರು ಸಭೆ ನಡೆಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಈ ರೀತಿ ಕುಟುಕಿದೆ.

‘ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗಿದ್ದಕ್ಕೆ ಸಾಕ್ಷಿಯಾಗಿದ್ದ ಕೆಲ ನಾಯಕರು, ಈಗ ಕಾಂಗ್ರೆಸ್ ನೆರಳಿನಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದು ವಿಪರ್ಯಾಸ’ ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ವಾಗ್ದಾಳಿ ನಡೆಸಿದ್ದಾರೆ.

‘ಮೋದಿ ಅವರನ್ನು ಏಕಾಂಗಿ ಯಾಗಿ ಎದುರಿಸಲು ಆಗುವುದಿಲ್ಲ ಎಂಬುದನ್ನು ಬಹಿರಂಗವಾಗಿಯೇ ಘೋಷಿಸಿದ್ದಕ್ಕಾಗಿ ಕಾಂಗ್ರೆಸ್‌ಗೆ ಕೃತಜ್ಞಳಾಗಿರುವೆ’ ಎಂದಿದ್ದಾರೆ. ಬಿಹಾರದ ಭಾಗಲ್ಪುರ ಜಿಲ್ಲೆಯಲ್ಲಿ ಇತ್ತೀಚೆಗೆ ಸೇತುವೆಯೊಂದು ಕುಸಿದ ಘಟನೆಯನ್ನು ಪ್ರಸ್ತಾಪಿಸಿರುವ ಸಚಿವೆ ಇರಾನಿ, ‘ಒಂದು ಸದೃಢವಾದ ಸೇತುವೆಯನ್ನು ನಿರ್ಮಿಸಲಾಗದವರು ಪ್ರಜಾತಂತ್ರದ ಉಳಿವಿಗಾಗಿ ಯಾವ ರೀತಿಯ ಸೇತುವೆ ಕಟ್ಟುವರು’ ಎನ್ನುವ ಮೂಲಕ ನಿತೀಶ್ ಕುಮಾರ್ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

ಪ್ರತಿಪಕ್ಷ ಸಭೆ ನಡ್ಡಾ ಟೀಕೆ

ಭವಾನಿಪಟ್ನಾ, ಒಡಿಶಾ (ಪಿಟಿಐ): ‘ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ಜೈಲಿಗೆ ಹಾಕಿದ್ದ ನಾಯಕರೇ ಈಗ ಅವರ ಮೊಮ್ಮಗ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸುತ್ತಿದ್ದಾರೆ’ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಟೀಕಿಸಿದ್ದಾರೆ. ಪಟ್ನಾದಲ್ಲಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದಲ್ಲಿ ನಡೆದ ಲಾಲು ಪ್ರಸಾದ್ ಸೇರಿ ಪ್ರತಿ ಪಕ್ಷಗಳ ಹಲವು ಮುಖಂಡರು ಪಾಲ್ಗೊಂಡಿದ್ದ ಸಭೆಯನ್ನು ಉಲ್ಲೇಖಿಸಿ ಮಾತನಾಡಿದರು. ಈ ಇಬ್ಬರು ಮುಖಂಡರನ್ನು ತುರ್ತುಪರಿಸ್ಥಿತಿ ವೇಳೆ ಬಂಧಿಸಲಾಗಿತ್ತು ಎಂದರು.

ಒಗ್ಗಟ್ಟಿನ ಮಂತ್ರ, ಜಂಟಿ ತಂತ್ರ

ಒಂದನೇ ಪುಟದಿಂದ...

ಸಾಮಾನ್ಯ ಕಾರ್ಯಸೂಚಿ ಸಿದ್ಧಪಡಿಸಲು ನಿರ್ಧರಿಸಿದ್ದು, ಮುಂದಿನ ಸಭೆಯಲ್ಲಿ ಯಾವ ರೀತಿ ಮುನ್ನಡೆಯಬೇಕು ಎಂಬ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು. ನಾವು ಪ್ರತಿಯೊಂದು ರಾಜ್ಯಕ್ಕೂ ಪ್ರತ್ಯೇಕ ಯೋಜನೆಗಳನ್ನು ರೂಪಿಸಬೇಕಿದೆ ಮತ್ತು ಕೇಂದ್ರದಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲು ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಖರ್ಗೆ ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ನಮ್ಮಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಇರಬಹುದು. ಆದರೆ, ಹೊಂದಿಕೊಳ್ಳುವ ಗುಣ ಅಳವಡಿಸಿಕೊಂಡು ಒಟ್ಟಾಗಿ ಕೆಲಸ ಮಾಡಲು ನಿರ್ಧರಿಸಿದ್ದೇವೆ. ನಮ್ಮ ಸಿದ್ಧಾಂತವನ್ನು ರಕ್ಷಿಸಲು ಕೆಲಸ ಮಾಡುತ್ತೇವೆ’ ಎಂದು ತಿಳಿಸಿದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ‘ಸರ್ವಾಧಿಕಾರಿ ಬಿಜೆಪಿ ಸರ್ಕಾರವು ಮತ್ತೆ ಅಧಿಕಾರಕ್ಕೆ ಬಂದರೆ ಭವಿಷ್ಯದಲ್ಲಿ ಯಾವುದೇ ಚುನಾವಣೆಗಳು ಇರುವುದಿಲ್ಲ. ಬಿಜೆಪಿಯನ್ನು ಎದುರಿಸಲು ನಾವೆಲ್ಲ ಒಗ್ಗಟ್ಟಾಗಿದ್ದೇವೆ. ಒಗ್ಗಟ್ಟಿನಿಂದ ಹೋರಾಡುತ್ತೇವೆ. ನಮ್ಮನ್ನು ಪ್ರತಿಪಕ್ಷಗಳು ಎಂದು ಕರೆಯಬೇಡಿ. ನಾವು ದೇಶಭಕ್ತರು ಮತ್ತು ನಾವು 'ಭಾರತ ಮಾತಾ'ವನ್ನು ಪ್ರೀತಿಸುತ್ತೇವೆ’ ಎಂದು ಹೇಳಿದರು.

ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ‘ಇಂದಿನ ಆರಂಭವು ದೇಶಕ್ಕೆ ಒಂದು ಮೈಲಿಗಲ್ಲು ಆಗಲಿದ್ದು, ಎಲ್ಲ ನಾಯಕರು ಸಕಾರಾತ್ಮಕ ಚಿಂತನೆಯೊಂದಿಗೆ ಒಟ್ಟಾಗಿ ಸಾಗಲಿದ್ದಾರೆ’ ಎಂದು ಹೇಳಿಕೊಂಡರು.

ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್, ‘ಬಿಜೆಪಿ ಮತ್ತು ಆರೆಸ್ಸೆಸ್ ವಿರುದ್ಧ ನಾವು ಒಗ್ಗಟ್ಟಾಗಿ ಹೋರಾಡಬೇಕೆಂದು ದೇಶದ ಜನರು ಬಯಸುತ್ತಿದ್ದಾರೆ’ ಎಂದರು.

‘ದೇಶವು ಸಮಸ್ಯೆ ಎದುರಿಸುತ್ತಿರುವಾಗ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದಲ್ಲಿ ಶ್ರೀಗಂಧ ಹಂಚುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದ ಅವರು, ‘ನಾನೀಗ ಫಿಟ್ ಆಗಿದ್ದೇನೆ. ಅವರನ್ನು ಎದುರಿಸಬಲ್ಲೆ’ ಎಂದು ಹೇಳಿದರು.



ಡಿಎಂಕೆ ಸಂಸದೆ ಕನಿಮೊಳಿ ಅವರ ಬಸ್ ಪ್ರಯಾಣದ ಬಳಿಕ ಶರ್ಮಿಳಾ ಸೆಲ್ಫಿ ತೆಗೆದುಕೊಂಡರು — ಪಿಟಿಐ ಚಿತ್ರ

ತಮಿಳುನಾಡು: ರಾಜೀನಾಮೆ ನೀಡಿದ ಮೊದಲ ಮಹಿಳಾ ಬಸ್ ಚಾಲಕಿ

ಕೊಯಮತ್ತೂರು (ತಮಿಳುನಾಡು) (ಪಿಟಿಐ): ಡಿಎಂಕೆ ಸಂಸದೆ ಕನಿಮೊಳಿ ಅವರ ಪ್ರಯಾಣದ ವೇಳೆ ಟಿಕೆಟ್ ವಿಚಾರವಾಗಿ ಉಂಟಾದ ವಿವಾದದ ಹಿನ್ನೆಲೆಯಲ್ಲಿ ನಗರದ ಮೊದಲ ಮಹಿಳಾ ಬಸ್ ಚಾಲಕಿ ಶರ್ಮಿಳಾ ಅವರು ಶುಕ್ರವಾರ ಕೆಲಸಕ್ಕೆ ರಾಜೀನಾಮೆ ನೀಡಿದ್ದಾರೆ.

ಕನಿಮೊಳಿ ಅವರು ಟಿಕೆಟ್ ಖರೀದಿಸಿದ್ದರೂ ಮಹಿಳಾ ಕಂಡಕ್ಟರ್‌ನಿಂದ ‘ಅಗೌರವ’ ಉಂಟಾಗಿದೆ ಎಂದು ಶರ್ಮಿಳಾ ಆರೋಪಿಸಿದ್ದಾರೆ.

‘ನನ್ನೊಂದಿಗಿದ್ದ ಮಹಿಳಾ ಕಂಡಕ್ಟರ್, ಕನಿಮೊಳಿ ಅವರನ್ನು ಅವಮಾನಿಸಿದ್ದಾರೆ. ಅಲ್ಲದೆ, ಪ್ರಚಾರ ಗಳಿಸಲು ಪ್ರಮುಖ ವ್ಯಕ್ತಿಗಳನ್ನು ಬಸ್‌ನಲ್ಲಿ ಪ್ರಯಾಣಿಸುವಂತೆ ಆಹ್ವಾನಿಸುತ್ತಾರೆ ಎಂದು ಆಡಳಿತ ಮಂಡಳಿಯು ಆರೋಪಿಸುತ್ತಿದೆ. ಈ ಎಲ್ಲಾ ಕಾರಣದಿಂದ ‘ಕನಸಿನ ಉದ್ಯೋಗ’ವನ್ನು ತೊರೆಯುತ್ತಿದ್ದೇನೆ’ ಎಂದು ಶರ್ಮಿಳಾ ಹೇಳಿದ್ದಾರೆ.

‘ನಾನು ಚಲಾಯಿಸುತ್ತಿದ್ದ ಬಸ್ ಹತ್ತಿದ್ದ ಕನಿಮೊಳಿ ಅವರು ನಗರದ ಗಾಂಧಿಪುರಂನಿಂದ ಪೀಲಮೇಡುವರೆಗೆ ಪ್ರಯಾಣಿಸಿದ್ದರು. ಈ ವೇಳೆ ಅವರ ಬಳಿ ಟಿಕೆಟ್ ಇದ್ದರೂ ಕಂಡಕ್ಟರ್ ಅವರನ್ನು ಅವಮಾನಿಸುವಂತೆ ವರ್ತಿಸಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಕಂಡಕ್ಟರ್ ಮತ್ತು ನನ್ನ ನಡುವೆ ವಾಗ್ವಾದವಾಗಿತ್ತು. ಅದೂ ಅಲ್ಲದೆ ಆಡಳಿತ ಮಂಡಳಿಗೆ ಕನಿಮೊಳಿ ಅವರ ಪ್ರಯಾಣದ ಬಗ್ಗೆ ತಿಳಿಸಿದ್ದೆ’ ಎಂದು ಶರ್ಮಿಳಾ ಹೇಳಿದ್ದಾರೆ.

ಕೇಂದ್ರದ ನೌಕರರಿಗೆ ಆಧಾರ್ ಆಧರಿತ ಹಾಜರಾತಿ ಕಡ್ಡಾಯ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುವ ನೌಕರರು ಆಧಾರ್ ಆಧರಿತ ಬಯೋಮೆಟ್ರಿಕ್ ಹಾಜರಾತಿ (ಎಇಬಿಎಎಸ್) ವ್ಯವಸ್ಥೆಯ ಮೂಲಕ ಹಾಜರಾತಿ ನಮೂದಿಸುತ್ತಾರೋ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಎಲ್ಲಾ ಇಲಾಖೆಗಳಿಗೆ ಸೂಚನೆ ನೀಡಿದೆ.

ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸಚಿವಾಲಯಗಳು, ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುತೇಕ ನೌಕರರು ಈ ವ್ಯವಸ್ಥೆಯ ಮೂಲಕ ಹಾಜರಾತಿ ನಮೂದಿಸುತ್ತಿಲ್ಲ ಎಂಬ ಅಂಶವು ಎಇಬಿಎಎಸ್ ಕುರಿತು ಈಚೆಗೆ ನಡೆಸಿದ ಪರಿಶೀಲನೆಯ ವೇಳೆ ಬೆಳಕಿಗೆ ಬಂದಿದೆ ಎಂದು ಸಿಬ್ಬಂದಿ ಸಚಿವಾಲಯ ಆದೇಶದಲ್ಲಿ ಹೇಳಿದೆ.

ಎಲ್ಲಾ ನೌಕರರು ತಮ್ಮ ಹಾಜರಾತಿಯನ್ನು ಎಇಬಿಎಎಸ್ ಮೂಲಕವೇ ನಮೂದಿಸಬೇಕು ಎಂದೂ ತಿಳಿಸಿದೆ.

ಸಚಿವಾಲಯಗಳು ಮತ್ತು ಇಲಾಖೆಗಳು ತಮ್ಮಲ್ಲಿನ ಬಯೋಮೆಟ್ರಿಕ್ ಉಪಕರಣಗಳು ಎಲ್ಲಾ ಸಮಯದಲ್ಲೂ ಕಾರ್ಯನಿರ್ಹಿಸುತ್ತಿವೆಯೇ ಎಂಬುದನ್ನೂ ಖಾತರಿಪಡಿಸಿಕೊಳ್ಳಬೇಕು ಎಂದೂ ಸೂಚಿಸಿದೆ. ಕೋವಿಡ್ ಬಳಿಕ ಎಇಬಿಎಎಸ್ ಹಾಜರಾತಿ ನಮೂದಿಸುವುದನ್ನು ಕೆಲಕಾಲ ನಿಲ್ಲಿಸಲಾಗಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಿಮ್ಮ ಬದುಕಿಗೆ ನೀವೇ ಹೊಣೆಗಾರರು. ನಿಮ್ಮ ಅಸಮರ್ಪಕ ಕಾರ್ಯಕ್ಕಾಗಿ ನೀವು ಅನ್ಯರನ್ನು ದೂಷಿಸುತ್ತಾ ಹೋಗುವುದು ತರವಲ್ಲ.

-ಓಪ್ರಾ ವಿನ್‌ಫ್ರೇ

ಅಮೆರಿಕಕ್ಕೆ ಮೋದಿ ಭೇಟಿ ಹಿಂಜರಿಕೆ ದಾಟಿದ ಭಾರತ

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಸಂಸತ್ತಿನಲ್ಲಿ ಐತಿಹಾಸಿಕ ಭಾಷಣವೊಂದನ್ನು ಮಾಡುವ ಮೂಲಕ ಅಲ್ಲಿನ ಭೇಟಿಯನ್ನು ಕೊನೆಗೊಳಿಸಿದ್ದಾರೆ. ಈ ಬಾರಿಯ ಭೇಟಿಯಲ್ಲಿ ಅನುಭವಕ್ಕೆ ದಕ್ಕುವ ಒಂದಿಷ್ಟು ಒಳ್ಳೆಯ ಅಂಶಗಳು ಇದ್ದವು. ಹಾಗೆಯೇ, ಒಂದಿಷ್ಟು ಸಾಂಕೇತಿಕತೆಯೂ ಇತ್ತು. ಅಮೆರಿಕ ಮತ್ತು ಭಾರತ ಈಗ ಬಹಳ ಗಾಢವಾದ ಸಂಬಂಧವನ್ನು ಬೆಳೆಸಿಕೊಂಡಿವೆ ಎಂದು ಮೋದಿ ಅವರು ಘೋಷಿಸಿದರು. ಈ ಮೂಲಕ ಚೀನಾಕ್ಕೆ ಒಂದು ಸಂದೇಶವನ್ನು ರವಾನಿಸಿದರು. ಪ್ರಜಾತಂತ್ರ, ಹವಾಮಾನ ಬದಲಾವಣೆ, ಬಲಿಷ್ಠ ಪೂರೈಕೆ ವ್ಯವಸ್ಥೆಯ ಸ್ಥಾಪನೆ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ಸುಧಾರಣೆ ವಿಚಾರವಾಗಿ ಒಂದಿಷ್ಟು ಮುಂಗಾಣ್ಕೆಯನ್ನು ನೀಡಿದರು. ಅಮೆರಿಕದ ಜೊತೆ ಈ ಹಿಂದೆ ಮಹತ್ವದ ಸಂಬಂಧವನ್ನು ಹೊಂದಲು ಬಯಸಿದ್ದ ಸಂದರ್ಭಗಳಲ್ಲಿ ಭಾರತವು ಖಚಿತ ನಿಲುವನ್ನು ತಾಳಲು ಹಿಂದೇಟು ಹಾಕುತ್ತಿತ್ತು. ಷಿ ಜಿನ್‌ಪಿಂಗ್ ಅವರು ಚೀನಾದ ಅಧ್ಯಕ್ಷ ಆಗುವುದಕ್ಕಿಂತ ಮೊದಲಿನ ಸಂದರ್ಭಗಳಲ್ಲಿ ಭಾರತಕ್ಕೆ ಚೀನಾದ ಉದ್ದೇಶ ಹಾಗೂ ಸಾಮರ್ಥ್ಯದ ಬಗ್ಗೆ ಹೆಚ್ಚು ಸ್ಪಷ್ಟತೆ ಇರಲಿಲ್ಲ. ಆದರೆ ಮೋದಿ ಅವರು 'ಇತಿಹಾಸದಲ್ಲಿನ ಹಿಂಜರಿಕೆಗಳನ್ನು ದಾಟಿ ಬರುವ' ಮಾರ್ಗವನ್ನು ಆಯ್ಕೆ ಮಾಡಿಕೊಂಡರು. ಅಮೆರಿಕ ಮತ್ತು ಭಾರತದ ನಡುವಿನ ಪಾಲುದಾರಿಕೆಯು ಈ ಶತಮಾನದ ಕರೆ ಎಂಬ ನೆಲೆಯಲ್ಲಿ ಮಾತನಾಡಿದರು. ತನ್ನ ನೇತೃತ್ವದಲ್ಲಿ ವಿಶ್ವದಲ್ಲಿ ರೂಪುಗೊಂಡಿರುವ ವ್ಯವಸ್ಥೆಗೆ ಚೀನಾ ಒಡ್ಡಿರುವ ಸವಾಲನ್ನು ಎದುರಿಸಲು ಅಮೆರಿಕ ಈಗ ಸ್ನೇಹಿತರು ಹಾಗೂ ಪಾಲುದಾರ ರಾಷ್ಟ್ರಗಳನ್ನು ಒಗ್ಗೂಡಿಸುತ್ತಿರುವುದರ ತುರ್ತಿನ ಬಗ್ಗೆ ಆಲೋಚಿಸಿದರು. ಹಾಗೆಯೇ ಮೋದಿ ಅವರು ಇನ್ನೊಂದೆಡೆ, ಲಡಾಖ್ ವಲಯದಲ್ಲಿ ಕೊನೆಗಾಣುತ್ತಿಲ್ಲದ ಗಡಿ ಬಿಕ್ಕಟ್ಟಿನ ಬಗ್ಗೆ ಮತ್ತು ಏಷ್ಯಾದಲ್ಲಿ ಯಜಮಾನಿಕೆ ಸ್ಥಾಪಿಸಲು ಚೀನಾ ನಡೆಸುತ್ತಿರುವ ಯತ್ನಗಳ ಬಗ್ಗೆಯೂ ಅವಲೋಕಿಸಿದರು.



ಚೀನಾವನ್ನು ಮಿತಿಯೊಳಗೆ ಇರಿಸುವ ಉದ್ದೇಶದೊಂದಿಗೆ ಭಾರತ ಮತ್ತು ಅಮೆರಿಕ ಈಗ ಒಂದಾಗಿ ನಿಂತಿವೆ

ರಕ್ಷಣೆ ಹಾಗೂ ಬಾಹ್ಯಾಕಾಶ ಜಗತ್ತಿಗೆ ಸಂಬಂಧಿಸಿದಂತೆ ಈ ಭೇಟಿಯ ಸಂದರ್ಭದಲ್ಲಿ ಮಹತ್ವದ ಒಪ್ಪಂದಗಳು ಆದವು. ಬೈಡನ್ ಆಡಳಿತದ ಒಪ್ಪಿಗೆಯೊಂದಿಗೆ, ಜಿಇ ಕಂಪನಿಯು ಭಾರತದ ಲಘು ಯುದ್ಧ ವಿಮಾನ ತೇಜಸ್‌ನಲ್ಲಿ ಅಳವಡಿಸಲು ಎಂಜಿನ್ ತಯಾರಿಕೆಯ ವಿಚಾರವಾಗಿ ಒಪ್ಪಂದಕ್ಕೆ ಸಹಿ ಹಾಕಿದೆ. ಅಮೆರಿಕವು ಭಾರತಕ್ಕೆ ಶಸ್ತ್ರಸಜ್ಜಿತ 31 ಡ್ರೋನ್‌ಗಳನ್ನು ಮಾರಾಟ ಮಾಡಲಿದೆ. ಇದು ಭಾರತಕ್ಕೆ ಸಮುದ್ರ ಪ್ರದೇಶಗಳಲ್ಲಿ ಹಾಗೂ ಚೀನಾ ಮತ್ತು ಪಾಕಿಸ್ತಾನದ ಜೊತೆಗಿನ ಗಡಿ ಪ್ರದೇಶಗಳಲ್ಲಿ ಸಾಮರ್ಥ್ಯ ವೃದ್ಧಿಗೆ ನೆರವಾಗಲಿದೆ. ಆದರೆ ಇವೆಲ್ಲ ಎರಡು ದೇಶಗಳ ನಡುವಿನ ಸಂಬಂಧದಲ್ಲಿ ಸಹಜ ಮುನ್ನಡೆಗಳು ಎಂದು ವಾದಿಸಬಹುದು. ಸೆಮಿಕಂಡಕ್ಟರ್ ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೆಚ್ಚು ಮಹತ್ವದ ಮೈತ್ರಿ ಏರ್ಪಟ್ಟಿದೆ. ಚಿಪ್ ತಯಾರಿಕಾ ಕಂಪನಿ ಮೈಕ್ರಾನ್‌ಗೆ ಗುಜರಾತ್‌ನಲ್ಲಿ ತಯಾರಿಕಾ ಘಟಕವೊಂದನ್ನು ಸ್ಥಾಪಿಸಲು ಅಮೆರಿಕ-ಭಾರತದ ನಡುವೆ ಒಪ್ಪಂದ ಆಗಿರುವುದು ಕೂಡ ಬಹಳ ಮಹತ್ವದ್ದು. ಈ ಒಪ್ಪಂದದ ಮೂಲಕ ಭಾರತವು ಜಾಗತಿಕ ಮಟ್ಟದಲ್ಲಿ ಸೆಮಿಕಂಡಕ್ಟರ್ ಪೂರೈಕೆ ವ್ಯವಸ್ಥೆಯ ಪಾಲುದಾರ ಆಗುವತ್ತ ಮೊದಲ ಹೆಜ್ಜೆ ಇರಿಸಿದೆ. ಮಹತ್ವದ ಹಾಗೂ ಪ್ರವರ್ಧಮಾನಕ್ಕೆ ಬರುತ್ತಿರುವ ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಕಂಪ್ಯೂಟಿಂಗ್‌ನಂತಹ ಕ್ಷೇತ್ರಗಳಲ್ಲಿ ಎರಡೂ ದೇಶಗಳು ಜೊತೆಯಾಗಿ ಕೆಲಸ ಮಾಡಲಿವೆ.

ಈ ಎಲ್ಲ ಒಪ್ಪಂದಗಳನ್ನು ಕೆಲವು ವಹಿವಾಟುಗಳಿಗೆ ಮಾತ್ರ ಸೀಮಿತವಾದುವು ಎಂದು ಗ್ರಹಿಸಬಹುದಿತ್ತು. ಆದರೆ, ಅಮೆರಿಕದ ಸಂಸತ್ತಿನಲ್ಲಿ ಮಾಡಿದ ಭಾಷಣದಲ್ಲಿ ಮೋದಿ ಅವರು ಈ ಒಪ್ಪಂದಗಳಿಗೆ ಒಂದು ಅರ್ಥವನ್ನು ನೀಡಿದರು, ಒಪ್ಪಂದಗಳನ್ನು ನಿರ್ದಿಷ್ಟ ಚೌಕಟ್ಟಿನಲ್ಲಿ ವಿವರಿಸಿದರು. ಪ್ರಜಾತಂತ್ರ, ಉಕ್ರೇನ್ ಮೇಲೆ ರಷ್ಯಾ ನಡೆಸಿರುವ ಆಕ್ರಮಣ ಹಾಗೂ ಚೀನಾ ಕುರಿತು ಅಧ್ಯಕ್ಷ ಬೈಡನ್ ಅವರು ಬಯಸಿದ್ದ ರೀತಿಯಲ್ಲಿ ಮೋದಿ ಅವರು ಮಾತನಾಡಿದಂತಿತ್ತು. ಚೀನಾ ವಿಚಾರದಲ್ಲಿ ಅವರು ಸ್ಪಷ್ಟವಾದ ಅನಿಸಿಕೆ ವ್ಯಕ್ತಪಡಿಸಿದರು. 'ಬಲಪ್ರಯೋಗ ಮತ್ತು ಸಂಘರ್ಷದ ಕರಿಮೋಡಗಳು ಇಂಡೊ-ಪೆಸಿಫಿಕ್ ಪ್ರದೇಶದ ಮೇಲೆ ಮೂಡಿವೆ' ಎಂಬ ಎಚ್ಚರಿಕೆ ನೀಡಿದರು. ಈ ಪ್ರದೇಶವನ್ನು ಮುಕ್ತವಾಗಿ ಇರಿಸಲು, ಜಾಗತಿಕ ಪೂರೈಕೆ ವ್ಯವಸ್ಥೆಯು ಎಲ್ಲರಿಗೂ ಲಭ್ಯವಿರುವಂತೆ ಮಾಡಲು, ಅದನ್ನು ವಿಕೇಂದ್ರೀಕರಿಸಲು ಭಾರತ ಮತ್ತು ಅಮೆರಿಕ ಒಟ್ಟಾಗಿ ಕೆಲಸ ಮಾಡಲಿವೆ ಎಂದು ಸಾರಿದರು. ಇಲ್ಲಿರುವ ಸಂದೇಶ ಬಹಳ ಸ್ಪಷ್ಟವಾಗಿದೆ. ಚೀನಾವನ್ನು ಮಿತಿಯೊಳಗೆ ಇರಿಸುವ ಉದ್ದೇಶದೊಂದಿಗೆ ಭಾರತ ಮತ್ತು ಅಮೆರಿಕ ಈಗ ಒಂದಾಗಿ ನಿಂತಿವೆ.

ದಿನದ ಟ್ವೀಟ್

ಬೇಕಾಗಿವೆ ಬಸ್ಸುಗಳು



ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸಿದ್ದು ಒಳ್ಳೆಯ ವಿಚಾರ. ಈ ವ್ಯವಸ್ಥೆಯು ಸಾರಿಗೆ ಇಲಾಖೆಯಲ್ಲಿನ, ಬಸ್ ಪ್ರಯಾಣದ ಅವ್ಯವಸ್ಥೆಯನ್ನು ಬಯಲು ಮಾಡಿದೆ. ಖಾಸಗಿ ಬಸ್ಸಿನ ಪ್ರಯಾಣಿಕರು ಸರ್ಕಾರಿ ಸಾರಿಗೆ ಕಡೆ ಮುಖ ಮಾಡುತ್ತಿದ್ದು, ದಿಢೀರನೆ ಉಂಟಾದ ದಟ್ಟಣೆ ತೊಡೆದುಹಾಕಲು ಇರುವ ಒಂದೇ ಉಪಾಯವೆಂದರೆ ಹೆಚ್ಚು ಹೊಸ ಬಸ್ಸುಗಳನ್ನು ರಸ್ತೆಗೆ ಇಳಿಸುವುದು.

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ



ಆರ್.ಅಶೋಕ ಕಾರ್ಯವೈಖರಿ ಬೇರೆ, ನನ್ನ ಕಾರ್ಯವೈಖರಿ ಬೇರೆ. ನಾನು ತೆಗೆದುಕೊಂಡಂಥ ರಿಸ್ಕ್ ಯಾರೂ ತೆಗೆದುಕೊಂಡಿಲ್ಲ. ಯಾರು ಎಲ್ಲಿ ಒಳ ಒಪ್ಪಂದ ಮಾಡಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನನ್ನಷ್ಟು ಅರ್ಹ ಬೇರೆ ಯಾರೂ ಇಲ್ಲ. ಬಕೆಟ್ ಹಿಡಿದು ಗೊತ್ತಿಲ್ಲ. ಎಲ್ಲರನ್ನೂ ಒಂದುಗೂಡಿಸಿಕೊಂಡು ಹೋಗುತ್ತೇನೆ.

ವಿ.ಸೋಮಣ್ಣ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಬುಧವಾರ, 24-6-1998

● **ಬಿಜೆಪಿ ಪತನದ ನಂತರ ಸರ್ಕಾರ ರಚನೆಗೆ ಕಾಂಗ್ರೆಸ್ ಒಲವು**

ನವದೆಹಲಿ, ಜೂನ್ 23 (ಯುಎನ್‌ಐ, ಪಿಟಿಐ)– ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ಪತನವಾದರೆ ಪರ್ಯಾಯ ಸರ್ಕಾರ ರಚನೆ ಹೊಣೆಯನ್ನು ಹೊರಲು ಸಿದ್ಧವಿರುವುದಾಗಿ ಕಾಂಗ್ರೆಸ್ ಇಂದು ಹೇಳಿದೆ.

ಪರ್ಯಾಯ ಸರ್ಕಾರ ರಚನೆಗೆ ಸಂಬಂಧಿಸಿದಂತೆ ಜಾತ್ಯತೀತ ಮತ್ತು ಎಡಪಕ್ಷಗಳು ಮಾಡಿರುವ ಪ್ರಸ್ತಾಪಕ್ಕೆ ಪೂರಕ ಪ್ರತಿಕ್ರಿಯೆ ವ್ಯಕ್ತಪಡಿಸಿರುವ ಕಾಂಗ್ರೆಸ್, ಈ ಧ್ಯೇಯ ಸಾಧನೆಗಾಗಿ ಜಾತ್ಯತೀತ ಶಕ್ತಿಗಳು ಒಗ್ಗೂಡುವ ಅಗತ್ಯವಿದೆ ಎಂದು ಹೇಳಿದೆ.

ದೇಶದ ರಾಜಕೀಯ ವ್ಯವಸ್ಥೆ ಹಾಗೂ ಬಿಜೆಪಿ ನೇತೃತ್ವದ ಸರ್ಕಾರದ ಕಾರ್ಯಕ್ಷಮತೆ ಪರಾಮರ್ಶೆಗೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿಣಿ ಸುಮಾರು ಐದು ಗಂಟೆಗಳ ಕಾಲ ಸುದೀರ್ಘ ಚರ್ಚೆ ನಡೆಸಿ, ದೇಶದ ರಾಜಕೀಯ- ಆರ್ಥಿಕ ರಂಗ ತೀವ್ರವಾಗಿ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಜಾತ್ಯತೀತ ಶಕ್ತಿಗಳು ಒಗ್ಗೂಡುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿತು.

● **ಖ್ಯಾತ ಸಮಾಜಶಾಸ್ತ್ರಜ್ಞ ಹಿರೇಮಲ್ಲೂರು ನಿಧನ**

ಧಾರವಾಡ, ಜೂನ್ 23– ಕನ್ನಡ ಸಾಹಿತಿ ಹಾಗೂ ಅಂತರರಾಷ್ಟ್ರೀಯ ಖ್ಯಾತಿಯ ಸಮಾಜಶಾಸ್ತ್ರಜ್ಞ ಡಾ. ಹಿರೇಮಲ್ಲೂರು ಈಶ್ವರನ್ (76) ಅವರು ಇಂದು ಬೆಳಗಿನ ಜಾವ ತೀವ್ರ ಹೃದಯಾಘಾತದಿಂದ ನಿಧನರಾದರು.

ವಿದೇಶದಲ್ಲಿರುವ ಅವರ ಪತ್ನಿ ಮತ್ತು ಮಕ್ಕಳು ಶುಕ್ರವಾರ ಧಾರವಾಡಕ್ಕೆ ಬರಲಿದ್ದು, ಅವರು ಬಂದ ನಂತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಭಾನುವಾರ, 24-6-1973

● **ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ: ಲಾಠಿ, ಅಶ್ರುವಾಯು ಪ್ರಯೋಗ**

ಬೆಂಗಳೂರು, ಜೂನ್ 23– ಬೆಲೆ ಏರಿಕೆಯನ್ನು ಪ್ರತಿಭಟಿಸಲು ಸಂಜೆ ವಿಧಾನಸೌಧದ ಬಳಿ ಸೇರಿದ್ದ ಭಾರಿ ಕಾರ್ಮಿಕ ಸಮೂಹವನ್ನು, ಒಂದು ಕಡೆ ಕಲ್ಲು ಬಿದ್ದ ನಂತರ ಪೊಲೀಸರು ಲಾಠಿ ಪ್ರಯೋಗ ಮಾಡಿ ಚದುರಿಸಿದರು.

ಲಾಠಿ ಪ್ರಯೋಗ ಆರಂಭವಾದ ನಂತರ ಅದಕ್ಕೆ ಉತ್ತರವಾಗಿ ಉದ್ರಿಕ್ತ ಕಾರ್ಮಿಕರು ಕಲ್ಲುಗಳನ್ನು ತೂರಲು ಆರಂಭಿಸಿದ ಪರಿಣಾಮವಾಗಿ 29 ಪೊಲೀಸರು ಹಾಗೂ ಅನೇಕ ಕಾರ್ಮಿಕರು ಗಾಯಗೊಂಡರು.

ಪೊಲೀಸರು ಒಟ್ಟು 100 ಅಶ್ರುವಾಯು ಶೆಲ್‌ಗಳನ್ನು ಆಕಾಶದತ್ತ ಹಾರಿಸಿದರು.

ಕಬ್ಬನ್ ಪಾರ್ಕಿನಿಂದ ನಾನಾ ದಿಕ್ಕುಗಳಲ್ಲಿ ಚದುರಿದ ಕಾರ್ಮಿಕರು ಹೋದ ರಸ್ತೆಗಳಲ್ಲಿ ಒಟ್ಟು 10 ಬಿ.ಟಿ.ಎಸ್. ಬಸ್ಸುಗಳಿಗೆ ಹಾನಿಯಾಯಿತು.

● **ಇನ್ನೂ 3 ತಿಂಗಳು ಅಭಾವ ಪರಿಹಾರ ಕಾರ್ಯ; ಫಸಲು ಬಂದರೆ ನಿಲುಗಡೆ**

ಮದರಾಸು, ಜೂನ್ 23– ಮೈಸೂರು ರಾಜ್ಯದ ಅಭಾವ ಪರಿಹಾರ ಕಾಮಗಾರಿಗಳು ಕನಿಷ್ಠ ಇನ್ನೂ ಮೂರು ತಿಂಗಳಾದರೂ ಮುಂದುವರಿಯುತ್ತವೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ಸುದ್ದಿಗಾರರಿಗೆ ತಿಳಿಸಿದರು.

ಅಭಾವ ಪರಿಹಾರಕ್ಕಾಗಿ ಇದುವರೆಗೆ ನಲವತ್ತು ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ ಎಂದು ಹೇಳಿದ ಅರಸು ಅವರು, 'ಎಂಟು ಲಕ್ಷ ಮಂದಿ ಸ್ವಯಂ ಸೇವಕರು ಎಡೆಬಿಡದೆ ಕೆಲಸ ಮಾಡುತ್ತಿದ್ದಾರೆ. ಹೊಸ ಬೆಳೆ ಆಗುವವರೆಗೆ ಕಾಮಗಾರಿಗಳು ನಡೆಯುತ್ತಾ ಇರುತ್ತವೆ' ಎಂದರು. ಮೈಸೂರು ರಾಜ್ಯದ ಅಭಾವ ಪರಿಹಾರ ನಿಧಿಗೆ ಕಾಣಿಕೆ ನೀಡಬೇಕೆಂದು ಕೈಗಾರಿಕೋದ್ಯಮಿಗಳಿಗೆ ಮನವಿ ಮಾಡಿದರು.

ಅಂದು ದ್ರೌಪದಿ, ಇಂದು ಕುಸ್ತಿಪಟುಗಳು: ಸ್ಥಿತಿ ಬದಲಾದರೂ ಪರಿಸ್ಥಿತಿಯೇಕೆ ಬದಲಾಗುತ್ತಿಲ್ಲ?

ಆಟದಂಗಣದ ಆಚೆಗಿನ ಮುಳ್ಳುಗಳು



ವಿಶ್ಲೇಷಣೆ

ಸಬಿತಾ ಬನ್ನಾಡಿ

'**ಅಹಹ** ಪಾಂಡವರಾಯ ಪಟ್ಟದ ಮಹಿಳೆಗೀ ವಿಧಿಯೇ' ಎಂಬ ಈ ಉದ್ಗಾರ ಬಂದಿದ್ದು ಸಭಾ ಜನರಿಂದ. ದ್ರೌಪದಿಯನ್ನು ಸಭೆಗೆ ದರದರನೆ ಎಳೆದು ತಂದಾಗಿನ ಮಾತಿದು. ಇಂದು 'ಒಲಿಂಪಿಕ್ ಪದಕ ಗೆದ್ದ ಮಹಿಳೆಗೆ ಈ ವಿಧಿಯೇ' ಎಂಬ ಉದ್ಗಾರ ಹಲವು ಸಾಮಾನ್ಯ ಜನರಿಂದ ಬಂದಿದೆ. ಉದ್ಗಾರದಾಚೆಗಿನ ಬೆಂಬಲ ವ್ಯಾಪಕವಾಗಿ ಯಾಕೆ ಸಿಗುತ್ತಿಲ್ಲ ಎಂಬುದೂ ಈಗ ಕೇಳಿಕೊಳ್ಳಬೇಕಾದ ಪ್ರಶ್ನೆ.

ಯಾಕೆ ಇಡೀ ಸಭೆ ದ್ರೌಪದಿಯ ವಿಷಯದಲ್ಲಿ ಮೌನವಾಯಿತು? ಮೊದಲಿಗೇ ವಿದುರ, 'ಇದೆಂತಹ ಮೂರ್ಖ ನಡೆ, ಸಿಡಿಲನ್ನು ಪೊಟ್ಟಣಗಟ್ಟಿ (ಮೈಗೆ) ಶಾಖ ಕೊಟ್ಟುಕೊಳ್ಳಲು ಹೊರಟಿದ್ದೀರಿ' ಎಂದು ಎಚ್ಚರಿಸುತ್ತಾನೆ. ಅದಕ್ಕೆ ಕೌರವರು ಸಿಟ್ಟಾಗುತ್ತಾರೆ ವಿನಾ ತಿಳಿದುಕೊಳ್ಳುವುದಿಲ್ಲ. ಈಗಲೂ ಇಂತಹ ಬುದ್ಧಿಮಾತು ಹಲವರಿಗೆ ರುಚಿಸುವುದಿಲ್ಲ. ರಾಜನ ಮುಂದೆ ಘಟಾನುಘಟಿಗಳೇ ಮೌನ ತಾಳುತ್ತಾರೆ. ಯಾಕೆ? ಹೆಣ್ಣು ಎಂಬುದು 'ವಸ್ತು' ಮಾತ್ರವಾಗಿ ಅವರಿಗೆ ಕಾಣಿಸುವುದು. ಅವಳನ್ನು ಪಟ್ಟದಲ್ಲಿ ಕೂರಿಸಿ ಮೆರೆಸಿದಾಗ ಮೆರೆಯಬೇಕು, ತೊತ್ತೆಂದು ತುಳಿದಾಗ ತುಳಿಸಿಕೊಳ್ಳಬೇಕು. ಆದರೆ ಅವಳು ಬಾಯಿಬಿಟ್ಟು ನ್ಯಾಯದ ಪ್ರಶ್ನೆ ಮಾತ್ರ ಎತ್ತಬಾರದು. ಇಂದು ಮಹಿಳಾ ಕುಸ್ತಿಪಟುಗಳ ಸ್ಥಿತಿಯೂ ಇದೇ ಆಗಿದೆ.

ಗೆದ್ದಾಗ ಸಿಕ್ಕ ಮನ್ನಣೆ, ಪ್ರೀತಿ, ಪುರಸ್ಕಾರ, ಅವಕಾಶಗಳು ತಮ್ಮ ಸಾಧನೆಗೆ, ದೇಶಕ್ಕಾಗಿ ತಾವು ಕೊಟ್ಟ ಕೊಡುಗೆಗೆ ಎಂದೇ ಈ ಸಾಧಕಿಯರು ಭಾವಿಸಿದ್ದು ಸಹಜವೇ ತಾನೇ? ಹಾಗಾದರೆ ಅವರು ಎತ್ತುತ್ತಿರುವ ನ್ಯಾಯದ ಪ್ರಶ್ನೆಯನ್ನೇಕೆ ಮುಳ್ಳೆಂದು ಭಾವಿಸಲಾಗುತ್ತಿದೆ? ನೂರಾರು ಬಡ, ಚಿಕ್ಕ ಹರೆಯದ, ಕುಸ್ತಿಪಟುಗಳಾಗುವ, ಸಾಧನೆ ಮಾಡುವ ಆಸೆಯಿಂದ ಬಂದ ಹುಡುಗಿಯರಿಗೆ ಆಗುತ್ತಿರುವ ದೌರ್ಜನ್ಯವನ್ನು ಭವಿಷ್ಯದಲ್ಲಾದರೂ ನಿಲ್ಲಿಸಿದರೆ ಇನ್ನಷ್ಟು ಸಾಧಕಿಯರು ನಿರುಮ್ಮಳವಾಗಿ ದೇಶದ ಪತಾಕೆಯನ್ನು ಎತ್ತಿ ಹಿಡಿಯಬಹುದು. ಇದಕ್ಕೆ ಅನುವು ಮಾಡಿಕೊಡುವುದು ತಮ್ಮ ಕರ್ತವ್ಯವೆಂದು ಅವರು ಭಾವಿಸುವುದು ತರವಲ್ಲವೇ?

ಈ ಕಾರಣಕ್ಕಾಗಿ ಅವರು ಮೊದಲು ಇದನ್ನು ವೈಯಕ್ತಿಕ ಮನವಿಯಾಗಿ ಸಂಬಂಧಪಟ್ಟವರ ಗಮನಕ್ಕೆ ತಂದರೇ ವಿನಾ ಬಾಹ್ಯ ಜಗತ್ತಿನೆದುರು ನೇರವಾಗಿ ಇಡಲಿಲ್ಲ. ನ್ಯಾಯ ಸಿಗುವ ಭರವಸೆಯಿಂದ ಕಾದರು. ಆದರೆ ಅವರಿಗೇ ಅಚ್ಚರಿ ಎಂಬಂತೆ ಇವತ್ತು ಬ್ರಿಜ್‌ಭೂಷಣ್ ಶರಣ್ ಸಿಂಗ್ ಎಂಬ ವ್ಯಕ್ತಿ ದೇಶದಲ್ಲೇ ಯಾರ ಅಳವಿಗೂ ಸಿಗದಾತ! ಮಾತ್ರವಲ್ಲ, ಅತನಿಗೆ ಸಿಗುತ್ತಿರುವ ಬೆಂಬಲ ಊಹಾತೀತ. ಪಿ.ಟಿ.ಉಷಾ, ಮೀನಾಕ್ಷಿ ಲೇಖಿ ಎಲ್ಲರಿಗೂ ಮೈಕ್ ಕಂಡರೆ ಓಡುವಷ್ಟು ಭಯ!

ರಾಣಿಯಾಗಿ ಮೆರೆದ ದ್ರೌಪದಿಗೆ ಇಡೀ ಸಭೆಯಲ್ಲಿ ಬೆಂಬಲದ ಒಂದು ಮುಖ, ಒಂದು ನೋಟ ಕಾಣದೇ ಹೋಯಿತು. 'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು/ ಭೀಷ್ಮ ಮೊದಲಾದ ಅತಿರಥರು ಪರಹಿತವ ಬಿಸುಟರು ವ್ಯರ್ಥಭೀತಿಯಲಿ' ಎಂದಾಗಲೂ ಗೋಣು ಬಗ್ಗಿಸಿ ನೆಲ ನೋಡುತ್ತಿರುವ ಹಿರಿ ಕಿರಿಯರು! ಅಟ್ಟಹಾಸದ, ಕುಹಕದ ಇರಿತಗಳೇ ಎಲ್ಲೆಲ್ಲೂ. ವಿಕರ್ಣನೊಬ್ಬನೇ ತನ್ನವರನ್ನೇ ವಿರೋಧಿಸಿ ಝುಂಕಿಸಿಕೊಂಡ. ಜಾತಿಯ ಕಾರಣಕ್ಕೆ ಸದಾ ಅವಮಾನಿತನಾಗುತ್ತಿದ್ದ ಕರ್ಣನೂ ಅಸಹ್ಯದ ಮಾತಾಡಿ ಸಣ್ಣವನಾದ. ಇಂದು ನಮ್ಮ ಕುಸ್ತಿಪಟು ಹೆಣ್ಣುಮಕ್ಕಳನ್ನೂ ಹೀಗೇ ಏನೆಲ್ಲಾ ಹೇಳಿ ಬಗ್ಗಿಸಲಾಗುತ್ತಿದೆ. 'ದೌರ್ಜನ್ಯವನ್ನು ಎಂಜಾಯ್ ಮಾಡಿ ಈಗ ಗಲಾಟೆ ಮಾಡುತ್ತಿದ್ದೀರಾ?' ಅಂತ ಒಬ್ಬ ಮಹಾನುಭಾವ ಕೇಳಿದ. ದೌರ್ಜನ್ಯವನ್ನೂ ಎಂಜಾಯ್ ಮಾಡುವ ಹೊಸ ಸಂಶೋಧನೆ ಬೇರೆ ಆಗಿದೆ!

ಸಾಕ್ಷಿ ಮಲಿಕ್, ವಿನೇಶಾ ಫೋಗಟ್‌ರಂತಹವರ ಬಗ್ಗೆಯೂ- ಇವರು ಕೆಲವು ನಿಯಮಗಳಿಂದ ಜಾರಿಕೊಳ್ಳಲು, ಹಣದ ಆಸೆಗಾಗಿ- ಹೀಗೆ ಹೆಂಗಸರ ವಿಷಯದಲ್ಲಿ ಏನೇನು ಸಲೀಸಾಗಿ ಹೇಳಿಯೂ ದಕ್ಕಿಸಿಕೊಳ್ಳಬಹುದೋ ಅದೆಲ್ಲವನ್ನೂ ಹೇಳಲಾಗುತ್ತಿದೆ. ತಮ್ಮನ್ನು ತಾವು ಮೆಟೀರಿಯಲ್‌ಗಳು ಎಂದು ವ್ಯವಸ್ಥೆ ಕಲಿಸಿಕೊಟ್ಟ ನಿರೂಪಣೆಗಳನ್ನು ತಲೆಯಲ್ಲಿ ತುಂಬಿಕೊಂಡ ಮಹಿಳೆಯರೂ 'ಇವರ ರೂಪ ನೋಡಿ ಯಾರು ಬರ್ತಾರೆ?' ಎಂದು ಕೇವಲವಾಗಿ ಮಾತಾಡಿದ ವಿಡಿಯೊಗಳು ಹರಿದಾಡುತ್ತಿವೆ. ಪ್ರಶ್ನೆ ಬಹಳ ಸರಳವಾದುದು. ಇಷ್ಟೆಲ್ಲ ಆಪಾದನೆ ಇದ್ದ ವ್ಯಕ್ತಿ ಸರ್ಕಾರಕ್ಕೆ ಅನಿವಾರ್ಯವಾಗಿದ್ದು ಯಾಕೆ?


ಎಲ್ಲ ಘಟಾನುಘಟಿಗಳ ಮೌನ ನೋಡಿ ದ್ರೌಪದಿ, 'ಹಿರಿಯರಿಲ್ಲದ ಸಭೆ ಮನುಷ್ಯರ ನೆರವಿ. ಅದು ಸಭೆಯಲ್ಲ. ಮೂರ್ಖರು ಹಿರಿಯರಲ್ಲ. ಯಥಾರ್ಥ ಭಾಷಣ ಭೀತ ಚೇತನರು' ಎನ್ನುತ್ತಾಳೆ. ಭೀಮನಿಗೆ ಕಸಿವಿಸಿಯಾಗುತ್ತದೆ. ಧರ್ಮದ ಹೆಸರಿನಲ್ಲಿ ಅಣ್ಣ ಸುಮ್ಮನಿರುವುದರಿಂದ ಅಣ್ಣನ ಮೇಲೇ ಸಿಟ್ಟಾಗುತ್ತಾನೆ. ಆಗ ಅವನನ್ನು ತಡೆಯುವ ಅರ್ಜುನನ ಮಾತು ಕೇಳಿ: 'ನಮಗೀ ನಿತಂಬಿನಿಯಾದಿಯಾದ (ದ್ರೌಪದಿಯನ್ನೂ ಸೇರಿಸಿಕೊಂಡು) ಸಮಸ್ತ ವಸ್ತುಗಳು ಈ ನರೇಂದ್ರಗೆ ಸರಿಯೆ... ನಮಗೀತನೇ ಗತಿ...' ಕಾಲ ಅಲ್ಲಿಯೇ ನಿಂತಿರಬಹುದೇ? ಹೆಣ್ಣು ವಸ್ತು ಎನ್ನುವುದನ್ನು ಬೇರೆ ಬೇರೆ ರೂಪದಲ್ಲಿ ಮತ್ತೆ ಮತ್ತೆ ಹೇಳಲಾಗುತ್ತಿದೆಯೇ?

ರೈತರ ಒಗ್ಗಟ್ಟಿನ ಹೋರಾಟದಲ್ಲಿ ಏಳ್ನೂರಕ್ಕೂ ಹೆಚ್ಚು ಜನರ ಪ್ರಾಣ ಹೋಯಿತು. ಅಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಹೋಗಿ ಬೆಂಬಲ ಕೊಟ್ಟರು. ಎಲ್ಲ ಅಡೆತಡೆಗಳ ನಡುವೆ ಅದಕ್ಕೆ ದೇಶದಾದ್ಯಂತ ಸ್ಪಂದನೆ ಸಿಕ್ಕಿತು. ರೈತಸಂಘದವರು ಕುಸ್ತಿಪಟುಗಳ ಬೆಂಬಲಕ್ಕೆ ಬಂದರು. ಆದರೆ ಅದಕ್ಕೆ ವ್ಯಾಪಕ ಸ್ಪಂದನೆ ಸಿಗಲಿಲ್ಲ. ಇದು ಯೋಚಿಸಬೇಕಾದ ಸಂಗತಿ. ಹೆಣ್ಣನ್ನು ಅಸಹಾಯಕತೆಯ ಸುಳಿಯಿಂದ ಹೊರಬರಲಾರದಂತಹ ಸ್ಥಿತಿಯಲ್ಲೇ ಇಡಲಾಗುತ್ತಿದೆ (ಹೆಂಗಸರಿಗೆ ಉಚಿತ ಪ್ರಯಾಣದ ಬಗೆಗೆ ವ್ಯಕ್ತವಾಗುತ್ತಿರುವ ಆಕ್ರೋಶದ ಹಿಂದೆ ಹೆಣ್ಣಿಗೆ ಸಿಗಬಹುದಾದ ಚಲನೆಯ ಸ್ವಾತಂತ್ರ್ಯದ ಬಗೆಗೆ ಗಾಬರಿ, ಅನುಮಾನ, ತಮ್ಮ ನಿಯಂತ್ರಣ ಮೀರಿಬಿಡುತ್ತಾರೆ ಎಂಬ ಆತಂಕಗಳೂ ಇರುವುದು ಹೆಚ್ಚು ನಿಜ).

'ರಾಷ್ಟ್ರಾಭಿಮಾನಿ'ಗಳೆಲ್ಲರೂ ತಮ್ಮನ್ನು ಬೆಂಬಲಿಸುತ್ತಾರೆ ಎಂದು ಮುಗ್ಧವಾಗಿ ನಂಬಿದ್ದ ಕುಸ್ತಿಪಟುಗಳು ಮೊದ ಮೊದಲು ತಮ್ಮ ಪ್ರತಿಭಟನೆಗೆ ರಾಜಕಾರಣಿಗಳ ಪ್ರವೇಶವನ್ನು ನಿರಾಕರಿಸಿದರು. ಈಗವರಿಗೆ 'ರಾಜಕಾರಣ'ದ ಬಿಸಿ ಮುಟ್ಟುತ್ತಿದೆ. ಅವರ ಪರವಾಗಿ ಹೋರಾಟ ಮಾಡುತ್ತಿರುವ ಹಲವು ಎಡಪಂಥೀಯ ಸಂಘಟನೆಗಳ ಮುಖಂಡರನ್ನೂ ಹೊಸ ಸಂಸತ್ ಭವನದ ಉದ್ಘಾಟನೆಯ ದಿನ ಬಂಧಿಸಲಾಗಿತ್ತು. ಅವರನ್ನು ಬೀದಿಯಲ್ಲಿ ದರದರನೆ ಎಳೆದಾಡಿದ ಬಗೆಗೆ 'ಮಹಿಳೆಯರನ್ನು ಗೌರವಿಸುವ ಸಂಸ್ಕೃತಿ ನಮ್ಮದು' ಎನ್ನುವವರು ತುಟಿ ಬಿಚ್ಚಲಿಲ್ಲ. ಬದಲಿಗೆ ಇವರೆಲ್ಲ 'ದೇಶದ ಮಾನ ಬೀದಿಗೆ ತರುತ್ತಿದ್ದಾರೆ' ಎಂದು ದೂಷಿಸಿದರು. ಮೊದಲೇ ಕರೆದು ಮಾತಾಡಿಸಿದ್ದಿದ್ದರೆ ಅವರು ಅಂದೇಕೆ ಅಲ್ಲಿಗೆ ಹೋಗುತ್ತಿದ್ದರು? ಅವರೆಡೆಗೆ ಕಣ್ಣಿನ ಅಂಚಿನಿಂದಲೂ ನೋಡದೆ, ತುಟಿಯಂಚಿನಲ್ಲೂ ಸೊಲ್ಲೆತ್ತದೆ ಸಂಪೂರ್ಣ ನಿರ್ಲಕ್ಷಿಸುವ ಕ್ರೌರ್ಯಕ್ಕಿಂತ ಎದುರಾ ಬದುರು ಮಾತಾಡುವ ಶೌರ್ಯ ತೋರಬಹುದಿತ್ತಲ್ಲವೇ?

ಒಲಿಂಪಿಕ್ಸ್‌ನಲ್ಲಿ ಭಾರತ ಕಳಪೆ ಸಾಧನೆ ಮಾಡುವುದಕ್ಕೂ ನಮ್ಮ ಬಡತನದ ಹಿನ್ನೆಲೆಗೂ ದೊಡ್ಡ ಸಂಬಂಧವಿದೆ. ಕುಸ್ತಿಪಟುಗಳು ಹೆಚ್ಚಾಗಿ ಬಡತನದ ಹಿನ್ನೆಲೆಯವರು. ಅದರ ಜೊತೆಗಿನ ಅಷ್ಟೇ ಮಹತ್ವದ ಕಾರಣ ಆಯ್ಕೆಯಲ್ಲಿ ನಡೆಯುವ ರಾಜಕೀಯ. ಇದನ್ನು ಇಲ್ಲಿನ ಪುರುಷ ಕ್ರೀಡಾಪಟುಗಳೂ ಅನುಭವಿಸಿರುತ್ತಾರೆ. ನಾವೀಗ ಈ ರಾಜಕೀಯಗಳಿಂದ ಕ್ರೀಡಾ ಕ್ಷೇತ್ರವನ್ನು ಮುಕ್ತಗೊಳಿಸುವ ಬಗೆಗೆ ಯೋಚಿಸಲು ಈ ಕುಸ್ತಿಪಟುಗಳ ಪ್ರತಿಭಟನೆಯನ್ನು ಸರಿಯಾದ ಸನ್ನಿವೇಶ ಎಂದು ಭಾವಿಸಬೇಕು. ಆಯ್ಕೆಯ ರಾಜಕೀಯದಲ್ಲಿ ಲೈಂಗಿಕ ದೌರ್ಜನ್ಯದ ಪಾಲೂ ಇರಲೇಬೇಕಲ್ಲ. ಯಾರು ಸಹಿಸಿಕೊಳ್ಳುವರೋ ಸಹಕರಿಸುವರೋ ಅವರಿಗೆ ಅವಕಾಶ ಎಂದಾದರೆ ಇದು ಎಲ್ಲಿಗೆ ತಲುಪುತ್ತದೆ? ಹುಡುಗರ ಮೇಲೂ ಗಂಡಸರಿಂದಲೇ ನಡೆಯುವ ಲೈಂಗಿಕ ದೌರ್ಜನ್ಯದ ಕುರಿತೂ ಚರ್ಚಿಸಬೇಕಿದೆ. ಇಡೀ ಕ್ರೀಡಾ ಕ್ಷೇತ್ರ ಆಟದ ಬಯಲಿನಷ್ಟೇ ಆಪ್ಯಾಯಮಾನವಾದ ತಾಣವಾಗಿ ಮಾರ್ಪಡಬೇಕಿದೆ.

ಕೊನೆಯದಾಗಿ ಒಂದು ಪ್ರಶ್ನೆ: ಕೃಷ್ಣ ಕೊನೆಯಲ್ಲೇ ಏಕೆ ದ್ರೌಪದಿಯ ನೆರವಿಗೆ ಬಂದ? ಬಹುಶಃ ಎಲ್ಲರ ಬಣ್ಣ ಬಯಲಾಗಲೆಂದೇ ಇರಬೇಕು. ನಮ್ಮ ಕುಸ್ತಿಪಟುಗಳಿಗೂ ಕೃಷ್ಣನೋ ಮಾರಮ್ಮನೋ ಚೌಡಮ್ಮನೋ ಯಾರದ್ದಾದರೂ ಸರಿ ನೆರವು ಒದಗಿ ಬರಲಿ. (ಇಲ್ಲಿನ ಉಲ್ಲೇಖಗಳನ್ನು ಕುಮಾರವ್ಯಾಸ ಭಾರತದಿಂದ ಪಡೆಯಲಾಗಿದೆ)



ಚುರುಮುರಿ



ಪ್ರಯಾಣ ಶಕ್ತಿ

● ಮಣ್ಣೆರಾಜು

ಉಚಿತ ಪ್ರವಾಸಕ್ಕೆ ತನ್ನನ್ನು ಕರೆದುಕೊಂಡು ಹೋಗುತ್ತಿಲ್ಲ ಎಂದು ಸುಮಿ ಮೇಲೆ ಅತ್ತೆ ಮುನಿಸಿಕೊಂಡು, ಊಟ ಮಾಡದೆ ಹಣ್ಣು-ಹಂಪಲು ತಿಂದುಕೊಂಡು ಅನ್ನ ಸತ್ಯಾಗ್ರಹ ಆರಂಭಿಸಿದ್ದರು.

'ಅತ್ತೆ, ಹಟ ಮಾಡಬೇಡಿ, ಬಸ್ ಪ್ರಯಾಣ ಸುಖಕರವಲ್ಲ...' ಎಂದಳು ಸುಮಿ.

'ಹೌದಮ್ಮ, ಮುಂದಿನ ವರ್ಷ ನಿನ್ನನ್ನು ಕಾರಿನಲ್ಲಿ ಕರೆದುಕೊಂಡು ಹೋಗ್ತೀನಿ ಸುಮ್ನಿರು' ಅಂದ ಶಂಕ್ರಿ.

'ಪಕ್ಕದ ಮನೆಯವಳು ತನ್ನ ಅತ್ತೆಯನ್ನು ಒಂದು ವಾರ ಫ್ರೀ ಟೂರ್ ಕರೆದುಕೊಂಡು ಹೋಗಿದ್ದಳು, ಅತ್ತೆ ಬಗ್ಗೆ ಅವಳಿಗಿರುವ ಪ್ರೀತಿ, ಅಭಿಮಾನ ನಿನಗಿಲ್ಲ' ಅತ್ತೆ ರೇಗಿದರು.

'ಅವಳು ಘಾಟಿ ಮುದುಕಿ, ಬಸ್ಸಿನಲ್ಲಿ ಹೆಂಗಸರ ಸೀಟಿನಲ್ಲಿ ಕುಳಿತ ಗಂಡಸರನ್ನು ಆಚೆ ಎಳೆದುಹಾಕಿ ಕೂರುವ ಶಕ್ತಿವಂತೆ. ಕಂಬಿ ಹಿಡಿದು ನಿಲ್ಲೋ ಶಕ್ತಿಯೂ ನಿಮಗಿಲ್ಲ'.

'ಗೃಹಲಕ್ಷ್ಮಿಯ ಯಜಮಾನಿ ಸ್ಥಾನವನ್ನು ನಿನಗೆ ಬಿಟ್ಟುಕೊಟ್ಟಿರುವ ಸುಮಿ, ಶಕ್ತಿ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲಿ ಬಿಡಮ್ಮಾ' ಅಂದ ಶಂಕ್ರಿ.

'ಬಸ್ಸಿನಲ್ಲಿ ಹೆಂಗಸರು ಹೋರಾಟ ಮಾಡಿ ಸೀಟು ಗಿಟ್ಟಿಸಬೇಕು. ಕಿಟಕಿಯಿಂದ ಕರ್ಚೀಫು, ಬ್ಯಾಗ್ ಹಾಕಿ ಸೀಟು ರಿಸರ್ವ್ ಮಾಡ್ಬೇಕು, ಕಂಕುಳು ಮಗುವನ್ನೇ ಕಿಟಕಿಯಿಂದ ತೂರಿಸಿ ಸೀಟಿನಲ್ಲಿ ಕೂರಿಸುವ ಪರಿಸ್ಥಿತಿ ಬರಬಹುದು. ನೂಕುನುಗ್ಗಲಲ್ಲಿ ದಬಾಯಿಸಿ ಬಸ್ ಹತ್ತಬೇಕು. ಡ್ರೈವರ್ ಡೋರ್‌ನಲ್ಲೊ, ಕಿಟಕಿಯಿಂದಲೊ ಬಸ್ಸಿನೊಳಗೆ ನುಗ್ಗುವ ಸಾಮರ್ಥ್ಯ ಹೆಂಗಸರಿಗೆ ಇರಬೇಕು. ಅಂಥಾ ಶಕ್ತಿಸಾಮರ್ಥ್ಯ ನಿಮಗಿಲ್ಲ' ಅಂದಳು ಸುಮಿ. ಅತ್ತೆ ಗಾಬರಿಯಾದರು.

'ನಾನು ಪ್ರವಾಸ ಹೋಗಿ, ನಿಮ್ಮ ಆರೋಗ್ಯ ಸುಧಾರಿಸಲಿ ಅಂತ ಎಲ್ಲಾ ದೇವಸ್ಥಾನಗಳಲ್ಲಿ ಪೂಜೆ ಮಾಡಿಸಿ ಪ್ರಸಾದ ತಂದುಕೊಡ್ತೀನಿ. ದೇವಸ್ಥಾನಗಳಲ್ಲಿ ವಯೋವೃದ್ಧರಿಗೆ ಶೀಘ್ರ ದರ್ಶನದ ವ್ಯವಸ್ಥೆ ಮಾಡಿದಂತೆ ಸರ್ಕಾರ ನಿಮ್ಮಂಥವರಿಗೆ ಬಸ್ಸಿನಲ್ಲಿ ಕಡ್ಡಾಯ ಸೀಟು ಮೀಸಲಿಡಬಹುದು, ಆಗ ನೀವು ಆರಾಮವಾಗಿ ಪ್ರವಾಸ ಹೋಗುವಿರಂತೆ...' ಅತ್ತೆಯ ಮನವೊಲಿಸಿದಳು ಸುಮಿ.

ಸಂಗತ

ಮೂಢನಂಬಿಕೆಯ ಬೆನ್ನೇರಿದಾಗ...

ವರ್ತಮಾನವನ್ನು ನಿರ್ಲಕ್ಷಿಸಿ ಎಂದೂ ನೆರವೇರದ ಅತಾರ್ಕಿಕ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುವುದು ಅವೈಜ್ಞಾನಿಕ

● ಯೋಗಾನಂದ

ಮಳೆಗಾಗಿ ಪ್ರಾರ್ಥಿಸಿ ಆರಾಧನೆ, ಬಂಧುಮಿತ್ರರ ಆರೋಗ್ಯಕ್ಕಾಗಿ ಇಡುಗಾಯಿ, ಉರುಳು ಸೇವೆ- ಇಂತಹ ಆಚರಣೆಗಳ ಹಿಂದಿನ ಲೋಕಹಿತದ ಆಶಯದಲ್ಲಿ ಎರಡು ಮಾತಿಲ್ಲ. ಆದರೆ ಅವುಗಳಿಂದ ಇಷ್ಟಾರ್ಥ ಸಿದ್ಧಿಸೀತೆ ಎನ್ನುವುದು ಪ್ರಶ್ನೆ. ಮೂಢನಂಬಿಕೆ ಎಂದರೆ ಕಾರ್ಯಕಾರಣಕ್ಕೆ ಹೊರತಾದ ಪ್ರಶ್ನಿಸದ ನಂಬಿಕೆ, ಎತ್ತು ಕರು ಹಾಕಿತೆಂದರೆ ಕೊಟ್ಟಿಗೆಗೆ ಕಟ್ಟು ಎನ್ನುವ ವಿವೇಚನಾರಹಿತ ಕಾತರ.

ಸಾಗರದ ನೀರು ಆವಿಯಾಗಿ ಘನೀಕರಣಗೊಂಡು ಮೋಡ, ಮೋಡದಿಂದ ಮಳೆ- ಇದು ಎಲ್ಲರಿಗೂ ತಿಳಿದಿರುವ ಸರಳ ಸಂಗತಿ. ಮೋಡ ರೂಪುಗೊಂಡ ಮಾತ್ರಕ್ಕೆ ಮಳೆ ಸುರಿಯದು. ದ್ರವರೂಪದ ನೀರಿನ ಹನಿಗಳು ಪರಸ್ಪರ ಲಗತ್ತಾಗಿ ದೊಡ್ಡ ಗಾತ್ರದ ಹನಿಗಳಾದರೆ ಮಾತ್ರ ಮಳೆಯಾಗುವುದು. ಇವುಗಳ ಸಂಖ್ಯೆ ಕಡಿಮೆಯಾದರೆ ಅವು ಮುಗಿಲಿನಲ್ಲಿ ತ್ರಿಶಂಕು ಸ್ಥಿತಿಯಲ್ಲಿ ಓಲಾಡುತ್ತವೆಯೇ ವಿನಾ ಮಳೆ ಅಸಂಭವ.

ಮಳೆ ನಿಸರ್ಗದ ವಿದ್ಯಮಾನ. ನಮ್ಮ ಕೋರಿಕೆಗೆ ಅತೀತವಾದ ಆಗುಹೋಗು ಅದು. ರಾಸಾಯನಿಕ ಸಿಂಪಡಿಸಿ ಮೋಡವು ಮಳೆ ಸುರಿಸುವಂತೆ ಪ್ರಭಾವಿಸುವ ಮಾತು ಬೇರೆ. ಆದರೆ ನೀರಿನಲ್ಲಿ ಕುಳಿತು ಜಪ, ತಪ ನೆರವೇರಿಸುವುದರಿಂದ ಮಳೆಯಾಗಲು ಸಾಧ್ಯವೇ? ಹಾಗೊಂದು ವೇಳೆ ಪೂಜೆಯಿಂದ ಮಳೆಯಾಗುವುದೆನ್ನಿ. ಅದೇ ಮಳೆ ಅತಿವೃಷ್ಟಿಗೆ ಆಸ್ಪದವಾಗದಂತೆಯೊ ಇಲ್ಲವೆ ತುಂತುರಾಗಿ ಬೀಳುವಂತೆಯೊ, ಕಡೆಗೆ ಮೇಘಗಳು ನಾಲ್ಕು ಹನಿ ಕೂಡ ಸುರಿಸದಂತೆಯೊ ಒಂದು ಕೋರಿಕೆಯ ಕ್ರಮ ಇರಬೇಕಲ್ಲ! ಅಂದಹಾಗೆ ಮಳೆಗಾಗಿ ಏಕೆ ತಾನೆ ಮೊರೆಯಿಡುವುದು? ಒಂದು ಹೆಜ್ಜೆ ಮುಂದಿಟ್ಟು ನೀರಿನ ಬದಲು ಅಕ್ಕಿ, ಬೇಳೆ, ಜೋಳ, ತರಕಾರಿ, ಹಣ್ಣು ಹಂಪಲುಗಳನ್ನೇ ಆಕಾಶದಿಂದ ವರ್ಷಿಸುವಂತೆ ಪ್ರಾರ್ಥಿಸಬಹುದಲ್ಲ?

'ಪ್ರಾರ್ಥನೆಯಿಂದ ಈಡೇರುವ ಯಾವುದೇ ಶಕ್ತಿ ಜಗತ್ತಿನಲ್ಲಿ ಇಲ್ಲ' ಎಂದು ಗೌತಮ ಬುದ್ಧ ಹೇಳಿ ಎರಡೂವರೆ ಸಹಸ್ರಮಾನಗಳು ಸಂದಿವೆ. ವಿಚಾರವಾದವು ಸಂದರ್ಭದ ಸಂಭಾವ್ಯ ಆಗುಹೋಗುಗಳ ಅವಲೋಕನಗಳಿಗೆ ನಮ್ಮನ್ನು ದೂಡುತ್ತದೆ. ಒಂದು ವೃತ್ತಾಂತ ನೆನಪಾಗುವುದು. ಕುಗ್ರಾಮವೊಂದರ ದೊಡ್ಡ ಮನೆಯಲ್ಲಿ ಒಬ್ಬಂಟಿಯಾಗಿದ್ದ ವಾಸಿಗೆ ನಡುರಾತ್ರಿ ಸರಸರನೆ ಮಹಡಿ ಮೆಟ್ಟಿಲುಗಳನ್ನೇರಿ ಯಾರೋ ಮೇಲೇರಿದ ಭಯ ಕಾಡುತ್ತದೆ. ಆತ ಶರಣಾಗುವುದು ತರ್ಕಕ್ಕೆ. ಅರೆ! ಮರದ ಮೆಟ್ಟಿಲು ಸದ್ದಾಗಲಿಲ್ಲ ಏಕೆ? ಭ್ರಮೆ ಹರಿಯಲು ಅತನಿಗೆ ಕ್ಷಣ ಆಲೋಚನೆಯೆ ಸಾಕಾಗುವುದು. ಚಲಿಸಿದ್ದು ಕಂದೀಲು ಹಿಡಿದಿದ್ದ ಅವನದೇ ನೆರಳು!

ಪ್ರಕೃತಿಯ ಭಾಗವೇ ಆದ ನಾವು ಕಾಮನಬಿಲ್ಲು, ಜಲಪಾತ, ಸೂರ್ಯೋದಯದಂತೆಯೇ ಮಳೆಯ ಅಭಾವವನ್ನಾಗಲಿ, ಪ್ರವಾಹವನ್ನಾಗಲಿ ಒಪ್ಪಬೇಕು, ನಿರ್ವಹಿಸಬೇಕು, ಆನಂದಿಸಬೇಕು. ಪ್ರತಿಯೊಂದು ವಿದ್ಯಮಾನದ ಹಿಂದೆ ಕಾರಣವಿದ್ದೀತು. ಹಾಗಾಗಿ ಅದನ್ನು ಭವಿತವ್ಯದಲ್ಲಿ ಘಟಿಸುವ ಸಂಗತಿಗೆ ತಯಾರಿಯಂತೆ ಪರಿಗಣಿಸುವುದು ವಿವೇಕ. ನಿಸರ್ಗದ ವಿದ್ಯಮಾನಗಳಿಗೆ ವಿಜ್ಞಾನವು ಸಾಕ್ಷ್ಯಾಧಾರಿತ ವಿವರಣೆಗಳನ್ನು ಪೂರೈಸುವುದು. ಮಹಾತ್ಮ ಗಾಂಧೀಜಿ 'ನಂಬಿಕೆಗೆ ಕಾರಣವಿರಬೇಕು. ನಂಬಿಕೆ ಕುರುಡಾದರೆ ಅದು ಸಾಯುವುದು' ಎಂದರು. ಆಧಾರವಿಲ್ಲದೆ ನಂಬುವುದು ಅಪರಾಧವೇ ಹೌದು. ಸಂಖ್ಯೆ ಹದಿಮೂರು ಅನಿಷ್ಟವೆಂದು ಕಟಕಟೆಯಲ್ಲಿ ನಿಲ್ಲಿಸಿ ಹನ್ನೆರಡನ್ನು ಎರಡು ಬಾರಿ ಎಣಿಸುವುದು ಮೌಢ್ಯ ತಾನೆ?

ವೈಚಾರಿಕತೆ ನಮ್ಮನ್ನು ಅನವರತ ವಿದ್ಯಾರ್ಥಿಯನ್ನಾಗಿಸುತ್ತದೆ. 'ವೈಜ್ಞಾನಿಕ ಧ್ಯಾನ' ಎನ್ನುವುದಿದೆ. ನಮ್ಮ ಏಕಾಗ್ರತೆ, ಇಚ್ಛಾಶಕ್ತಿ ಹೆಚ್ಚುವಂತೆ, ಕೋಪ, ತಾಪ, ಅಸಹಿಷ್ಣುತೆ ತಗ್ಗುವಂತೆ ಮನಸ್ಸನ್ನು ಒಂದು ಹದಕ್ಕೆ ತರಬಲ್ಲ ಶಿಸ್ತಿನ ಧ್ಯಾನ ಯಾರಿಗೆ ತಾನೆ ಬೇಡ. ಮಳೆ ಸುರಿಯುವ ಬಗೆ ಹೇಗೆ? ಅಭಾವ ಏಕೆ ತಲೆದೋರುತ್ತದೆ? ಸೂರ್ಯ ಕೆಲವೊಮ್ಮೆ ತೀವ್ರ ಬಿಸಿ ಕಾರುವನೇಕೆ? ಚಂದ್ರನೇಕೆ ಭೂಮಿಗಪ್ಪಳಿಸನು?- ಮುಂತಾದವು ಈಗ ಒಗಟುಗಳೇನಲ್ಲವಲ್ಲ, ಅವಕ್ಕೆ ವೈಜ್ಞಾನಿಕ ಸಮಜಾಯಿಷಿಗಳು ಲಭಿಸಿವೆ. ಹೀಗಿದ್ದರೂ ಮಳೆಗಾಗಿ ಕತ್ತೆಗಳ ಮೆರವಣಿಗೆ, ಸುಭಿಕ್ಷಕ್ಕಾಗಿ ಅಮೂಲ್ಯ ಬಟ್ಟೆ ಬರೆ, ದವಸ, ಹಣ್ಣು ಕಾಯಿಯನ್ನು ಹೋಮ ಹವನದ ಹೆಸರಲ್ಲಿ ಸುಡುವುದು ತರವೇ? ಗೇಣು ಬಟ್ಟೆ ತಯಾರಿಸುವುದರ, ಹಿಡಿ ಭತ್ತ ಬೆಳೆಯುವುದರ ಅಥವಾ ಗೋಲಿ ಗಾತ್ರದ ಬೆಣ್ಣೆ ತೆಗೆಯುವುದರ ಹಿಂದೆ ಅದೆಷ್ಟು ಪರಿಶ್ರಮವಿದೆ.



ತುಪ್ಪದ ಹೊಗೆ ಮೋಡವನ್ನು ಪ್ರಭಾವಿಸಿ ವರ್ಷ ಸಂಭವಿಸುವುದೆನ್ನಲು ಯಾವ ಪ್ರಮಾಣವೂ ಇಲ್ಲ. ವರ್ತಮಾನವನ್ನು ನಿರ್ಲಕ್ಷಿಸಿ ಎಂದೂ ನೆರವೇರದ ಅತಾರ್ಕಿಕ ಪ್ರತಿಕ್ರಿಯೆಗಳ ನಿರೀಕ್ಷೆ ಅವೈಜ್ಞಾನಿಕ. ಯಾವುದೂ ಒಮ್ಮಿಂದೊಮ್ಮೆಗೇ ಆಗದು. ಅದೃಷ್ಟ ಎನ್ನುವುದಿಲ್ಲ. ಏನಿದ್ದರೂ ಕ್ರಿಯೆ ಪರಿಣಾಮದ ರೂಪದಲ್ಲಿ ಮರಳುತ್ತದೆ. ಅಂಧಾಚರಣೆಗಳ ಬೆನ್ನೇರಬೇಕಿಲ್ಲ, ಅತಾರ್ಕಿಕ ವಿಧಿಗಳಿಗೆ ಮೊರೆ ಅಗತ್ಯವಿಲ್ಲ. ಅಂತಹ ಅವಲಂಬನೆಗಳಿಂದ ಕಡೆಗೆ ಬಲಿಪಶುಗಳಾಗುವವರು ನಾವೇ.

ಮೂಢನಂಬಿಕೆಗಳು ಪರಹಿತಕ್ಕೂ ಮಿಗಿಲಾಗಿ ಬಹುತೇಕ ಸ್ವಯಂ ಹೇರಿಕೊಳ್ಳುವ ಬರೀ ಸ್ವಾರ್ಥ ನಂಬಿಕೆಗಳು. ವಿಜ್ಞಾನವು ಮೇಲ್ನೋಟಕ್ಕೆ ಮಿಥ್ಯೆಯೆಂದು ತೋರಿದ್ದನ್ನು ಸತ್ಯವಾಗಿಸಬಲ್ಲ, ಅಸಾಧ್ಯವೆಂದು ತೋರಿದ್ದನ್ನು ಸಾಧ್ಯವಾಗಿಸಬಲ್ಲ ನಿರಪೇಕ್ಷ ಅರಿವು. ತನಗೆ ಅರ್ಥವಾಗದ್ದನ್ನು ಶತಾಯಗತಾಯ ಅರಿಯುವ ಪ್ರಾಮಾಣಿಕ ಮತ್ತು ಸತತ ಪ್ರಯತ್ನ ವಿಜ್ಞಾನದ್ದು. ಅದು ಮನ್ನಣೆಗೆ ಹಿಗ್ಗದು, ಪರಿಷ್ಕರಣೆಗೆ ಕುಗ್ಗದು. ಪ್ರಕೃತಿಗೆ ಅವಸರವಾಗಲಿ, ಆಡಂಬರವಾಗಲಿ ಇಲ್ಲ. ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕೆಂಬ ಹಿತವಾದದಲ್ಲಿರುವ ಕಾರ್ಯಶೀಲ ಇಂಗಿತ ಗುರುತಿಸೋಣ.

ವಾಚಕರ ವಾಣಿ

ಆಯುರ್ವೇದ ವೈದ್ಯರ ಅಗತ್ಯ ಹೆಚ್ಚಾಗಿದೆ

ಕಡ್ಡಾಯ ಗ್ರಾಮೀಣ ಸೇವೆಯಲ್ಲಿರುವ ಎಂಬಿಬಿಎಸ್ ವೈದ್ಯರನ್ನು ನಗರ ಪ್ರದೇಶಗಳಿಗೂ ಬಳಸಿಕೊಳ್ಳಲು ಅವಕಾಶ ಆಗುವಂತೆ ಕಾಯ್ದೆಗೆ ತಿದ್ದುಪಡಿ ಮಾಡಲು ರಾಜ್ಯ ಸರ್ಕಾರ ಮುಂದಾಗಿರುವ ಕುರಿತು ವರದಿಯಾಗಿದೆ (ಪ್ರ.ವಾ., ಜೂನ್ 23). ಆಯುರ್ವೇದ ಅಧ್ಯಯನ ಮಾಡಿರುವ ವೈದ್ಯರ ಸೇವೆಯನ್ನೂ ಬಳಸಿಕೊಳ್ಳುವ ಆಲೋಚನೆಯನ್ನು ಸರ್ಕಾರ ಮಾಡಲಿ. ಚರ್ಮದ ಅಲರ್ಜಿ, ಶ್ವಾಸಕೋಶ ಸಂಬಂಧಿ ಕಾಯಿಲೆಗಳು, ಮೂಳೆ, ಸಂಧಿವಾತದಂತಹ ಎಷ್ಟೋ ರೋಗಗಳಿಗೆ ಆಯುರ್ವೇದ ಚಿಕಿತ್ಸೆ ಹೆಚ್ಚು ಪರಿಣಾಮಕಾರಿ.

ಎಷ್ಟೋ ಸಂದರ್ಭಗಳಲ್ಲಿ ಆಹಾರ, ನೀರು, ವಿಹಾರದ ಅಭ್ಯಾಸಗಳನ್ನು ಸರಿ ಮಾಡಿಕೊಳ್ಳುವ ಮೂಲಕವೂ ಆರೋಗ್ಯ ಸುಧಾರಣೆಯ ಸಾಧ್ಯತೆಯಿದೆ. ಇಂತಹ ಸಂಗತಿಗಳ ಬಗ್ಗೆ ಸೂಕ್ತ ಸಲಹೆ ಕೊಡಲು ಸಾಮರ್ಥ್ಯ ಇರುವ ಆಯುರ್ವೇದ ವೈದ್ಯರ ಸೇವೆಯ ಅಗತ್ಯ ಈಗ ಹೆಚ್ಚಾಗಿದೆ. ಇದು, ಕೋವಿಡ್ ಹರಡಿದ್ದ ಸಂದರ್ಭದಲ್ಲೂ ಸಾಬೀತಾಗಿದೆ. ಆಯುರ್ವೇದ ಕಾಲೇಜು ತೆರೆದು ಬಿಎಎಂಎಸ್ ಮತ್ತು ಆಯುರ್ವೇದ ಎಂ.ಡಿ. ಶಿಕ್ಷಣ ಕೊಡುತ್ತಿರುವ ಸರ್ಕಾರ, ಆ ವೈದ್ಯರ ಸೇವೆಯನ್ನೂ ಪಡೆಯಬೇಕಲ್ಲವೆ? ಕನಿಷ್ಠ ಐವತ್ತು ಹಾಸಿಗೆ ಸೌಲಭ್ಯ ಉಳ್ಳ ಎಲ್ಲಾ ಖಾಸಗಿ ಆಸ್ಪತ್ರೆ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಆಯುರ್ವೇದ ಸೌಲಭ್ಯ ಪಡೆಯಲು ಅನುಕೂಲ ಆಗುವಂತಹ ಪ್ರತ್ಯೇಕ ಘಟಕ ತೆರೆದು, ವೈದ್ಯರನ್ನು ನೇಮಿಸಿಕೊಳ್ಳುವಂತೆ ಕಾಯ್ದೆಗೆ ತಿದ್ದುಪಡಿ ತರುವ ಕುರಿತೂ ಸಚಿವರು ಯೋಚನೆ ಮಾಡಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಭಾಷೆ ಬಳಕೆಗೂ ಬೇಕು ತರಬೇತಿ!

'ವಿಧಾನಸಭೆಗೆ ಮೊದಲ ಬಾರಿ ಆಯ್ಕೆಯಾಗಿರುವ ಶಾಸಕರಿಗೆ ತರಬೇತಿ ಶಿಬಿರ ಆಯೋಜಿಸಲಿರುವುದೇನೊ ಸರಿ. ಆದರೆ ಇದರೊಂದಿಗೆ ಇತರ ಶಾಸಕರಿಗೂ ಕೆಲ ತರಬೇತಿಯ ಅವಶ್ಯಕತೆ ಖಂಡಿತಾ ಇದೆ! ಅದೆಂದರೆ, ಸಾರ್ವಜನಿಕವಾಗಿ ಬಳಸುವ ಭಾಷೆ. ಬೇಕಾಬಿಟ್ಟಿ ಮಾತುಗಳಿಗೆ ಕಡಿವಾಣ ಬೀಳಬೇಕಿದೆ. ಮೊನ್ನೆ ತಾನೇ ಕೇಂದ್ರ ಸಚಿವೆಯೊಬ್ಬರ ಆಣಿಮುತ್ತುಗಳು 'ತಲೆಕೆಟ್ಟಿತ್ತಾ? ಮೆದುಳು ಇರ್ಲಿಲ್ವಾ? ಸಗಣಿ ತುಂಬಿತ್ತೇ?' ಎಂದು. ಇನ್ನು ಹೊಡಿ, ಬಡಿ, ಕಡಿ ಪದಗಳಂತೂ ಮಾಮೂಲಿ ಬಳಕೆಯಾಗಿವೆ! ಹಿಂದಿನ ವಿಧಾನಸಭಾ ಚುನಾವಣೆ ವೇಳೆ ಜನಪ್ರತಿನಿಧಿಗಳಾದಿಯಾಗಿ ಸಕಲ ರಾಜಕಾರಣಿಗಳೂ ಪಕ್ಷಾತೀತವಾಗಿ ಬಳಸಿದ ಭಾಷೆಯಂತೂ ಮುಂದಿನ ಪೀಳಿಗೆಯ ಯುವಜನರಿಗೆ ಉತ್ತಮ ನಡವಳಿಕೆ, ಸಂದೇಶವನ್ನಂತೂ ನೀಡಲಾರದು. ಆದ್ದರಿಂದ, ಆಯ್ಕೆಯಾದ ಶಾಸಕರು ಸಾರ್ವಜನಿಕವಾಗಿ ಮಾತನಾಡುವಾಗ ಬಳಸುವ ಭಾಷೆಯ ಮೇಲೆ ಹಿಡಿತವಿರಬೇಕು ಎನ್ನುವ ಬಗ್ಗೆಯೂ ಅವಶ್ಯವಾಗಿ ತರಬೇತಿ ನೀಡಲಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಪ್ರಧಾನಿ ಹೇಳಿಕೆ ಯಥಾರ್ಥದಲ್ಲಿ ತಿಳಿಯೋಣ

ಅಮೆರಿಕ ಪ್ರವಾಸದಲ್ಲಿ 'ಪ್ರಜಾಪ್ರಭುತ್ವ ನಮ್ಮ ಡಿಎನ್‌ಎದಲ್ಲೇ ಇದೆ' ಎಂದಿದ್ದಾರೆ ಪ್ರಧಾನಿ ನರೇಂದ್ರ ಮೋದಿ (ಪ್ರ.ವಾ., ಜೂನ್ 23). ಅವರು ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿರುವುದು ವಿಶೇಷ, ಸ್ವಾಗತಾರ್ಹ. ವಿದೇಶವೊಂದಕ್ಕೆ ಅಧಿಕೃತ ಭೇಟಿ ನೀಡಿದಾಗ ಸ್ವದೇಶದ ಬಗ್ಗೆ ಸಕಾರಾತ್ಮಕ ಅಂಶಗಳನ್ನಷ್ಟೇ ಹೇಳುವುದು ವಾಡಿಕೆ, ಸಹಜ. ಆದರೆ ಅಲ್ಲಿನ ಆಡಳಿತ ಪಕ್ಷದ ಕೆಲ ಸಂಸದರು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಕಡೆಗಣಿಸಲಾಗುತ್ತಿದೆ ಎಂದು ಮೋದಿ ಅವರ ಪ್ರವಾಸದ ಅವಧಿಯಲ್ಲಿ ಕಳವಳ ವ್ಯಕ್ತಪಡಿಸಿದ್ದರು, ಮೋದಿಯವರ ಭಾಷಣಕ್ಕೆ ಗೈರುಹಾಜರಾಗುವೆವೆಂದು ನಾಲ್ವರು ಸಂಸದರು ಹೇಳಿದ್ದರು. ಮಾನವ ಹಕ್ಕು ಸಂಘಟನೆಗಳು ಪ್ರತಿಭಟನಾ ಪ್ರದರ್ಶನ ನಡೆಸಿದ್ದವು. 'ನಮ್ಮ ಸಮಾಜ ಹಾಗೂ ಸಂಸ್ಥೆಗಳು ಜನತಾಂತ್ರಿಕ ಮೌಲ್ಯಗಳನ್ನು ಆಧರಿಸಿವೆ', 'ಮೂಲಭೂತವಾದ ವಿವಿಧ ಗುರುತುಗಳನ್ನು ಪಡೆಯುತ್ತ ಹೋಗುತ್ತದೆ' ಎಂಬ ಪ್ರಧಾನಿಯವರ ಹೇಳಿಕೆಗಳನ್ನೂ ನಿವಾಸಿ ಭಾರತೀಯರಾದ ನಾವು ಯಥಾರ್ಥದಲ್ಲಿ ತಿಳಿಯಬೇಕಾಗಿದೆ.

ಈಚೆಗೆ ಜನಪದಗಳು, ಅನುಭವ ಮಂಟಪ ಇವುಗಳನ್ನು 'ಭಾರತ ಜನತಂತ್ರದ ಜನನಿ' ಎಂದು ಬಿಂಬಿಸಲು ಬಳಸಲಾರಂಭಿಸಿರುವುದನ್ನು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಮೌರ್ಯರ ಪೂರ್ವದ, ಅಷ್ಟೇಕೆ ಗುಪ್ತರ ನಂತರದ ಕಾಲದಲ್ಲೂ ಇಲ್ಲಿನ ಸಮಾಜ ಹಾಗೂ ಅದರ ಹಲವು ಸಂಸ್ಥೆಗಳು ಪ್ರಜಾಪ್ರಭುತ್ವದ ತತ್ವಗಳ ಮೇಲೆ ನಿಂತಿರಲಿಲ್ಲ. ಕರ್ನಾಟಕದಲ್ಲಿ ಕಲ್ಯಾಣದ ಕ್ರಾಂತಿಯ ಕಾರಣ ಹಾಗೂ ಪರಿಣಾಮಗಳನ್ನು ವಿಶ್ಲೇಷಿಸಿದವರೂ 'ಆಗ ಹಾಗಿರಲಿಲ್ಲ' ಎನ್ನುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆಯ್ದುಕೊಂಡ ಸಮಯದಲ್ಲೂ ಪಾಳೆಗಾರಿಕೆ, ಜಮೀನ್ದಾರರ ಹಿಡಿತ ಇತ್ತು. ಜನಪ್ರತಿನಿಧಿಗಳು ದೀರ್ಘಕಾಲ ಅಧಿಕಾರ ಹಿಡಿದಾಗ ಅವುಗಳ ಪಳೆಯುಳಿಕೆಗಳು ಈಗಲೂ ಕಾಣುತ್ತಿರುವುದು ನಿಜ. ತಾರತಮ್ಯ ಎಪ್ಪತ್ತೈದು ವರ್ಷಗಳ ನಂತರವೂ ಮೂಲೋತ್ಪಾಟನೆಗೊಂಡಿದೆ ಎಂದು ಹೇಳಿಕೊಳ್ಳುವ ಸ್ಥಿತಿ ಇಲ್ಲ. ಗ್ಲೋಬಲ್ ಗ್ಯಾಲರಿಗೆ ಸೂಕ್ತ ಮಾತುಗಳಿವು ಎಂದಷ್ಟೇ ಪರಿಗ್ರಹಿಸಬೇಕು. 'ಜನತಂತ್ರದ ಹಬ್ಬ (ಮುಂದಿನ ಲೋಕಸಭಾ ಚುನಾವಣೆ) ನೋಡಲು ಬನ್ನಿ' ಎಂದಿದ್ದಾರೆ. ಆದರೆ ಒಳಗಿನ ಹುಳುಕು ತಿಳಿದರೆ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ವೈದ್ಯರಿಗೆ ಸೌಲಭ್ಯ: ತೆರೆದ ಮನಸ್ಸಿರಲಿ

ಟಿ.ಎಂ.ವಿಜಯ ಭಾಸ್ಕರ ನೇತೃತ್ವದ ಆಡಳಿತ ಸುಧಾರಣಾ ಆಯೋಗವು ಸರ್ಕಾರಿ ವೈದ್ಯರಿಗೆ ಖಾಸಗಿ ಪ್ರ್ಯಾಕ್ಟೀಸ್ ನಿಷೇಧಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿರುವುದು ಶ್ಲಾಘನೀಯ ಕ್ರಮ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಸರ್ಕಾರಿ ವೈದ್ಯರು ಖಾಸಗಿ ಪ್ರ್ಯಾಕ್ಟೀಸ್ ಮಾಡುವುದರ ಹಿಂದಿನ ಕಾರಣ ಅವರಿಗೆ ನೀಡುವ ಸಂಬಳ ಸೌಲಭ್ಯ. ಲಕ್ಷಾಂತರ ರೂಪಾಯಿ ವ್ಯಯಿಸಿ ವೈದ್ಯರಾಗಿ ಬಂದವರು ಈಗ ದೊರೆಯುವ ಸಂಬಳಕ್ಕೆ ಎಷ್ಟು ದಿನ ಕೆಲಸ ಮಾಡಬಹುದು?

ಬಡವರಿಗೆ ನೆರವಾಗಲು ಸರ್ಕಾರ ಇತ್ತೀಚೆಗೆ 'ನಮ್ಮ ಕ್ಲಿನಿಕ್' ಸ್ಥಾಪಿಸಿದ್ದು, ಸರ್ಕಾರ ನೀಡುವ ಸಂಬಳಕ್ಕೆ ಅಲ್ಲಿ ಕೆಲಸ ಮಾಡಲು ವೈದ್ಯರು ಆಸಕ್ತಿ ತೋರಿಸುತ್ತಿಲ್ಲವಂತೆ. ವೈದ್ಯಕೀಯ ವೃತ್ತಿ ಇನ್ನಿತರ ವೃತ್ತಿಗಳಿಗಿಂತ ಭಿನ್ನವಾಗಿದ್ದು, ವೈದ್ಯರಿಗೆ ನೀಡುವ ಸಂಬಳ ಸೌಲಭ್ಯದ ವಿಷಯದಲ್ಲಿ ತೆರೆದ ಮನಸ್ಸು ಇರಬೇಕು.

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಅಕ್ಕಿ ನೀಡಲು ನಿರಾಕರಿಸಿ ರಾಜ್ಯಕ್ಕೆ ಘೋರ ಅನ್ಯಾಯ’

ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ. ಅಕ್ಕಿ ನೀಡುವ ‘ಅನ್ನ ಭಾಗ್ಯ’ ರಾಜ್ಯದ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ. ಆದರೆ, ಇದಕ್ಕೆ ಬೇಕಾದಷ್ಟು ಅಕ್ಕಿ ಸಂಗ್ರಹಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಭಾರತೀಯ ಆಹಾರ ನಿಗಮವು ಅಕ್ಕಿ ಪೂರೈಸಲು ಮೊದಲು ಒಪ್ಪಿಕೊಂಡಿತ್ತು. ನಿಗಮದಲ್ಲಿ ಅಕ್ಕಿಯ ದಾಸ್ತಾನು ಕೂಡ ಇದೆ. ಆದರೆ, ಯೋಜನೆಗೆ ಅಡ್ಡಗಾಲು ಹಾಕಬೇಕು ಎಂಬ ಕಾರಣಕ್ಕೆ ಕೇಂದ್ರ ಅಕ್ಕಿ ನೀಡುತ್ತಿಲ್ಲ ಎಂದು ಕಾಂಗ್ರೆಸ್ ಪಕ್ಷವು ಆರೋಪ ಮಾಡಿದೆ. ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ **ಕೆ.ಎಚ್. ಮುನಿಯಪ್ಪ** ಅವರು ಅಕ್ಕಿಯ ಸುತ್ತ ಸೃಷ್ಟಿಯಾಗಿರುವ ವಿವಾದದ ಈ ಕುರಿತು ಮಾತನಾಡಿದ್ದಾರೆ

● ಮಂಜುನಾಥ ಹೆಬ್ಬಾರ್



● ಅನ್ನಭಾಗ್ಯ ಯೋಜನೆ ಈಗ ಗೊಂದಲದ ಗೂಡು ಆಗಿದೆ. ವಾಗ್ದಾನ ನೀಡಿದಂತೆ ಜುಲೈ 1ರಿಂದ ಈ ಯೋಜನೆ ಜಾರಿಯಾಗುವುದು ಕಷ್ಟ. ಸರ್ಕಾರ ಯಾವುದೇ ಪೂರ್ವ ಸಿದ್ಧತೆ ನಡೆಸದೆ ಯೋಜನೆ ಜಾರಿಗೊಳಿಸಲು ಮುಂದಾಗಿದ್ದು ಈಗಿನ ಸಮಸ್ಯೆಗೆ ಕಾರಣ ಎಂಬ ಮಾತಿದೆಯಲ್ಲ?

ರಾಜ್ಯದ ಬಡ ಜನರ ಸಂಕಷ್ಟ ನೀಗಿಸಲು ಅಕ್ಕಿ ನೀಡಬೇಕು ಎಂದು ಕಾಂಗ್ರೆಸ್ ಪಕ್ಷ ತೀರ್ಮಾನ ಮಾಡಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇದರ ಬಗ್ಗೆ ಸಂಪೂರ್ಣ ಅಧ್ಯಯನ ಮಾಡಿ ಚರ್ಚೆ ನಡೆಸಿ ಪಕ್ಷದ ಗ್ಯಾರಂಟಿಗಳನ್ನು ಘೋಷಣೆ ಮಾಡಿದರು. ಇದು ಬಡವರ ಕಲ್ಯಾಣ ಯೋಜನೆ. ಅನ್ನ ಕೊಡುವ ಕಾರ್ಯಕ್ರಮ ಇದು. ಇದರಲ್ಲಿ ಕೇಂದ್ರ ಸರ್ಕಾರ ರಾಜಕಾರಣ ಮಾಡಬಹುದು ಎಂದು ನಾವು ಭಾವಿಸಿರಲಿಲ್ಲ. ಕೇಂದ್ರ ಸರ್ಕಾರದ ಅಧೀನದ ಭಾರತೀಯ ಆಹಾರ ನಿಗಮದಲ್ಲಿ 7 ಲಕ್ಷ ಟನ್ ಅಕ್ಕಿ ಸಂಗ್ರಹ ಇದೆ. ನಮ್ಮ ಹತ್ತಿರ ಸಾಕಷ್ಟು ಅಕ್ಕಿ ದಾಸ್ತಾನು ಇದ್ದು, ಎರಡರಿಂದ ಮೂರು ತಿಂಗಳು ಅಕ್ಕಿ ಕೊಡಲು ಯಾವುದೇ ಸಮಸ್ಯೆ ಇಲ್ಲ ಎಂದು ನಿಗಮದ ಅಧಿಕಾರಿಗಳು ನಮಗೆ ಭರವಸೆ ನೀಡಿದ್ದರು. ಜೂನ್ 13ರಂದು ಅವರು ನಿಲುವು ಬದಲಿಸಿದರು. ಅಕ್ಕಿ ಕೊಡಲು ಆಗುವುದಿಲ್ಲ ಎಂದರು. ಬೆಲೆ ಏರಿಕೆ ನಿಯಂತ್ರಣದ ನೆಪ ಹೇಳಿದರು. ನಮ್ಮ ಯೋಜನೆಗೆ ಅಡ್ಡಗಾಲು ಹಾಕಬೇಕು ಎಂಬ ಏಕೈಕ ಉದ್ದೇಶದಿಂದ ಅಧಿಕಾರಿಗಳಿಂದ ನಿರಾಕರಣೆಯ ಪತ್ರ ಬರೆಸಿದರು. ಕೇಂದ್ರದ ಬಿಜೆಪಿ ಸರ್ಕಾರ ಹಾಗೂ ದೇಶದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಡವರು ಹಾಗೂ ಸಾಮಾನ್ಯ ಜನರ ಮೇಲೆ ಎಷ್ಟು ಕಾಳಜಿ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ.

● ಹಾಗಿದ್ದರೆ ಕೇಂದ್ರದ ಬಿಜೆಪಿ ಸರ್ಕಾರವನ್ನು ನಂಬಿಕೊಂಡು ಅನ್ನ ಭಾಗ್ಯ ಗ್ಯಾರಂಟಿ ಘೋಷಣೆ ಮಾಡಿದ್ದೀರಾ?

ಇಲ್ಲ, ಇಲ್ಲ. ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತಂದಿದ್ದೇ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ. ಎಲ್ಲ ವರ್ಗದ ಜನರ ಹಸಿವನ್ನು ನೀಗಿಸಬೇಕು ಎಂಬ ಮಹತ್ತರ ಉದ್ದೇಶದಿಂದ ಈ ಕಾಯ್ದೆ ಜಾರಿಗೆ ತರಲಾಯಿತು. ಕೇಂದ್ರ ಸರ್ಕಾರ ಈಗ 80 ಕೋಟಿ ಬಡವರಿಗೆ ತಲಾ 5 ಕೆ.ಜಿ. ಅಕ್ಕಿ ನೀಡುತ್ತಿದೆ. ಯುಪಿಎ ಸರ್ಕಾರ ಇದ್ದಾಗ ಯಾವತ್ತೂ ಇಂತಹ ಕೀಳು ಮಟ್ಟದ ಹಾಗೂ ದ್ವೇಷದ ರಾಜಕಾರಣ ಮಾಡಿರಲಿಲ್ಲ. ನಮ್ಮದು ಒಕ್ಕೂಟ ವ್ಯವಸ್ಥೆ. ಕೇಂದ್ರದಲ್ಲಿ ಒಂದು ಪಕ್ಷದ ಸರ್ಕಾರ ಇರುತ್ತದೆ. ರಾಜ್ಯದಲ್ಲಿ ಮತ್ತೊಂದು ಪಕ್ಷದ ಸರ್ಕಾರ ಅಧಿಕಾರ ನಡೆಸುತ್ತದೆ. ಇದೇ ಪ್ರಜಾಪ್ರಭುತ್ವದ ವೈಶಿಷ್ಟ್ಯ. ಚುನಾವಣೆ ಸಮಯದಲ್ಲಷ್ಟೇ ನಾವು ಪಕ್ಷ ರಾಜಕಾರಣ ಮಾಡಬೇಕು. ಉಳಿದ ಸಮಯದಲ್ಲಿ ಪರಸ್ಪರ ಸಹಕಾರ, ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಕೇಂದ್ರ ಆಹಾರ ಸಚಿವ ಪೀಯೂಷ್ ಗೋಯಲ್ ಅವರ ವರ್ತನೆ ಸಹ ದ್ವೇಷ ರಾಜಕಾರಣದ ಭಾಗವಾಗಿತ್ತು. ಭೇಟಿ ಮಾಡಲು ಮೂರು ದಿನ ಸತಾಯಿಸಿದರು. ಅಕ್ಕಿ ನೀಡಲು ನಿರಾಕರಿಸಿ ರಾಜ್ಯಕ್ಕೆ ಘೋರ ಅನ್ಯಾಯ ಮಾಡಿದರು.

ನಾವು ನುಡಿದಂತೆ ನಡೆಯುತ್ತೇವೆ. ಇದು ನಮ್ಮದೇ ಕಾರ್ಯಕ್ರಮ. ನಾವು ಅಕ್ಕಿ ಕೊಡುವುದು ಸ್ವಲ್ಪ ತಡ ಆಗಬಹುದು. ಕೇಂದ್ರ ಸರ್ಕಾರ ರಾಜಕಾರಣ ಮಾಡಿದ್ದನ್ನು ನೋಡಿದ ಕೆಲವು ರಾಜ್ಯಗಳು ಅಕ್ಕಿ ಒದಗಿಸಲು ಸ್ವಯಂಪ್ರೇರಿತವಾಗಿ ಮುಂದೆ ಬಂದಿವೆ. ರಾಜ್ಯಕ್ಕೆ ಬೇಕಿರುವ ಅಕ್ಕಿ ನೀಡುವುದಾಗಿ ಛತ್ತೀಸಗಡ ಸರ್ಕಾರ ವಾಗ್ದಾನ ಮಾಡಿದೆ. ಪಂಜಾಬ್ ಸರ್ಕಾರ ಆಸಕ್ತಿ ತೋರಿದೆ. ಗೋಧಿ ನೀಡುವುದಾಗಿ ತೆಲಂಗಾಣ ಸರ್ಕಾರ ಹೇಳಿದೆ. ಭಾರತ ಸರ್ಕಾರದ ಅಧೀನದ ನ್ಯಾಷನಲ್ ಕೋ-ಆಪರೇಟಿವ್ ಕನ್ಸ್ಯೂಮರ್ಸ್ ಫೆಡರೇಷನ್ (ಎನ್‌ಸಿಸಿಎಫ್), ನ್ಯಾಷನಲ್ ಅಗ್ರಿಕಲ್ಚರಲ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ (ನಾಫೆಡ್) ಹಾಗೂ ಕೇಂದ್ರೀಯ ಭಂಡಾರದ ಅಧಿಕಾರಿಗಳ ಜತೆಗೆ ನಿರಂತರ ಸಂಪರ್ಕದಲ್ಲಿದ್ದು, ದರ ಪಟ್ಟಿ ಕೇಳಿದ್ದೇವೆ. ಅವರು ದರ ಪಟ್ಟಿಯನ್ನೂ ಒದಗಿಸಿದ್ದಾರೆ. ಒಂದು ವಾರದೊಳಗೆ ಸ್ಪಷ್ಟ ಚಿತ್ರಣ ಸಿಗಲಿದೆ. ಕೇಂದ್ರ ಸರ್ಕಾರ ಅಸಹಕಾರ ತೋರಿದ್ದರಿಂದ 5 ಕೆ.ಜಿ. ಅಕ್ಕಿ ಕೊಡುವುದು ಸ್ವಲ್ಪ ತಡವಾಗಬಹುದು. ಎಷ್ಟೇ ಸಂಕಷ್ಟ, ಅಡ್ಡಿ ಆತಂಕ ಎದುರಾದರೂ ಈ ಗ್ಯಾರಂಟಿಯನ್ನು ಜಾರಿ ಮಾಡಿಯೇ ಮಾಡುತ್ತೇವೆ.

● ಯೋಜನೆ ಘೋಷಣೆಗೆ ಮುನ್ನ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಜತೆಗೆ ಸಮಾಲೋಚನೆ ನಡೆಸಿಲ್ಲ ಎಂದು ಕೇಂದ್ರ ಆಹಾರ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಹೇಳಿದ್ದಾರಲ್ಲ...

ಅನ್ನ ಭಾಗ್ಯ ಯೋಜನೆ ನಮ್ಮ ಪ್ರಣಾಳಿಕೆಯ ಭಾಗ. ಇದನ್ನು ಚುನಾವಣಾ ಪೂರ್ವದಲ್ಲಿ ಘೋಷಣೆ ಮಾಡಲಾಗಿತ್ತು. ಬಿಜೆಪಿಯನ್ನು ಕೇಳಿ ನಾವು ಪ್ರಣಾಳಿಕೆ ಸಿದ್ಧಪಡಿಸಲು ಆಗುತ್ತದೆಯೇ, ಗ್ಯಾರಂಟಿ ಘೋಷಣೆ ಮಾಡಲು ಸಾಧ್ಯವೇ? ಸಿದ್ದರಾಮಯ್ಯ ನೇತೃತ್ವದ ಸರ್ಕಾರವು 7 ಕೆ.ಜಿ.ಅಕ್ಕಿ ನೀಡುತ್ತಿತ್ತು. ಅದನ್ನು ಬಿಜೆಪಿಯವರು 5 ಕೆ.ಜಿ.ಗೆ ಇಳಿಸಿ ಬಡವರಿಗೆ ಅನ್ಯಾಯ ಮಾಡಿದರು. ಈಗ ನಮ್ಮ ಬಗ್ಗೆ ಟೀಕೆ ಮಾಡಲು ಅವರಿಗೆ ಯಾವ ನೈತಿಕತೆ ಇದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಹಳ್ಳಿಗಾಡಿನ ಜನರು ಯಾವ ರೀತಿಯ ಕಷ್ಟಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಬಳಿಕ ಅನ್ನ ಭಾಗ್ಯ ಗ್ಯಾರಂಟಿ ಘೋಷಣೆ ಮಾಡಿದ್ದೇವೆ. ತಜ್ಞರ ಜತೆಗೆ ಸಮಾಲೋಚಿಸಿ, ಪಕ್ಷದ ಹಿರಿಯ ಮುಖಂಡರು ಸಮಾಲೋಚನೆ ನಡೆಸಿಯೇ ಪ್ರಣಾಳಿಕೆ ಸಿದ್ಧಪಡಿಸಲಾಗಿದೆ.



● ಎಲ್ಲ ಗ್ಯಾರಂಟಿಗಳನ್ನು ಏಕಕಾಲಕ್ಕೆ ಅನುಷ್ಠಾನ ಮಾಡುವ ಬದಲು ಐದು ವರ್ಷಗಳ ಅವಧಿಯಲ್ಲಿ ಒಂದೊಂದೇ ಗ್ಯಾರಂಟಿಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರಬಹುದಿತ್ತಲ್ಲ?

ಜೂನ್ 11ರಿಂದ ಮಹಿಳೆಯರ ಉಚಿತ ಬಸ್ ಪ್ರಯಾಣ ಯೋಜನೆ ಜಾರಿಗೆ ಬಂದಿದೆ. ಜುಲೈ 1ರಿಂದ ಅನ್ನ ಭಾಗ್ಯ ಗ್ಯಾರಂಟಿ ಅನುಷ್ಠಾನವಾಗಬೇಕಿತ್ತು. ಆಗಸ್ಟ್‌ನೊಳಗೆ 10 ಕೆ.ಜಿ. ಅಕ್ಕಿ ನೀಡಲಿದ್ದೇವೆ. ಉಳಿದ ಗ್ಯಾರಂಟಿಗಳು ಸಹ ಜಾರಿಗೆ ಬರಲಿವೆ. ಗ್ಯಾರಂಟಿಗಳ ಅನುಷ್ಠಾನಕ್ಕೆ ಬೇಕಿರುವ ಹಣವನ್ನು ಮುಖ್ಯಮಂತ್ರಿ ಹೊಂದಿಸಿದ್ದಾರೆ. ಕೇಂದ್ರ ಸರ್ಕಾರದ ಅಸಹಕಾರ ಬಿಟ್ಟರೆ ಬೇರೇನೂ ತಾಪತ್ರಯ ಇಲ್ಲ.

● 2019ರಿಂದ 2023ರವರೆಗೆ ಒಟ್ಟು 29.05 ಲಕ್ಷ ಟನ್ ಉತ್ತಮ ಗುಣಮಟ್ಟದ ಅಕ್ಕಿಯನ್ನು ಎಥೆನಾಲ್ ಉತ್ಪಾದನೆಗೆ ಕೇಂದ್ರ ಸರ್ಕಾರ ನೀಡಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಇದರ ಬಗ್ಗೆ ನಮಗೆ ಹೆಚ್ಚು ಮಾಹಿತಿ ಇಲ್ಲ. ಜನರಿಗೆ ಮೊದಲು ಅಕ್ಕಿ ಸಿಗಬೇಕು ಅಷ್ಟೇ.

● ದಶಕಗಳ ಹಿಂದೆ ಪಡಿತರ ಅಂಗಡಿಗಳಲ್ಲಿ ಗೋಧಿ ನೀಡುತ್ತಿದ್ದರು. ಆ ವ್ಯವಸ್ಥೆಯನ್ನು ಪುನರಾರಂಭಿಸುವ ಯೋಚನೆ ಇದೆಯೇ?

ಅಕ್ಕಿಯ ಜತೆಗೆ ಗೋಧಿಯನ್ನೂ ನೀಡಬೇಕು ಎಂಬ ಚಿಂತನೆ ಇದೆ. ಜನರ ಭಾವನೆ, ಬೇಡಿಕೆ ನೋಡಿಕೊಂಡು ಮುಂದಿನ ತೀರ್ಮಾನ ಮಾಡುತ್ತೇವೆ. ದಕ್ಷಿಣ ಕರ್ನಾಟಕದಲ್ಲಿ ಎರಡು ಕೆ.ಜಿ.ರಾಗಿ ಹಾಗೂ ಉತ್ತರ ಕರ್ನಾಟಕದಲ್ಲಿ ಎರಡು ಕೆ.ಜಿ. ಜೋಳ ನೀಡುವ ಆಲೋಚನೆ ಇದೆ. ಆದರೆ, ಈಗ ಜೋಳ ಸಾಕಷ್ಟು ದಾಸ್ತಾನು ಇಲ್ಲ. ಒಂದು ತಿಂಗಳಲ್ಲಿ ರಾಗಿ ಲಭ್ಯವಾಗಬಹುದು. ಮುಂದಿನ ವರ್ಷ ರಾಗಿ ಹಾಗೂ ಜೋಳ ಸಾಕಷ್ಟು ಶೇಖರಣೆಯಾಗಬಹುದು. ◆

● ಕೇಂದ್ರ ಸರ್ಕಾರವನ್ನು ದೂರುತ್ತಾ ಕೂರುವ ಬದಲು ಬೇರೆ ಮಾರ್ಗ ಹುಡುಕಬಹುದಲ್ಲ?

ಕೇಂದ್ರದ ಬಳಿ ಅಕ್ಕಿ ದಾಸ್ತಾನು ಇದೆ. ನಮ್ಮದು ಒಕ್ಕೂಟ ವ್ಯವಸ್ಥೆ. ಕೇಂದ್ರ ಸರ್ಕಾರವು ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿ ಮಾಡುತ್ತದೆ. ಛತ್ತೀಸಗಡ, ತೆಲಂಗಾಣ, ಆಂಧ್ರ ಪ್ರದೇಶ ರಾಜ್ಯಗಳು ಅಕ್ಕಿ ಸರಬರಾಜು ಮಾಡುತ್ತವೆ. ಬಳಿಕ ಅವಶ್ಯಕತೆ ಇರುವ, ತುರ್ತು ಇರುವ ರಾಜ್ಯಗಳಿಗೆ ಅಕ್ಕಿ ಒದಗಿಸಬೇಕು. ಅದು ಸಹ ಪುಕ್ಕಟೆಯಾಗಿ ಅಲ್ಲ. ಸ್ವಂತ ಜೇಬಿನಿಂದ ಕೊಡುತ್ತಿಲ್ಲ. ಅಕ್ಕಿ ಮಾರುವುದಕ್ಕೆ ಇಷ್ಟು ರಾಜಕೀಯ ಮಾಡಿದವರನ್ನು ನನ್ನ ರಾಜಕೀಯ ಜೀವನದಲ್ಲಿ ನೋಡಿಲ್ಲ. ಕಷ್ಟ ಇದ್ದ ರಾಜ್ಯಕ್ಕೆ ಕೊಡುವುದು ಕೇಂದ್ರದ ಬದ್ಧತೆ, ಜವಾಬ್ದಾರಿ. ಅದರಲ್ಲಿ ನೀವು ಸಂಪೂರ್ಣ ವಿಫಲರಾಗಿದ್ದೀರಿ. ಹಾಗಾಗಿ, ನಮ್ಮದೇ ಹಾದಿಯಲ್ಲಿ ನಾವು ಮುನ್ನಡೆಯಬೇಕಿದೆ. ಬಿಜೆಪಿಯವರ ರೀತಿ ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದವರು ನಾವು ಅಲ್ಲ.



ಕೆ.ಎಚ್.ಮುನಿಯಪ್ಪ

ಪ್ರಜಾವಾಣಿ ಸಂದರ್ಶನ

‘ಯೋಚಿಸದೆ ಘೋಷಣೆ ಮಾಡಿದ್ರೆ ಹೀಗೇ ಆಗೋದು’

ರಾಜ್ಯಗಳಿಗೆ ಅಕ್ಕಿ ಪೂರೈಕೆ ನಿಲ್ಲಿಸಲು ಬೆಲೆ ನಿಯಂತ್ರಣ ಕ್ರಮವೇ ಕಾರಣ. ರಾಜ್ಯವು ಅಕ್ಕಿಗೆ ಕೋರಿಕೆ ಸಲ್ಲಿಸುವ ಮೊದಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂಬುದು ಬಿಜೆಪಿಯ ಸಮರ್ಥನೆ. ಕರ್ನಾಟಕ ಸರ್ಕಾರವು ಕೇಂದ್ರದ ಜೊತೆಗೆ ಕಾಲು ಕೆರೆದು ಜಗಳಕ್ಕೆ ಬರುತ್ತಿದೆ. ರಾಜ್ಯವು ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸಿ, ಗ್ಯಾರಂಟಿ ಜಾರಿಗೊಳಿಸಲಿ ಎಂಬುದು ಬಿಜೆಪಿಯ ಪ್ರತಿಪಾದನೆ. ಈ ಕುರಿತಂತೆ, ರಾಜ್ಯದ ಮಾಜಿ ಮುಖ್ಯಮಂತ್ರಿ **ಬಸವರಾಜ ಬೊಮ್ಮಾಯಿ** ಮಾತನಾಡಿದ್ದಾರೆ

● ವೈ.ಗ. ಜಗದೀಶ್

● ಏನಿದು ಅಕ್ಕಿ ಜಗಳ, ಬೇಕಿತ್ತಾ?

ಕಾಂಗ್ರೆಸ್‌ನವರು ಕಾಲು ಕೆದರಿ ಜಗಳ ತೆಗೆದಿದ್ದಾರೆ. ಅವರು ಹೇಳುತ್ತಿರುವುದೆಲ್ಲ ಸತ್ಯವಲ್ಲ. ಇಡೀ ದೇಶಕ್ಕೆ ಅನ್ವಯವಾಗುವಂತೆ ಆಹಾರ ಭದ್ರತಾ ಕಾಯ್ದೆ ಜಾರಿಯಾದ ಮೇಲೆ ಪ್ರತಿಯೊಂದು ರಾಜ್ಯದ ಅರ್ಹ ಫಲಾನುಭವಿಗಳಿಗೆ ತಲಾ 5 ಕೆ.ಜಿ.ಯಂತೆ ಕೇಂದ್ರ ಸರ್ಕಾರ ಉಚಿತ ಅಕ್ಕಿ ನೀಡುತ್ತಿದ್ದು, ತನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದೆ. ಕರ್ನಾಟಕಕ್ಕೂ ಅದೇ ರೀತಿ ಕೊಡುತ್ತಿದೆ. ಇನ್ನೂ ಹೆಚ್ಚಿನ ಅಕ್ಕಿ ಬೇಕೆಂದರೆ ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುವ ವ್ಯವಸ್ಥೆ ಇದೆ. ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಈಗ ಕುಂಟು ನೆಪ ಹೇಳುತ್ತಿದ್ದಾರೆ.

● ಕರ್ನಾಟಕ ಸರ್ಕಾರ ಅಕ್ಕಿಗೆ ಕೋರಿಕೆ ಸಲ್ಲಿಸಿದ ಮೇಲೆ, ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುವ ನಿಯಮವನ್ನೇ ಬದಲಾಯಿಸಿದ ಕೇಂದ್ರದ ನಿಲುವನ್ನು ಸರಿಯೇ?

ಮೇ 2ನೇ ತಾರೀಖು ಇಲ್ಲಿ ಇದ್ದದ್ದು ಬಿಜೆಪಿ ಸರ್ಕಾರ. ಆಗಿನ್ನೂ ಚುನಾವಣೆ ನಡೆಯುತ್ತಿತ್ತು. ಅಕ್ಕಿ ಮತ್ತು ಗೋಧಿ ಬೆಲೆ ಶೇ 8ರಷ್ಟು ಹೆಚ್ಚಾಗಬಹುದು; ಮಾರುಕಟ್ಟೆಯನ್ನು ನಿಯಂತ್ರಿಸದಿದ್ದರೆ ಅಕ್ಕಿ ಬೆಲೆ ಏರಿಕೆಯನ್ನು ತಡೆಯಲಾಗದು ಎಂಬ ವರದಿ ಸಂಬಂಧಪಟ್ಟ ಇಲಾಖೆಯಿಂದ ಕೇಂದ್ರಕ್ಕೆ ಸಲ್ಲಿಕೆಯಾಯಿತು. ಕೇಂದ್ರ ಸರ್ಕಾರದ ಸಂಪುಟ ಕಾರ್ಯದರ್ಶಿ ನೇತೃತ್ವದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ಜೂನ್ 8ರಂದು ನಡೆಯಿತು. ದರ ನಿಯಂತ್ರಣ ಮಾಡಬೇಕಾದರೆ ಖಾಸಗಿ ಕೋಟಾ ಕಡಿಮೆ ಮಾಡಿ, ಮುಕ್ತ ಮಾರುಕಟ್ಟೆಯಲ್ಲಿ ಖರೀದಿಯನ್ನು ನಿರ್ಬಂಧಿಸಬೇಕು ಎಂಬ ನಿರ್ಧಾರಕ್ಕೆ ಬರಲಾಯಿತು. ಜೂನ್ 10ರಂದು ಸಿದ್ದರಾಮಯ್ಯ ಸರ್ಕಾರ, ಆಹಾರ ನಿಗಮದ ಸ್ಥಳೀಯ ಕಚೇರಿಗೆ ಪತ್ರ ಬರೆಯಿತು. ಪತ್ರ ಬರೆಯುವ ಮೊದಲೇ ಈ ರೀತಿಯ ನಿಯಮಾವಳಿ ರಚಿಸಲಾಗಿದೆ. ಹೀಗಿರುವಾಗ, ಕೇಂದ್ರ ಸರ್ಕಾರ ದುರುದ್ದೇಶ ಪೂರ್ವಕವಾಗಿ ಇಂತಹ ನಿಯಮ ಮಾಡಿದೆ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿರುವುದು ಸುಳ್ಳಲ್ಲವೇ?

● ಸರ್ಕಾರ ಬಂದು ಸ್ವಲ್ಪ ಸಮಯವಷ್ಟೇ ಆಗಿದೆ. ಒಂದಿಷ್ಟು ಅವಕಾಶ ಬೇಕಲ್ಲವೇ?

ರಾಜಕೀಯ, ಆಡಳಿತ ಅನುಭವ ಗೊತ್ತಿಲ್ಲದ ಯಾವನೋ ಹೇಳಿದ ಅಂತ ಎಲ್ಲ ‘ಗ್ಯಾರಂಟಿ’ಗಳನ್ನು ಘೋಷಣೆ ಮಾಡಿದರು. ಅದನ್ನೇ ಅಬ್ಬರದ ಘೋಷಣೆ ಕೊಡುತ್ತಲೇ ಹೋದರು. ಐದು ವರ್ಷದ ಹಿಂದೆ ಪೂರ್ಣಾವಧಿ ಆಡಳಿತ ನಡೆಸಿದ ಅನುಭವ ಇರುವ ಸಿದ್ದರಾಮಯ್ಯನವರಿಗೆ ಗ್ಯಾರಂಟಿ ಅನುಷ್ಠಾನ ಎಷ್ಟು ಸವಾಲಿನದು ಎಂಬುದು ಗೊತ್ತಿರಲಿಲ್ಲವೇ? ಮೊದಲ ಸಚಿವ ಸಂಪುಟ ಸಭೆಯಲ್ಲೇ ಎಲ್ಲ ಗ್ಯಾರಂಟಿಗಳನ್ನು ಜಾರಿ ಮಾಡದೇ ಇದ್ದರೆ ರಾಜಕೀಯ ನಿವೃತ್ತಿ ಪಡೆಯುವುದಾಗಿ ಭಾಷಣ ಮಾಡುವಾಗ ಹೇಳಿದ್ದರು. ಈಗ ಹಣಕಾಸು ಹೊಂದಿಸಲಾಗದೇ, ಅಕ್ಕಿ ಸಿಗದೇ ನೆಪ ಹೇಳುತ್ತಿದ್ದಾರೆ.

● ಯಾವುದನ್ನೂ ಉಚಿತವಾಗಿ ನೀಡಬೇಡಿ ಎನ್ನುತ್ತಿದ್ದ ನೀವು ಈಗ ಅಕ್ಕಿ ಕೊಡದಿದ್ದರೆ ಹೋರಾಟ ಮಾಡುತ್ತೇವೆ ಎನ್ನುತ್ತಿದ್ದೀರಲ್ಲ?

ನಾವೇನೂ ಕೊಡಿ ಎಂದು ಕೇಳಿರಲಿಲ್ಲ. ಅವರೇ ಕೊಡ್ತೇವೆ ಎಂದು ಜನರೆದುರು ವಾಗ್ದಾನ ಮಾಡಿದ್ದರು. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಸಹಿ ಇರುವ ಗ್ಯಾರಂಟಿ ಕಾರ್ಡ್‌ಗಳನ್ನು ಚುನಾವಣೆಗೆ ಮುನ್ನ ಪ್ರತಿ ಮನೆಗೂ ತಲುಪಿಸಿದ್ದರು. ನೀವು ಕೊಟ್ಟ ಭರವಸೆಗಳನ್ನು ಹೇಳಿದಂತೆಯೇ ಈಡೇರಿಸಲು ಏಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನೆ ಮಾಡುತ್ತಿದ್ದೇವೆ. ಮೊದಲ ಸಚಿವ ಸಂಪುಟ ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಿದಾಗಲೂ ರಾಜ್ಯದ ಪ್ರತಿಯೊಬ್ಬರಿಗೂ ನೀಡುವುದಾಗಿ ಹೇಳಿದ್ದರು. ಕೊಟ್ಟ ಮಾತು ಉಳಿಸಿಕೊಳ್ಳಿ ಎಂಬುದಷ್ಟೇ ನಮ್ಮ ಆಗ್ರಹ.

● ಅಕ್ಕಿ ಸಿಗದಿದ್ದರೆ ಅವರು ಏನು ಮಾಡುತ್ತಾರೆ?

ಅನ್ನಭಾಗ್ಯ ಜಾರಿಗೆ ತಾತ್ವಿಕ ಅನುಮೋದನೆ ನೀಡಿದ ಸಚಿವ ಸಂಪುಟ ಸಭೆ, ಅದಕ್ಕೆ ಹಿಂದೆ ನಡೆಸಿದ ಅಧಿಕಾರಿಗಳ ಸಭೆಗಳಲ್ಲಿ ಪ್ರತಿಯೊಬ್ಬರಿಗೂ ತಲಾ 10 ಕೆ.ಜಿ. ನೀಡಲು ಅಕ್ಕಿ ಲಭ್ಯವಿಲ್ಲ, ಅದು ಅಷ್ಟು ಸುಲಭವಾಗಿ ಜಾರಿ ಮಾಡಲಾಗದು ಎಂದು ಅಧಿಕಾರಿಗಳು ಅಂಕಿ ಅಂಶ ಸಹಿತ ವಿವರ ನೀಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅದು ಗೊತ್ತಿತ್ತು. ಆಗುವುದಿಲ್ಲ ಎಂದು ಗೊತ್ತಿದ್ದರೂ ಜುಲೈ 1ರಿಂದ ಅನ್ನಭಾಗ್ಯ ಜಾರಿ ಎಂದು ಘೋಷಣೆ ಮಾಡಿದ್ದೇಕೆ? ಲಭ್ಯತೆ ಆಧರಿಸಿ ಒಂದೆರಡು ತಿಂಗಳು ತಡವಾಗಿ ನೀಡುತ್ತೇವೆ ಎಂದು ಹೇಳಬಹುದಿತ್ತಲ್ಲವೇ?

● ನಿಮ್ಮ ಸರ್ಕಾರ ಇದ್ದಾಗ ಐದು ಕೆ.ಜಿ.ಗೆ ಇಳಿಸಿದ್ದೀರಿ? ಈಗ 10 ಕೆ.ಜಿ ಕೊಡಲೇಬೇಕು ಎಂದರೆ ಹೇಗೆ?

ನಮ್ಮ ಸರ್ಕಾರ ಇದ್ದಾಗ ಮಾತ್ರವಲ್ಲ; ಸಿದ್ದರಾಮಯ್ಯನವರು 2013ರಲ್ಲಿ ಮುಖ್ಯಮಂತ್ರಿಯಾದಾಗ ಮೊದಲು ₹1ಕ್ಕೆ ಒಂದು ಕೆ.ಜಿ ಅಕ್ಕಿಯಂತೆ 5 ಕೆ.ಜಿ ಅಕ್ಕಿ ಕೊಡುತ್ತಿದ್ದರು. 2014ರಲ್ಲಿ ಆಹಾರ ಭದ್ರತಾ ಕಾಯ್ದೆ ಜಾರಿಗೆ ಬಂತು. ಅದಾದ ಬಳಿಕ, ಐದು ಕೆ.ಜಿ ಅಕ್ಕಿಯನ್ನು ಕೇಂದ್ರ ಸರ್ಕಾರವೇ ಉಚಿತವಾಗಿ ನೀಡುತ್ತಿತ್ತು. ಅದನ್ನು ಕರ್ನಾಟಕದಲ್ಲೂ ಜಾರಿ ಮಾಡಿದರು. ಚುನಾವಣೆಗೆ ಒಂದು ವರ್ಷ ಇರುವಾಗ ಅದನ್ನು 7 ಕೆ.ಜಿಗೆ ಏರಿಸಿದರು. ಆಗಲೂ 5 ಕೆ.ಜಿ ಅಕ್ಕಿಯನ್ನು ಬಿಜೆಪಿ ನೇತೃತ್ವದ ಸರ್ಕಾರವೇ ನೀಡುತ್ತಿತ್ತು. ಉಳಿದ ಎರಡು ಕೆ.ಜಿ ಅಕ್ಕಿಯನ್ನು ಕರ್ನಾಟಕ ಕೊಡುತ್ತಿತ್ತು. ಕೋವಿಡ್ ಕಾಲದಲ್ಲಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ 10 ಕೆ.ಜಿ ಅಕ್ಕಿಯನ್ನು 2022ರ ಡಿಸೆಂಬರ್‌ವರೆಗೂ ನೀಡಲಾಯಿತು. ಮತ್ತೆ 5 ಕೆ.ಜಿಗೆ ಇಳಿಕೆ ಮಾಡಿದಾಗ, ಒಂದು ಕೆ.ಜಿ ರಾಗಿ ಅಥವಾ ಜೋಳ ನೀಡುವುದನ್ನು ನಾವು ಜಾರಿಗೆ ತಂದಿದ್ದೆವು. 10 ಕೆ.ಜಿ ಅಕ್ಕಿ ಕೊಡುವುದಾಗಿ ಕಾಂಗ್ರೆಸ್ ಗ್ಯಾರಂಟಿಯಲ್ಲೇ ಘೋಷಣೆ ಮಾಡಿದ್ದರಿಂದಾಗಿ ನಾವು ಜನರ ಪರವಾಗಿ ಕೇಳುತ್ತಿದ್ದೇವೆ.

● ಎಥೆನಾಲ್, ಮೊಲಾಸಿಸ್ ತಯಾರಿಕೆಗೆ ಕೆ.ಜಿಗೆ ₹24ರಂತೆ 29 ಲಕ್ಷ ಟನ್ ಅಕ್ಕಿ ಕೊಡುವ ಕೇಂದ್ರ, ರಾಜ್ಯ ಸರ್ಕಾರ ₹34 ಕೊಡುತ್ತೇವೆ ಎಂದರೂ ನಿರಾಕರಿಸುವುದು ಏಕೆ?

ಹೆಚ್ಚಿನ ಪ್ರಮಾಣದ ಅಕ್ಕಿ ದಾಸ್ತಾನು ಇದ್ದಾಗ, ಅದು ಹಾಳಾಗಬಾರದು ಎಂಬ ಕಾರಣಕ್ಕೆ ಎಥೆನಾಲ್ ತಯಾರಿಕೆಗೆ ಇಂತಿಷ್ಟು ಅಕ್ಕಿ ನೀಡಬಹುದು ಎಂದು ಕೇಂದ್ರ ನೀತಿ ರೂಪಿಸಿತು. ಪೆಟ್ರೋಲ್‌ಗೆ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡಬೇಕು ಎಂಬ ನಿಯಮ ರೂಪಿಸಲಾಗಿದೆ. ಪೆಟ್ರೋಲ್ ಕೂಡ ಅಕ್ಕಿಯಷ್ಟೇ ಅಗತ್ಯ. ಅದರರ್ಥ ಕರ್ನಾಟಕಕ್ಕೆ ಕೊಡುವುದನ್ನು ತಪ್ಪಿಸಿ, ಎಥೆನಾಲ್‌ಗೆ ಕೊಟ್ಟಿದ್ದಾರೆ ಎಂದಲ್ಲ. ಕೇಂದ್ರ ಎತ್ತುವಳಿ ಮಾಡಿದ ಅಕ್ಕಿ, ಎಥೆನಾಲ್ ಉತ್ಪಾದನೆಗೆ ನೆರವಾಗಲಿ ಎಂಬುದಷ್ಟೇ ಇದರ ಆಶಯ.

● ರಾಜ್ಯಗಳಿಗೆ ಅಕ್ಕಿ ಕೊಡುವ ಕೇಂದ್ರ ಎಲ್ಲಿಂದ ಖರೀದಿಸುತ್ತದೆ?

ಅಕ್ಕಿ ಬೆಳೆಯುವ ಎಲ್ಲ ರಾಜ್ಯಗಳಿಂದಲೂ ಭಾರತೀಯ ಆಹಾರ ನಿಗಮ ಖರೀದಿ ಮಾಡುತ್ತದೆ. ಮೊದಲು ಲೆವಿ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಇದನ್ನು ಅಕ್ಕಿ ಗಿರಣಿ ಮಾಲೀಕರು ದುರ್ಬಳಕೆ ಮಾಡಿಕೊಳ್ಳಲಾರಂಭಿಸಿದ ಬಳಿಕ, ಮುಕ್ತ ಮಾರುಕಟ್ಟೆಯಲ್ಲಿ ಟೆಂಡರ್ ಕರೆದು ಖರೀದಿ ಮಾಡುವ ಪದ್ಧತಿ ಇದೆ. ಗಿರಣಿ, ವ್ಯಾಪಾರಿಗಳು, ಕೆಲವು ಸಂಸ್ಥೆಗಳು ಈ ಟೆಂಡರ್‌ನಲ್ಲಿ ಭಾಗಿಯಾಗಿ ಅಕ್ಕಿಯನ್ನು ಪೂರೈಸುತ್ತವೆ.

● ಕರ್ನಾಟಕವೇನೂ ಉಚಿತವಾಗಿ ಕೇಳುತ್ತಿಲ್ಲ? ದುಡ್ಡು ಕೊಡುತ್ತೇವೆ ಎಂದರೂ ಕೊಡದಿರುವುದು ಎಷ್ಟು ಸರಿ?

ವಿಷಯ ಅದಲ್ಲ; ಆಹಾರ ನಿಗಮ ಅಕ್ಕಿಯನ್ನು ಖರೀದಿಸಿ, ಸಂಗ್ರಹಿಸಿಟ್ಟುಕೊಳ್ಳುವ ಹೊಣೆಯನ್ನಷ್ಟೇ ನಿಭಾಯಿಸುತ್ತದೆ. ಅಕ್ಕಿ ಕೊಡುವುದು ಅವರ ಜವಾಬ್ದಾರಿಯಲ್ಲ. ಸರ್ಕಾರ ಅಸ್ತಿತ್ವಕ್ಕೆ ಬಂದು ಮೊದಲ ಸಚಿವ ಸಂಪುಟ ಸಭೆಯಲ್ಲಿ ಅನ್ನಭಾಗ್ಯಕ್ಕೆ ತಾತ್ವಿಕ ಒಪ್ಪಿಗೆ ನೀಡಿದ ಬಳಿಕ ಸರ್ಕಾರವು ಕೇಂದ್ರ ಸರ್ಕಾರದೊಡನೆ ಸಮರ್ಪಕವಾಗಿ ಮಾತುಕತೆ ನಡೆಸಲಿಲ್ಲ. ದಶಕಗಳ ಕಾಲ ಸಂಸದರಾಗಿ, ಕೇಂದ್ರ ಸಚಿವರಾಗಿ ಅಪಾರ ಆಡಳಿತ ಅನುಭವ ಇರುವ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ನೇರವಾಗಿ ಕೇಂದ್ರ ಆಹಾರ ಸಚಿವ ಅಥವಾ ಕಾರ್ಯದರ್ಶಿಯವರ ಜತೆಗೆ ಮಾತುಕತೆ ಆಡಬೇಕಾಗಿತ್ತು. ಅದು ಬಿಟ್ಟು, ತಿಂಗಳ ಬಳಿಕ ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸುವುದು ಅವರ ನಿರ್ಲಕ್ಷ್ಯವನ್ನು ತೋರಿಸುತ್ತದೆ.


● ಅಕ್ಕಿ ಕೊಡದಿದ್ದರೆ ಮುಂದಿನ ಹೆಜ್ಜೆ?

ಸದನದೊಳಗೆ ಹಾಗೂ ಹೊರಗೆ ಹೋರಾಟ ನಡೆಸುತ್ತೇವೆ. ◆

‘10 ಸಾವಿರ ಕೋಟಿ ಉಳಿಸುವ ದುರಾಲೋಚನೆ’

● ಹಣಕಾಸು, ಆಹಾರ ಇಲಾಖೆಯನ್ನು ಹೊಂದಿದ್ದ ನೀವು ಈ ಸರ್ಕಾರಕ್ಕೆ ನೀಡುವ ಸಲಹೆ?


ಈಗಲೂ ಕಾಲ ಮಿಂಚಿಲ್ಲ. ಸುಳ್ಳು ಹೇಳಿ ಕೇಂದ್ರದತ್ತ ಬೊಟ್ಟು ಮಾಡುವುದನ್ನು ಬಿಟ್ಟು ಅಕ್ಕಿ ಹೊಂದಿಸಲು ಕ್ರಮ ಕೈಗೊಳ್ಳಿ. ಅಕ್ಕಿ ಗಿರಣಿ ಮಾಲೀಕರ ಸಂಘ, ವ್ಯಾಪಾರಿಗಳ ಸಭೆ ಕರೆದು ಇಲ್ಲಿಯೇ ಅಕ್ಕಿ ಸಂಗ್ರಹ ಮಾಡಿಕೊಳ್ಳಲು ಕ್ರಮವಹಿಸಿ. ಅದನ್ನು ಈವರೆಗೂ ಸಿದ್ದರಾಮಯ್ಯ ಅಥವಾ ಮುನಿಯಪ್ಪನವರು ಮಾಡಿಲ್ಲ. ಇದು ಒಂದು ತಿಂಗಳ ಸಮಸ್ಯೆಯಲ್ಲ. ಐದು ವರ್ಷ ಉಚಿತವಾಗಿ ಅಕ್ಕಿ ನೀಡಬೇಕಾದ ಹೊಣೆ ಸರ್ಕಾರದ ಮೇಲಿದೆ. ಎಲ್ಲ ಗ್ಯಾರಂಟಿಗಳು ಒಂದೆರಡು ತಿಂಗಳು ಮುಂದೆ ಹೋದರೆ ಹತ್ತು ಸಾವಿರ ಕೋಟಿ ಉಳಿಸಬಹುದು ಎಂಬುದು ಸರ್ಕಾರದ ದುರಾಲೋಚನೆ ಇದ್ದಂತಿದೆ. ಅದಕ್ಕಾಗಿ, ನೆಪ ಹೇಳುತ್ತಿದ್ದಾರೆ. ಯಾವುದೇ ಪೂರ್ವ ತಯಾರಿ ಇಲ್ಲದೇ, ಆರಂಭಿಸಿದರೆ ಈಗ ಉಚಿತ ಪ್ರಯಾಣ ಆರಂಭಿಸಿ ಬಸ್‌ಗಳಿಲ್ಲದೇ ಜನ ಪರದಾಡುವಂತೆ ಮಾಡಿದಂತೆ ಆಗುತ್ತದೆ. ಸರ್ವರ್ ಸಾಮರ್ಥ್ಯ ಪರೀಕ್ಷಿಸಿ ಅದನ್ನು ಹೆಚ್ಚಿಸುವ ಕೆಲಸ ಮಾಡದೇ ಏಕಾಏಕಿ ಗೃಹ ಜ್ಯೋತಿ ನೋಂದಣಿ ಶುರು ಮಾಡಿದ್ದರಿಂದಾಗಿ ಜನರಿಂದ ಬೈಗುಳ ತಿನ್ನುವ, ಜನ ಕಷ್ಟಪಡುವ ವಾತಾವರಣ ಸೃಷ್ಟಿಯಾಗಿದೆ. ದೂರದರ್ಶಿತ್ವ ಇಲ್ಲದೇ ಯೋಜನೆ ಆರಂಭಿಸಿದ್ದರಿಂದಾಗಿ, ಸರ್ಕಾರದ ವೈಫಲ್ಯವೂ ಬಯಲಾಗಿದೆ. ಇದು ಅನ್ನಭಾಗ್ಯದ ಫಲಾನುಭವಿಗಳಿಗೆ ಆಗದಿರಲಿ.



ಬಸವರಾಜ ಬೊಮ್ಮಾಯಿ

ಪದಬಂಧ 5359

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

3. ಬೆಂಬಿಡದೆ ಕಾಡುವವನು (4)
5. ಮಣಿ ಧರಿಸಿದ ಚಲುವೆ (3)
6. ಲೋಪದೋಷಗಳನ್ನು ಸರಿಪಡಿಸುವವನು (4)
8. ಸಮದಲ್ಲಿ ಸೇರುವಿಕೆ! (4)
12. ಹೀಗೆ ಕಣ್ಮರೆಯಾಗುವುದು (4)
14. ಬೇರೆಯವರ ಒಳಿತು (4)
15. ಧಾನ್ಯ ಸಂಗ್ರಹಿಸುವ ಸ್ಥಳ (3)
16. ವರ್ಗ ಅಥವಾ ಇಯತ್ತೆ (4)

ಮೇಲಿಂದ ಕೆಳಕ್ಕೆ

1. ಉತ್ಸವದಲ್ಲಿ ಊರೆಲ್ಲಾ ಸುತ್ತುವ ವೈಭವದ ಪ್ರದರ್ಶನ (5)
2. ಅಂತಃಪುರವನ್ನು ಹೀಗೂ ಹೇಳುವರು (4)
3. ಅದೇ ತಾನೆ ಅರಳಿದ ಹೂ (4)
4. ಕಲೆಸಿದ ಗೋಧಿ ಹಿಟ್ಟು (3)
7. ಒಂದು ಪ್ರದೇಶದಿಂದ ಹೊರಕ್ಕೆ ಕಳಿಸುವುದು (2)
9. ಲೆಕ್ಕ ಶಾಸ್ತ್ರವಿದು (3)
10. ಪ್ರಯೋಜನಕ್ಕೆ ಬಾರದವನು (5)
11. ಉಪ್ಪಿನ ಗುಣವುಳ್ಳದ್ದು (2)
12. ಒಳಗಿರುವ ಬೆಳಕು (4)
13. ಹೊಸ ಶೈಲಿಯ ಕವಿ (4)
14. ಅಗಲವಾದ ಹರಿವಾಣ (3)

5358ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಾಟಿಮದ್ದು
3.ತಲೆಗಾಪು 5.ಡಿಕಾವು
7.ಪಡಪೋಸಿ
9.ಧಣಿ 10.ಡಿಕ್ಕಿ
11.ತಲೋದರಿ 13.ಹೆಡಿಗೆ
16.ಪಿತಾಮಹಿ 17.ದಳಪತಿ

ಮೇಲಿಂದ ಕೆಳಕ್ಕೆ:
1.ನಾಡಾಡಿ 2.ಮರೆವು
3.ತಡಬಡ 4.ಪುಷ್ಪ
6.ಕಾಗುಣಿತ 7.ಪರಾರಿ
8.ಸಿಡಿಮಿಡಿ
12.ದನಗಾಹಿ 13.ಹೆಬ್ಬಳ
14.ಗೆಳತಿ 15.ಕಪಿ

ಸುಡೊಕು 5745

9		7					5	
			4		9	8		7
5		8					6	
		6	5			7		9
7				6	1		4	
	5		8			3		6
			3			4		2
	9							
6		4		9	5	1		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5744 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜೂನ್ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ಷಷ್ಠಿ ಗಂ. 22-18 ನಕ್ಷತ್ರ: ಮಘ ಗಂ. 07-18 ಯೋಗ: ಸಿದ್ಧಿ (ಆಸ್ರಿಕ್), ಅಹೋರಾತ್ರ ಕರಣ: ಕೌಲವ ಗಂ. 09-07, ಮಿಥುನ ಮಾಸದ 08ನೇ ದಿನ,
ಮಳೆನಕ್ಷತ್ರ: ಆದ್ರಾ 1. ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-09 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 05 ಜುಲ್‌ಹಿಜಾ, ದಿನ ವಿಶೇಷ : ಕುಮಾರ ಷಷ್ಠಿ ವ್ರತ
ಅದೃಷ್ಟ ಸಂಖ್ಯೆ : 7, 11

ಮೇಷ: ಪ್ರಯತ್ನ ಪಟ್ಟ ಸರ್ಕಾರಿ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ. ನಿಮ್ಮ ವೃತ್ತಿಯಲ್ಲಿ ಸಾಕಷ್ಟು ಸುಸಂದರ್ಭಗಳು ಎದುರಾಗಬಹುದು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಶ್ರೇಯಸ್ಸು ಹಾಗು ಮೇಧಾಶಕ್ತಿ ಹೆಚ್ಚಲಿದೆ.

ವೃಷಭ: ಜೀವನದ ಶೈಲಿಯಲ್ಲಿ ಬದಲಾವಣೆಯ ಗಾಳಿ ಬೀಸಲು ಆರಂಭಿಸುತ್ತದೆ. ಕೃಷಿ ಕಾರ್ಯವು ವಿಳಂಬವಾಗದಂತೆ ಕೃಷಿಕರು ಗಮನವಹಿಸಿ. ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಲು ಸೂಕ್ತವಾದ ಸಮಯ.

ಮಿಥುನ: ಕುಟುಂಬದ ಆಂತರಿಕ ಸಮಸ್ಯೆಯೊಂದು ಸಾಮರಸ್ಯದಿಂದ ಬಗೆಹರಿಯಲಿದೆ. ನಿರುದ್ಯೋಗಿಗಳಿಗೆ ನಿರೀಕ್ಷೆಗೂ ಮೀರಿದಂತಹ ಕೆಲಸ ಸಿಗುವ ಸಾಧ್ಯತೆ ಇದೆ. ಭೋಜನ ಈ ದಿನ ಆರೋಗ್ಯಕ್ಕೆ ಸ್ವಲ್ಪ ತೊಂದರೆ ತರಬಹುದು.

ಕರ್ಕಾಟಕ: ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾ ಕೊಡುವಂತೆ ಅಧಿಕಾರಿಗಳಿಂದ ತೀಕ್ಷ್ಣವಾದ ಸಂದೇಶ ಬರಲಿದೆ. ಗಂಡನ ಹಣಕಾಸಿನ ಪರಿಸ್ಥಿತಿಗೆ ನೀವು ಶ್ರಮಿಸಿ ಸಹಕರಿಸಬೇಕಾದಂತೆ ಆಗುವುದು. ಪರೀಕ್ಷಾರ್ಥಿಗಳಿಗೆ ಆತ್ಮವಿಶ್ವಾಸ ವೃದ್ಧಿ.

ಸಿಂಹ: ಮನೆಯವರಿಗೆ ನಿರ್ಧಾರವನ್ನು ಸ್ಪಷ್ಟ ಹಾಗೂ ಮೃದುವಾದ ಮಾತುಗಳಲ್ಲಿ ತಿಳಿಯಪಡಿಸಿ. ಹವಾ ಬದಲಾವಣೆಗಾಗಿ ಕಿರು ಪ್ರವಾಸದ ಸಾಧ್ಯತೆಗಳಿವೆ. ಸ್ನೇಹಿತರಿಂದ ವ್ಯಾಪಾರದಲ್ಲಿ ಒಳ್ಳೆಯ ಫಲಿತಾಂಶ ಎದುರು ನೋಡಬಹುದು.

ಕನ್ಯಾ: ಶಿಕ್ಷಕ ವೃತ್ತಿಯವರಿಗೆ ಮಕ್ಕಳ ಅಸಾಮಾನ್ಯ ಬುದ್ಧಿವಂತಿಕೆಯಿಂದಾಗಿ ತರಬೇತಿಯ ಅಗತ್ಯ ಕಾಣುವುದು. ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದರ ಜತೆಯಲ್ಲಿ ಆ ಸಮಾರಂಭದ ಜವಾಬ್ದಾರಿ ಹೊರಬೇಕಾಗುವುದು.

ತುಲಾ: ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಹೆಚ್ಚಾಗಿ ಸ್ನೇಹಿತರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ನಿಮ್ಮಲ್ಲಿರುವ ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿ ಬರಲು ಸೂಕ್ತ ಕಾಲವಿದು. ವೃತ್ತಿರಂಗದಲ್ಲಿ ಪ್ರತಿ ಹೆಜ್ಜೆಗೂ ಎಚ್ಚರವಿರಲಿ.

ವೃಶ್ಚಿಕ: ನಾಟಕ ಹಾಗೂ ಸಿನಿಮಾ ರಂಗದಲ್ಲಿ ಕೆಲಸ ನಿರ್ವಹಿಸುವವರಿಗೆ ಯಶಸ್ಸು ಇದ್ದು ಹೆಚ್ಚಿನ ಪ್ರೋತ್ಸಾಹಗಳು ದೊರೆತು ಸಮಾಜದಲ್ಲಿ ಸ್ಥಾನಮಾನಗಳಿಂದ ಉನ್ನತ ಸ್ಥಿತಿಗೆ ಬರುವಿರಿ. ಈ ದಿನ ಮನೆಯೇ ಸೌಖ್ಯವೆಂದು ಅನಿಸಲಿದೆ.


ಧನು: ಸಾಂಸಾರಿಕ ಸಮಸ್ಯೆಗಳಿಂದ ವೃತ್ತಿಯಲ್ಲಿ ಬಿಡುವು ಮಾಡಿಕೊಳ್ಳಬೇಕಾದ ಸಂದರ್ಭ ಎದುರಾಗಬಹುದು. ಕೆಲಸಗಳಲ್ಲಿನ ಜವಾಬ್ದಾರಿಗಳು ಹೆಚ್ಚಿ ಆರ್ಥಿಕ ಸ್ಥಿತಿಯು ಸುಧಾರಣೆಗೆ ಹಂತದಲ್ಲಿರುವುದು.

ಮಕರ: ಆರ್ಥಿಕತೆಯಲ್ಲಿ ಅಗೌರವವಾಗುವಂಥ ಸನ್ನಿವೇಶ ಎದುರಾಗಿ ಕೊನೆಯ ಕ್ಷಣದಲ್ಲಿ ಹಣಕಾಸಿನ ಹೊಂದಿಕೆಯಾಗುವುದು. ವೃತ್ತಿರಂಗದಲ್ಲಿ ಪ್ರಯತ್ನ ಇದ್ದಲ್ಲಿ ಸ್ಥಾನ ಬದಲಾವಣೆಯಾಗುವ ಸಾಧ್ಯತೆಯಿದೆ.

ಕುಂಭ: ಈ ದಿನದ ಆಗುಹೋಗುಗಳ ಬಗ್ಗೆ ತಲೆಕೆಡಿಸಿ ಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವು ಕ್ಷಣಿಕವಾದ ವಿಚಾರ. ಹಿರಿಯರು ಗಹನವಾದ ಸಮಸ್ಯೆಗಳಿಗೆ ತಕ್ಷಣ ಸುಲಭ ಪರಿಹಾರಗಳನ್ನು ತಿಳಿಸಿ ಕೊಡುವರು.

ಮೀನ: ಹಿರಿಯರ ಆಸೆಯಂತೆ ಹೊಸ ಆಸ್ತಿ ಕೊಳ್ಳುವ ಅವಕಾಶ ಸಿಗಲಿದೆ. ಯಂತ್ರಗಳನ್ನು ಬಳಸುವಾಗ ತೊಂದರೆಯಾಗುವ ಸಂಭವವಿದೆ. ರೈತರಿಗೆ ತಮ್ಮ ಬೆಳೆಗಳಿಗೆ ಉತ್ತಮ ಬೆಲೆ ದೊರೆಯುವ ಸಂಭವವಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,771
ಇಂದಿನ ಅಂತ್ಯ	18,665
▼	106
ದಿನದ ಕನಿಷ್ಠ	18,647

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹500-1000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹600
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹603

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1650)
ಸೋಯಾ (ರಿಫೈನ್ಡ್)	₹925 (920)
ಸೂರ್ಯಕಾಂತಿ (ರಿಫೈನ್ಡ್)	₹915 (920)
ಪಾಮೋಲಿನ್	₹840 (832)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹7800-8200
ಕೆ.ಆರ್.ಪೇಟೆ	₹7850-7850
ತುರುವೇಕೆರೆ	₹8000-8200

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144.50
ಗುಡ್ ಲಾಟ್	₹125

ಅಕ್ಕಿ, ಗೋಧಿ ಹರಾಜು ಶೀಘ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ತನ್ನಲ್ಲಿರುವ ಧಾನ್ಯ ಸಂಗ್ರಹದಿಂದ 4 ಲಕ್ಷ ಟನ್ ಗೋಧಿ ಹಾಗೂ 5 ಲಕ್ಷ ಟನ್ ಅಕ್ಕಿಯನ್ನು ಸಗಟು ಗ್ರಾಹಕರಿಗೆ ಮತ್ತು ವರ್ತಕರಿಗೆ ಶೀಘ್ರದಲ್ಲಿಯೇ ಮಾರಾಟ ಮಾಡಲಿದೆ. ಅಕ್ಕಿ ಹಾಗೂ ಗೋಧಿ ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರವು ಈ ಕ್ರಮಕ್ಕೆ ಮುಂದಾಗಿದೆ.

ಕೇಂದ್ರ ಆಹಾರ ನಿಗಮವು (ಎಫ್‌ಸಿಐ) ಗೋಧಿಯ ಇ-ಹರಾಜನ್ನು ಜೂನ್ 28ರಂದು, ಅಕ್ಕಿಯ ಇ-ಹರಾಜನ್ನು ಜುಲೈ 5ರಂದು ನಡೆಸಲಿದೆ. 'ಅಕ್ಕಿ ಹಾಗೂ ಗೋಧಿಯ ಬೆಲೆಯಲ್ಲಿ ಏರಿಕೆ ಕಾಣುತ್ತಿದ್ದೇವೆ. ಕೇಂದ್ರವು ನಮಗೆ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯನ್ನು (ಒಎಂಎಸ್‌ಎಸ್) ಆರಂಭಿಸುವಂತೆ ಸೂಚಿಸಿದೆ. ರಿಟೇಲ್ ಮಾರಾಟ ಬೆಲೆಯನ್ನು ತಗ್ಗಿಸುವುದು ಇದರ ಗುರಿ' ಎಂದು ಎಫ್‌ಸಿಐ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಕೆ. ಮೀನಾ ಹೇಳಿದ್ದಾರೆ.

ಇ-ಹರಾಜು ಸಂದರ್ಭದಲ್ಲಿ ಒಬ್ಬ ಖರೀದಿದಾರ ಗರಿಷ್ಠ 100 ಟನ್‌ವರೆಗೆ ಬಿಡ್ ಸಲ್ಲಿಸಬಹುದು. ಅಗತ್ಯ ಎದುರಾದರೆ ಒಎಂಎಸ್‌ಎಸ್ ಯೋಜನೆಯ ಅಡಿಯಲ್ಲಿ ಮಾರಾಟ ಮಾಡಲು 87 ಲಕ್ಷ ಟನ್ ಗೋಧಿ ಮತ್ತು 292 ಲಕ್ಷ ಟನ್ ಅಕ್ಕಿ ಕೇಂದ್ರದ ಬಳಿ ಇದೆ ಎಂದು ಮೀನಾ ಹೇಳಿದ್ದಾರೆ.

80 ಕೋಟಿ ಜನರಿಗೆ ಕೇಂದ್ರವು ಉಚಿತವಾಗಿ ಆಹಾರ ಧಾನ್ಯ ಒದಗಿಸುತ್ತಿದೆ. ಇನ್ನುಳಿದ 60 ಕೋಟಿ ಜನರಿಗೆ ನ್ಯಾಯೋಚಿತ ಬೆಲೆಯಲ್ಲಿ ಒಎಂಎಸ್‌ಎಸ್ ಯೋಜನೆ ಮೂಲಕ ಧಾನ್ಯ ಒದಗಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಎನ್‌ಪಿಎಸ್: ವರದಿ ಅಲ್ಲಗಳೆದ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರಿಗೆ ಎನ್‌ಪಿಎಸ್ ಅಡಿಯಲ್ಲಿ ಪಿಂಚಣಿ ಮೊತ್ತವನ್ನು ಖಚಿತಪಡಿಸುವ ಪ್ರಸ್ತಾವವನ್ನು ಕೇಂದ್ರವು ಹೊಂದಿದೆ ಎಂಬ ವರದಿಗಳು ಸತ್ಯವಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಪಿಂಚಣಿ ಬಗ್ಗೆ ಪರಿಶೀಲನೆಗೆ ರಚಿಸಿರುವ ಸಮಿತಿಯು ಸಂಬಂಧಪಟ್ಟವರ ಜೊತೆ ಸಮಾಲೋಚನೆ ನಡೆಸುತ್ತಿದೆ. ಸಮಿತಿಯು ಇದುವರೆಗೆ ಯಾವುದೇ ತೀರ್ಮಾನಕ್ಕೆ ಬಂದಿಲ್ಲ ಎಂದು ಸಚಿವಾಲಯವು ಟ್ವೀಟ್ ಮಾಡಿದೆ.

ಟೆಸ್ಲಾ ಆಹ್ವಾನಿಸಿದ ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಚಾಲಿತ ಕಾರುಗಳ ತಯಾರಿಕಾ ಕಂಪನಿ ಟೆಸ್ಲಾ, ರಾಜ್ಯದಲ್ಲಿ ಉತ್ಪಾದನಾ ಘಟಕ ಸ್ಥಾಪಿಸಲು ನಿರ್ಧರಿಸಿದರೆ, ಎಲ್ಲ ಸಹಕಾರ ನೀಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ. ಕಂಪನಿಯು ಕರ್ನಾಟಕದಲ್ಲಿ ಘಟಕ ಸ್ಥಾಪಿಸುವ ಬಗ್ಗೆ ಪರಿಗಣಿಸಬೇಕು ಎಂದು ಅವರು ಕೋರಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಪ್ರವಾಸದ ಸಂದರ್ಭದಲ್ಲಿ ಟೆಸ್ಲಾ ಕಂಪನಿಯ ಮುಖ್ಯಸ್ಥ ಎಲಾನ್ ಮಸ್ಕ್ ಅವರನ್ನು ಭೇಟಿ ಮಾಡಿದ್ದರು. ಮಸ್ಕ್ ಅವರು ಭಾರತದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಹೂಡಿಕೆ ಮಾಡುವುದಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಪಾಟೀಲ ಅವರು, 'ಹೂಡಿಕೆಗೆ ಕರ್ನಾಟಕಕ್ಕೇ ಬನ್ನಿ' ಎಂದು ಆಹ್ವಾನಿಸಿದ್ದಾರೆ.

ಸಿದ್ದರಾಮಯ್ಯಗೆ ಉದ್ಯಮಿಗಳ ಸಮಸ್ಯೆ ವಿವರಿಸಿದ ಎಫ್‌ಕೆಸಿಸಿಐ ನಿಯೋಗ

'ಗೃಹಜ್ಯೋತಿ' ಹೊರೆ ಯಾರ ಮೇಲೂ ಹಾಕಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹಜ್ಯೋತಿ' ಯೋಜನೆಯ ಹೊರೆಯನ್ನು ಕೈಗಾರಿಕೋದ್ಯಮಿಗಳೂ ಸೇರಿ ಯಾರ ಮೇಲೂ ಹಾಕುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ(ಎಫ್‌ಕೆಸಿಸಿಐ) ಅಧ್ಯಕ್ಷ ಬಿ.ವಿ.ಗೋಪಾಲ ರೆಡ್ಡಿ ಅವರ ನೇತೃತ್ವದ ನಿಯೋಗವು ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿ ಮಾಡಿ ಉದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಹಿಂದಿನ ಸರ್ಕಾರದ ಅವಧಿಯಲ್ಲಿಯೇ ವಿದ್ಯುತ್ ದರ ಏರಿಕೆಯ ನಿರ್ಣಯ ತೆಗೆದುಕೊಳ್ಳಲಾಗಿತ್ತು' ಎಂದು ತಿಳಿಸಿದರು.

'ನಮ್ಮ ಸರ್ಕಾರ ವಿದ್ಯುತ್ ಶುಲ್ಕವನ್ನು ಏರಿಸುವ ನಿರ್ಧಾರ ಮಾಡಿಲ್ಲ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಬೆಲೆ ಹೆಚ್ಚಳದ ನಿರ್ಧಾರವನ್ನು ನಾವು ಅಧಿಕಾರಕ್ಕೆ ಬರುವ ಮೊದಲೇ ಕೈಗೊಂಡಿತ್ತು' ಎಂದು ವಿವರಿಸಿದರು.

'ಕೆ.ಇ.ಆರ್.ಸಿ ತನ್ನ ಆದೇಶದಲ್ಲಿ ಉದ್ಯಮ ವಲಯದ ವಿದ್ಯುತ್ ದರವನ್ನು ಹೆಚ್ಚಿಸಿದ್ದು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಎಚ್.ಟಿ ಕೈಗಾರಿಕೆಗಳ ಮೇಲೆ ವಿಧಿಸುವ ಶೇ 9 ರಷ್ಟು ವಿದ್ಯುತ್ ತೆರಿಗೆಯನ್ನು ಶೇ 3 ರಷ್ಟು ಇಳಿಸಬೇಕು' ಎಂದು ಎಫ್‌ಕೆಸಿಸಿಐ ಮನವಿ ಮಾಡಿತು.

ಇಂಧನ ಶುಲ್ಕದಲ್ಲಿ ರಿಯಾಯಿತಿ ನೀಡಬೇಕು. ಇತರೆ ರಾಜ್ಯಗಳಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ನೀತಿ ಹಾಗೂ ಕಾಯ್ದೆ ಇರುವಂತೆ ರಾಜ್ಯದಲ್ಲೂ ಕಾಯ್ದೆ ರಚನೆ ಮಾಡುವಂತೆಯೂ ಕೋರಿತು.

ನಿಯೋಗ ಮಾಡಿರುವ ಮನವಿಯ ಕುರಿತು ಆರ್ಥಿಕ, ಇಂಧನ ಇಲಾಖೆ, ಕಾಸಿಯಾ, ಎಫ್‌ಕೆಸಿಸಿಐ ಅವರೊಂದಿಗೆ ಪ್ರತ್ಯೇಕ ಸಭೆ ಕರೆದು ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದೂ ಸಿದ್ದರಾಮಯ್ಯ ಭರವಸೆ ನೀಡಿದರು.

ಎಸ್ಕಾಂಗಳಿಗೆ ₹11 ಸಾವಿರ ಕೋಟಿ ಬಾಕಿ

'ಹಿಂದಿನ ಸರ್ಕಾರ ಎಸ್ಕಾಂಗಳಿಗೆ ₹11,000 ಕೋಟಿ ಬಾಕಿ ಉಳಿಸಿ ಹೋಗಿದ್ದು, ಅದನ್ನು ನಾವು ಭರಿಸಬೇಕಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ಬಿಜೆಪಿ ಸರ್ಕಾರದ ಆರ್ಥಿಕ ಅಶಿಸ್ತಿನಿಂದ ಆಗಿರುವ ಅನಾಹುತಗಳನ್ನು ನಾವು ಸರಿಪಡಿಸಬೇಕಿದೆ' ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ(ಕಾಸಿಯಾ) ಕೆ.ಎನ್.ನರಸಿಂಹಮೂರ್ತಿ ನೇತೃತ್ವದ ನಿಯೋಗದ ಜತೆಗಿನ ಮಾತುಕತೆ ಸಂದರ್ಭದಲ್ಲಿ ತಿಳಿಸಿದರು.

ಸಣ್ಣ– ಮಧ್ಯಮ ಹಾಗೂ ಸೂಕ್ಷ್ಮ ಕೈಗಾರಿಕೆಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇಂಧನ, ಕೈಗಾರಿಕೆ ಹಾಗೂ ಕಾಸಿಯಾ ಜೊತೆಗೆ ಪ್ರತ್ಯೇಕ ಸಭೆ ಕರೆದು ಚರ್ಚಿಸಲಾಗುವುದು ಎಂದು ಅವರು ಭರವಸೆ ನೀಡಿದರು.

'ವಿದ್ಯುತ್ ದರ ಏರಿಕೆ ಶಿಫಾರಸನ್ನು ಮರುಪರಿಶೀಲಿಸುವಂತೆ ಮನವಿ ಮಾಡಲು ನಿಮಗೆ ಅವಕಾಶವಿದೆ. ನಿಮಗಾಗುತ್ತಿರುವ ಸಮಸ್ಯೆಗಳ ಕುರಿತು ನೀವೊಮ್ಮೆ ಕೆಇಆರ್‌ಸಿಗೆ ಮನವಿ ಮಾಡಿಕೊಳ್ಳಿ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ನಿಯೋಗಕ್ಕೆ ಸೂಚಿಸಿದರು.

ಅದಾನಿ ಎಂಟರ್‌ಪ್ರೈಸಸ್ ಷೇರು ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಎಲ್ಲ ಕಂಪನಿಗಳ ಷೇರುಗಳು ಶುಕ್ರವಾರದ ವಹಿವಾಟಿನಲ್ಲಿ ಕುಸಿತ ದಾಖಲಿಸಿದವು. ಅದಾನಿ ಎಂಟರ್‌ಪ್ರೈಸಸ್ ಷೇರು ಮೌಲ್ಯವು ಶೇಕಡ 7ರಷ್ಟು ಕುಸಿಯಿತು.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹದ ವಿರುದ್ಧ ಕೆಲವು ಆರೋಪಗಳನ್ನು ಹೊರಿಸಿದ ನಂತರದಲ್ಲಿ, ಸಮೂಹವು ಅಮೆರಿಕದಲ್ಲಿನ ತನ್ನ ಹೂಡಿಕೆದಾರರಿಗೆ ಕೆಲವು ವಿವರಣೆಗಳನ್ನು ನೀಡಿದೆ. ಈ ವಿವರಣೆಗಳ ಬಗ್ಗೆ ಅಮೆರಿಕದ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ ಎಂಬ ವರದಿಗಳು ಪ್ರಕಟವಾದ ಸಂದರ್ಭದಲ್ಲಿಯೇ, ಷೇರುಮೌಲ್ಯ ಕುಸಿದಿದೆ.

'ಷೇರು ಮಾರುಕಟ್ಟೆಯಲ್ಲಿ ಲಾಭ ಗಳಿಕೆಯ ವಹಿವಾಟು ನಡೆದಿದೆ. ಈ ಸಂದರ್ಭದಲ್ಲಿ ಅದಾನಿ ಸಮೂಹದ ಷೇರುಗಳ ಮಾರಾಟ ಕೂಡ ಜಾಸ್ತಿ ಆಗಿದೆ. ಅಮೆರಿಕದಲ್ಲಿ ಈ ಸಮೂಹದ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಎಂಬ ಸುದ್ದಿಯು ಸಮೂಹಕ್ಕೆ ಸೇರಿದ ಕಂಪನಿಗಳ ಷೇರುಮೌಲ್ಯ ಕುಸಿತಕ್ಕೆ ಒಂದು ಕಾರಣ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಣ್ಣ ಹೂಡಿಕೆಗಳ ವಿಭಾಗದ ಮುಖ್ಯಸ್ಥ ದೀಪಕ್ ಜಸನಿ ಹೇಳಿದ್ದಾರೆ.

ವಿದ್ಯುತ್: ಹಗಲಿನಲ್ಲಿ ಅಗ್ಗ, ರಾತ್ರಿ ತುಟ್ಟಿ

ಒಂದನೇ ಪುಟದಿಂದ

ವಾಷಿಂಗ್ ಮೆಷಿನ್ ಬಳಸಿ ಬಟ್ಟೆ ತೊಳೆಯುವುದು ಅಥವಾ ವಿದ್ಯುತ್ ಬೇಕಿರುವ ಇತರ ಕೆಲವು ಕೆಲಸಗಳನ್ನು ಹಗಲು ಹೊತ್ತಿನಲ್ಲಿ ಮಾಡಿಕೊಂಡರೆ, ವಿದ್ಯುತ್ ಬಳಕೆ ಶುಲ್ಕವನ್ನು ತಗ್ಗಿಸಲು ಸಾಧ್ಯವಾಗುತ್ತದೆ.

ಈ ಮಾರ್ಚ್‌ನಲ್ಲಿ ದೇಶದಲ್ಲಿ ವಿದ್ಯುತ್ ಕೊರತೆ ತೀವ್ರವಾಗಿತ್ತು. ಹಲವು ಭಾಗಗಳಲ್ಲಿ ಬಿಸಿಗಾಳಿಯ ಸಮಸ್ಯೆಯಿಂದಾಗಿ ವಿದ್ಯುತ್ ಬೇಡಿಕೆ ಹೆಚ್ಚಾಗಿತ್ತು. ಆರ್ಥಿಕ ಚಟುವಟಿಕೆಗಳು ಚುರುಕು ಪಡೆದುಕೊಂಡಿದ್ದರಿಂದಲೂ ವಿದ್ಯುತ್ ಬೇಡಿಕೆ ಹೆಚ್ಚಾಯಿತು. ಇದರಿಂದಾಗಿ ಬೇಡಿಕೆಗೆ ತಕ್ಕಷ್ಟು ವಿದ್ಯುತ್ ಪೂರೈಸಲು ಆಗಿರಲಿಲ್ಲ. 'ಸೌರವಿದ್ಯುತ್ ಕಡಿಮೆ ವೆಚ್ಚದ್ದಾಗಿರುವ ಕಾರಣ, ಹಗಲು ಹೊತ್ತಿನಲ್ಲಿ ವಿದ್ಯುತ್ ಶುಲ್ಕ ಕಡಿಮೆಯಾಗಿರುತ್ತದೆ. ಇದು ಗ್ರಾಹಕರಿಗೆ ಪ್ರಯೋಜನಕಾರಿ ಆಗುತ್ತದೆ' ಎಂದು ಕೇಂದ್ರ ಇಂಧನ ಸಚಿವ ಆರ್.ಕೆ. ಸಿಂಗ್ ಹೇಳಿದ್ದಾರೆ.

ಏನೆಲ್ಲ ಬದಲಾವಣೆ?

ವಿದ್ಯುತ್ (ಗ್ರಾಹಕರ ಹಕ್ಕುಗಳು) ನಿಯಮ 2020ಕ್ಕೆ ತಿದ್ದುಪಡಿ ತಂದು ಈ ಬದಲಾವಣೆಗಳನ್ನು ಮಾಡಲಾಗಿದೆ.

1. ಹೊಸ ಶುಲ್ಕ ವ್ಯವಸ್ಥೆಯಲ್ಲಿ, ಹಗಲಿನ ಎಂಟು ತಾಸುಗಳ ಅವಧಿಯಲ್ಲಿ ಶುಲ್ಕವು ವಾಡಿಕೆಗಿಂತ ಕಡಿಮೆ ಇರಲಿದೆ. ದಿನದ ಯಾವ ಎಂಟು ತಾಸುಗಳ ಅವಧಿಯಲ್ಲಿ ಶುಲ್ಕ ಕಡಿಮೆ ಇರಬೇಕು ಎಂಬುದನ್ನು ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗವು ತೀರ್ಮಾನಿಸುತ್ತದೆ.

2. ಗರಿಷ್ಠ 10 ಕಿಲೊವಾಟ್ ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯುತ್ ಬೇಡಿಕೆ ಇರುವ ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ಹೊಸ ನಿಯಮವು 2024ರ ಏಪ್ರಿಲ್ 1ರಿಂದ ಅನ್ವಯವಾಗುತ್ತದೆ. ಇತರ ಎಲ್ಲರಿಗೆ ಇದು 2025ರ ಏಪ್ರಿಲ್ 1ರೊಳಗೆ ಅನ್ವಯವಾಗಲಿದೆ. ಕೃಷಿ ಬಳಕೆಯ ವಿದ್ಯುತ್‌ಗೆ ಈ ಬಗೆಯ ಶುಲ್ಕ ವ್ಯವಸ್ಥೆಯಿಂದ ವಿನಾಯಿತಿ ಇರಲಿದೆ.

3. ಹೊಸ ವ್ಯವಸ್ಥೆಯಲ್ಲಿ ಹಗಲು ಹೊತ್ತು, ಬೇಡಿಕೆ ಹೆಚ್ಚಿರುವ ಹೊತ್ತು ಹಾಗೂ ಮಾಮೂಲಿ ಹೊತ್ತಿನಲ್ಲಿ ಪ್ರತ್ಯೇಕ ಶುಲ್ಕ ನಿಗದಿಯಾಗಿರುತ್ತದೆ. ಗ್ರಾಹಕರು ತಾವು ವಿದ್ಯುತ್ ಬಳಸುವ ರೀತಿಯನ್ನು ಮರುಹೊಂದಾಣಿಕೆ ಮಾಡಿಕೊಂಡು, ಒಟ್ಟು ಶುಲ್ಕದ ಹೊರೆಯನ್ನು ತಗ್ಗಿಸಿಕೊಳ್ಳಬಹುದು ಎಂದು ಇಂಧನ ಸಚಿವ ಆರ್.ಕೆ. ಸಿಂಗ್ ಹೇಳಿದ್ದಾರೆ.

4. ವಾಣಿಜ್ಯ ಹಾಗೂ ಕೈಗಾರಿಕಾ ಗ್ರಾಹಕರಿಗೆ ಬೇರೆ ಬೇರೆ ಹೊತ್ತುಗಳಲ್ಲಿ ಬೇರೆ ಬೇರೆ ಬಗೆಯಲ್ಲಿ ಶುಲ್ಕ ವಿಧಿಸುವ ಪದ್ಧತಿಯನ್ನು ಹಲವು ರಾಜ್ಯಗಳಲ್ಲಿ ಜಾರಿಗೆ ತಂದಾಗಿದೆ. ಸ್ಮಾರ್ಟ್ ಮೀಟರ್ ಅಳವಡಿಸಿ, ಈ ವ್ಯವಸ್ಥೆಯನ್ನು ಮನೆಬಳಕೆಗೂ ಅನ್ವಯ ಮಾಡಲಾಗುತ್ತಿದೆ ಎಂದು ಸಚಿವಾಲಯ ಹೇಳಿದೆ.

5. ಗ್ರಾಹಕರಿಗೆ ತೊಂದರೆ ಆಗುವುದನ್ನು ತಪ್ಪಿಸಲು, ಅನುಮತಿ ನೀಡಿರುವ ಮಿತಿಗಿಂತ ಹೆಚ್ಚಿನ ಲೋಡ್ ಬಳಸುವ ಗ್ರಾಹಕರಿಗೆ ದಂಡವನ್ನು ತಗ್ಗಿಸಲಾಗಿದೆ.

6 ವ್ಯಾಜ್ಯಗಳ ಇತ್ಯರ್ಥಕ್ಕೆ ಭಾರತ – ಅಮೆರಿಕ ಒಪ್ಪಿಗೆ

ಒಂದನೇ ಪುಟದಿಂದ

ಉಕ್ಕು ಮತ್ತು ಅಲ್ಯುಮಿನಿಯಂ ಮೇಲಿನ ಸುಂಕಕ್ಕೆ ಸಂಬಂಧಿಸಿದಂತೆ, ಕೆಲವು ಉತ್ಪನ್ನಗಳನ್ನು ಗರಿಷ್ಠ ಸುಂಕದ ಪಟ್ಟಿಯಿಂದ ಕೈಬಿಡುವಂತೆ ಭಾರತದ ಕಂಪನಿಗಳು ಒತ್ತಾಯಿಸಿವೆ. ಇದಕ್ಕೆ ಸಂಬಂಧಿಸಿದಂತೆ ಭಾರತದಿಂದ ಆಮದಾಗುವ ಶೇ 70ರಷ್ಟು ಉಕ್ಕಿನ ಉತ್ಪನ್ನಗಳು ಮತ್ತು ಶೇ 80ರಷ್ಟು ಅಲ್ಯುಮಿನಿಯಂ ಉತ್ಪನ್ನಗಳನ್ನು ಗರಿಷ್ಠ ಸುಂಕದಿಂದ ಹೊರಗಿಡುವುದಾಗಿ ಅಮೆರಿಕದ ಭರವಸೆ ನೀಡಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

ಬಿಂದು: ಮೂರು ಉತ್ಪನ್ನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಭಾರತದ ಹೆಸರಾಂತ ತಿನಿಸು ಮತ್ತು ಪಾನೀಯ ಕಂಪನಿ, ಪುತ್ತೂರು ಮೂಲದ ಎಸ್. ಜಿ. ಕಾರ್ಪೊರೇಟ್ಸ್ (ಬಿಂದು) ಮೂರು ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಟ ರಮೇಶ್ ಅರವಿಂದ್ ಅವರು ಸ್ನ್ಯಾಕ್ ಅಪ್ ಮಸಾಲಾ ಮೂಂಗ್ ದಾಲ್, ಸ್ನ್ಯಾಕ್ ಅಪ್ ಚಾಕೊಲೇಟ್ ಕೋನ್, ಸ್ನ್ಯಾಕ್ ಅಪ್ ಪಾಸ್ತಾ ಫಿಂಗರ್ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದಾರೆ.

ಎಸ್.ಜಿ. ಕಾರ್ಪೊರೇಟ್ಸ್ ಸಂಸ್ಥೆಯ ಎಂ.ಡಿ. ಸತ್ಯಶಂಕರ್ ಭಟ್ ಮಾತನಾಡಿ, '2026ರೊಳಗೆ ಸ್ನ್ಯಾಕ್ ಅಪ್ ವಿಭಾಗದಲ್ಲಿ ₹100 ಕೋಟಿ ವ್ಯವಹಾರದ ಗುರಿ ಹೊಂದಲಾಗಿದೆ' ಎಂದರು.

ಮಣಿಪುರ: ಇಂಫಾಲ್ ಚುರಚಾಂದಪುರಕ್ಕೆ ಎಸ್‌ಐಟಿ ಭೇಟಿ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಗಲಭೆ ವೇಳೆ ಶಸ್ತ್ರಾಗಾರದಿಂದ ಆಯುಧಗಳನ್ನು ದೋಚಲಾಗಿದೆ ಎಂಬ ಆರೋಪಗಳ ಕುರಿತು ತನಿಖೆ ನಡೆಸುತ್ತಿರುವ ಸಿಬಿಐನ ವಿಶೇಷ ತನಿಖಾ ತಂಡ (ಎಸ್‌ಐಟಿ), ಇಂಫಾಲ್ ಮತ್ತು ಚುರಚಾಂದಪುರದಲ್ಲಿ ಹಿಂಸಾಚಾರ ನಡೆದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯದ (ಸಿಎಫ್‌ಎಸ್‌ಎಲ್) ತಜ್ಞರ ತಂಡ ಕೂಡ ಭೇಟಿ ನೀಡಿದೆ ಎಂದು ತಿಳಿಸಿದ್ದಾರೆ. 'ನಗರಗಳ ವಿವಿಧ ಸ್ಥಳಗಳಿಗೆ ಭೇಟಿ ನೀಡಲು ತೆರಳಿದ್ದ ತಂಡಕ್ಕೆ, ಪಂಗೆಯಿ ಪಟ್ಟಣದ ಬಳಿ ಮಹಿಳೆಯರ ಗುಂಪೊಂದು ಗುರುವಾರ ಪ್ರತಿರೋಧ ಒಡ್ಡಿತ್ತು. ಮಹಿಳೆಯರು ರಸ್ತೆ ಬಂದ್ ಮಾಡಿ ಪ್ರತಿಭಟಿಸಿದರು. ಆದರೆ, ಮನವೊಲಿಸಿದ ನಂತರ ಮಹಿಳೆಯರು ಪ್ರತಿಭಟನೆ ಹಿಂಪಡೆದರು. ತಂಡವು ಪರಿಶೀಲನೆ ನಡೆಸಿ ಹಿಂದಿರುಗಿತು' ಎಂದು ಹೇಳಿದ್ದಾರೆ.

ಚೀನಾ ನಡೆ: ಕಣ್ಗಾವಲಿಗೆ ಸಹಕಾರ

ಒಂದನೇ ಪುಟದಿಂದ

ರಕ್ಷಣಾ ಪರಿಕರಗಳಿಗಾಗಿ ಭಾರತವು ರಷ್ಯಾವನ್ನು ಹೆಚ್ಚು ಅವಲಂಬಿಸಬಾರದು ಎಂಬುದರ ಖಾತರಿ ಕ್ರಮವಾಗಿ, ಭಾರತ ಜೊತೆಗಿನ ರಕ್ಷಣಾ ಸಹಕಾರಕ್ಕೆ ಇದ್ದ ತೊಡಕುಗಳನ್ನು ಗಣನೀಯವಾಗಿ ನಿವಾರಿಸಲು ಅಮೆರಿಕ ಸಮ್ಮತಿಸಿದೆ.

ಉಭಯ ನಾಯಕರ ಭೇಟಿಯ ನಂತರ ಬಿಡುಗಡೆ ಮಾಡಲಾದ ಜಂಟಿ ಹೇಳಿಕೆಯ ಪ್ರಕಾರ, ಸಹಕಾರ ಕ್ಷೇತ್ರದ ನೀಲನಕ್ಷೆಯು, ರಕ್ಷಣಾ ಪರಿಕರಗಳ ಜಂಟಿ ಉತ್ಪಾದನೆ, ಸಂಶೋಧನೆ, ಪರೀಕ್ಷೆ ಕುರಿತ ನೀತಿ ರೂಪಿಸಲು ಸ್ಪಷ್ಟ ಮಾರ್ಗಸೂಚಿಯಾಗಿರಲಿದೆ ಎಂದು ತಿಳಿಸಿದೆ.

2016–17ರಲ್ಲಿ ₹1,521 ಕೋಟಿ ಇದ್ದ ಭಾರತದ ರಕ್ಷಣಾ ರಫ್ತು ಪ್ರಮಾಣವು 2023–24ರಲ್ಲಿ ₹ 15,920 ಕೋಟಿಗೆ ಏರಿದೆ. 2025ರ ವೇಳೆಗೆ ರಕ್ಷಣಾ ಉತ್ಪಾದನಾ ಗುರಿ ₹175 ಲಕ್ಷ ಕೋಟಿ ಎಂದು ಮೋದಿ ಸರ್ಕಾರ ನಿಗದಿಪಡಿಸಿದೆ. ರಫ್ತು ಪ್ರಮಾಣದ ಗುರಿಯನ್ನೇ ₹ 35 ಸಾವಿರ ಕೋಟಿಗೆ ನಿಗದಿಪಡಿಸಿದೆ.

ರಕ್ಷಣಾ ಸಹಕಾರ ಕುರಿತ ಹೊಸ ಪರಿಕ್ರಮಗಳು ಭಾರತ ಮತ್ತು ಅಮೆರಿಕ ನಡುವೆ ರಕ್ಷಣಾ ಪರಿಕರಗಳ ಪೂರೈಕೆ ಪ್ರಮಾಣವನ್ನು ಹೆಚ್ಚಿಸಲಿವೆ ಎಂದು ಮೋದಿ–ಬೈಡನ್ ಭೇಟಿ ಬಳಿಕ ನೀಡಲಾದ ಹೇಳಿಕೆಯಲ್ಲಿ ಸರ್ಕಾರ ತಿಳಿಸಿದೆ.

ಫ್ಯಾಷನ್ ಫ್ಯಾಕ್ಟರಿಯಲ್ಲಿ ವಿನಿಮಯ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ರಿಟೇಲ್‌ಗೆ ಸೇರಿರುವ 'ಫ್ಯಾಷನ್ ಫ್ಯಾಕ್ಟರಿ' ದೇಶದಾದ್ಯಂತ ರಿಯಾಯಿತಿ ಮಾರಾಟ ಮೇಳ ಆಯೋಜಿಸಿದೆ. ಗ್ರಾಹಕರು ತಮ್ಮಲ್ಲಿನ ಯಾವುದೇ ಅನ್‌ಬ್ರ್ಯಾಂಡೆಡ್ ಬಟ್ಟೆ, ಶೂ ಇತ್ಯಾದಿಗಳನ್ನು ಫ್ಯಾಷನ್ ಫ್ಯಾಕ್ಟರಿಯಲ್ಲಿನ ಬ್ರ್ಯಾಂಡೆಡ್ ಬಟ್ಟೆ, ಶೂ ಇತ್ಯಾದಿಗಳ ಜೊತೆ ವಿನಿಮಯ ಮಾಡಿಕೊಳ್ಳಬಹುದು.

ವಿನಿಮಯದ ಸಂದರ್ಭದಲ್ಲಿ ಹಳೆಯ ವಸ್ತುಗಳಿಗೆ ಉತ್ತಮ ಬೆಲೆ ಸಿಗುತ್ತದೆ, ಜೊತೆಗೆ ಹೊಸ ಉತ್ಪನ್ನಗಳಿಗೆ ಉತ್ತಮ ರಿಯಾಯಿತಿಯೂ ಲಭ್ಯ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ವಿನಿಮಯ ಉತ್ಸವವು ಜೂನ್ 25ರವರೆಗೆ ಎಲ್ಲ ಮಳಿಗೆಗಳಲ್ಲಿ ಚಾಲ್ತಿಯಲ್ಲಿ ಇರುತ್ತದೆ.

ಡೆನಿಮ್ ಮೇಲೆ ₹400 ಮೌಲ್ಯದ ವಿನಿಮಯ ಕೂಪನ್, ಶೂಗಳ ಮೇಲೆ ₹300, ಶರ್ಟ್ ಮೇಲೆ ₹250 ಮತ್ತು ಟಿ–ಶರ್ಟ್ ಮೇಲೆ ₹150ರ ವಿನಿಮಯ ಕೂಪನ್ ಸಿಗುತ್ತದೆ.

ಮುಂಬೈ ಧಾರಣೆ

ಶೇಂಗಾ

23-6-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650(1660)
ಒಂದು ವಾರದ ಡೆಲಿವರಿ	1645(1655)
ಸೋಯಾ ಕಚ್ಚಾ	865(862)
ಪಾಮ್ ವಾರದ ಡೆಲಿವರಿ	838(830)
ಸೂರ್ಯಕಾಂತಿ ಎಣ್ಣೆ ಕಚ್ಚಾ	820(820)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	58,350 (58,300)
ಬೆಳ್ಳಿ ಕೆ.ಜಿ	68,350 (68,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-41500
ಹಳತು	48000-50500
ಭದ್ರಾವತಿ	
ರಾಶಿ	44199-52699
ಹೊನ್ನಾಳಿ	
ರಾಶಿ	52699-52699
ಕುಮಟಾ	
ಚಿಪ್ಪು	29999-33099
ಕೋಕ	21019-33019
ಹಳೆಚಾಲಿ	37899-39899
ಹೊಸಚಾಲಿ	36899-39312
ಹೊಸನಗರ	
ಬಿಳಿಗೋಟು	29009-30609
ಚಾಲಿ	32119-37909
ಕೆಂಪುಗೋಟು	29899-38611
ರಾಶಿ	45211-53599
ಸಿಪ್ಪೆಗೋಟು	18599-18599
ಶಿವಮೊಗ್ಗ	
ಗೊರಬಲು	17009-40089
ರಾಶಿ	39516-53899
ಸರಕು	55619-87540
ಸಿದ್ದಾಪುರ	
ಬಿಳಿಗೋಟು	30299-33399
ಚಾಲಿ	36509-39222
ಕೋಕ	28899-33099
ಕೆಂಪುಗೋಟು	32289-33119
ರಾಶಿ	43309-49899
ತಟ್ಟಿಬೆಟ್ಟೆ	39299-45099
ಶಿರಸಿ	
ಬೆಟ್ಟೆ	38718-48119
ಬಿಳಿಗೋಟು	25799-34200
ಚಾಲಿ	36298-41511
ಕೆಂಪುಗೋಟು	24399-38129
ರಾಶಿ	47399-51508
ತುಮಕೂರು	
ರಾಶಿ	42400-43100
ಯಲ್ಲಾಪುರ	
ಬಿಳಿಗೋಟು	28612-35299
ಚಾಲಿ	35823-39699
ಕೋಕ	18899-33699
ಕೆಂಪುಗೋಟು	31012-35969
ರಾಶಿ	43090-54800
ತಟ್ಟಿಬೆಟ್ಟೆ	40099-48369

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14900	14900	14900	170.25
ಎಸಿ	7980	7800	7600	
ಆರ್‌ಪಿ	10800	10800	10700	ಲಂಡನ್
ಆರ್‌ಸಿ	6360	254 on OT	6200	2793 ಡಾಲರ್ಸ್

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹215-470
ದ್ವಿತಳಿ (ಬಿ.ವಿ)	₹222-555

ರಾಜ್ಯದ ವಿವಿಧ ಠಾಣೆಗಳಲ್ಲಿ ಎಫ್‌ಐಆರ್ • ಆರೋಪಿ ರಕ್ಷಣೆಗೆ ಪ್ರಭಾವಿಗಳ ಒತ್ತಡ– ಆರೋಪ

ಗಂಗಾ ಕಲ್ಯಾಣ: ತನಿಖೆಗೆ ಹಿಂದೇಟು

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ರೂಪಿಸಿದ್ದ ಗಂಗಾ ಕಲ್ಯಾಣ ಯೋಜನೆಯಲ್ಲಿ ನಡೆದಿರುವ ಅಕ್ರಮದ ತನಿಖೆಯನ್ನು ಸಿಐಡಿಗೆ ವಹಿಸಲು ರಾಜ್ಯ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಜಾರಿಗೆ ತರಲಾಗಿದ್ದ ಗಂಗಾ ಕಲ್ಯಾಣ ಯೋಜನೆಯಲ್ಲಿ 2019–20 ಹಾಗೂ 2020–21ನೇ ಸಾಲಿನಲ್ಲಾದ ಅಕ್ರಮಗಳ ಬಗ್ಗೆ ಬೆಂಗಳೂರಿನ ವಿಧಾನಸೌಧ ಠಾಣೆ ಸೇರಿದಂತೆ ರಾಜ್ಯದ ವಿವಿಧ ಠಾಣೆಗಳಲ್ಲಿ ಈಗಾಗಲೇ ಎಫ್‌ಐಆರ್‌ಗಳು ದಾಖಲಾಗಿವೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ರೀತಿ ಅಕ್ರಮ ನಡೆದಿದೆ ಎಂದು ಕಾಂಗ್ರೆಸ್ ನಾಯಕರು ಆಪಾದಿಸಿದ್ದರು. ವಿಧಾನಮಂಡಲ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆಯಾಗಿ, ಹಗರಣದ ತನಿಖೆಯನ್ನು ಸಿಐಡಿಗೆ ವಹಿಸುವುದಾಗಿ ಅಂದಿನ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದ್ದರು. ಹಿಂದೆ ಹಗರಣದ ಆರೋಪ ಮಾಡಿದ್ದ ಕಾಂಗ್ರೆಸ್, ಈಗ ಸರ್ಕಾರ ನಡೆಸುತ್ತಿದೆ. ಹಾಗಿದ್ದರೂ, ಗಂಗಾ ಕಲ್ಯಾಣ ಅಕ್ರಮದ ತನಿಖೆಯನ್ನು ಸಿಐಡಿಗೆ ವಹಿಸುವ ಸಂಬಂಧ ಇದುವರೆಗೂ ಆದೇಶ ಹೊರಡಿಸಿಲ್ಲ.

'ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಅಕ್ರಮ ನಡೆದಿರುವುದು ಆಂತರಿಕ ತನಿಖೆಯಿಂದ ಪತ್ತೆಯಾಗಿತ್ತು. ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಸಿಐಡಿಗೆ ವಹಿಸುವಂತೆ ಬಿಜೆಪಿ ಸರ್ಕಾರವಿದ್ದಾಗ, ಗೃಹ ಇಲಾಖೆಗೆ ಪತ್ರ ಬರೆಯಲಾಗಿತ್ತು. ಅದಕ್ಕೆ ಯಾವುದೇ ಉತ್ತರ ಸಿಕ್ಕಿಲ್ಲ. ಇಂದಿಗೂ ಗೃಹ ಇಲಾಖೆಯಲ್ಲೇ ಸಿಐಡಿ ತನಿಖೆ ಕಡತವಿದೆ' ಎಂದು ಇಲಾಖೆಯ ಮೂಲಗಳು ಹೇಳಿವೆ.

'ಅಕ್ರಮದ ಆರೋಪಿಗಳ ಪರವಾಗಿ ಪ್ರಭಾವಿಗಳು ಕೆಲಸ ಮಾಡುತ್ತಿದ್ದಾರೆ. ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸದಂತೆ ಅಂದಿನ ಬಿಜೆಪಿ ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಇಂದಿನ ಕಾಂಗ್ರೆಸ್ ಸರ್ಕಾರದ ಮೇಲೂ ಅವರು ಪ್ರಭಾವ ಬೀರುತ್ತಿದ್ದಾರೆ. ಹೀಗಾಗಿ, ಸಿಐಡಿ ತನಿಖೆಗೆ ಆದೇಶ ಹೊರಡಿಸಲು ಹಿಂದೇಟು ಹಾಕಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಪೊಲೀಸರ ಪ್ರಸ್ತಾವಕ್ಕೆ ಕಿಮ್ಮತ್ತಿಲ್ಲ: ಗಂಗಾ ಕಲ್ಯಾಣ ಯೋಜನೆ ಅಕ್ರಮದ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸುವ ಸಂಬಂಧ ಗೃಹ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದಾರೆ. ಅದಕ್ಕೆ ಪ್ರತಿಕ್ರಿಯೆ ನೀಡದ ಗೃಹ ಇಲಾಖೆ, ಆದೇಶ ಹೊರಡಿಸಲು ವಿಳಂಬ ತೋರುತ್ತಿದೆ.

ಗೃಹ ಇಲಾಖೆಯ ಮೌನದಿಂದಾಗಿ ಪ್ರಕರಣದ ತನಿಖೆಯನ್ನು ತಾವೇ ನಡೆಸಬೇಕಾ? ಅಥವಾ ಸಿಐಡಿ ಅಧಿಕಾರಿಗಳು ನಡೆಸುತ್ತಾರೆಯೇ? ಎಂಬ ಗೊಂದಲ ಸ್ಥಳೀಯ ಪೊಲೀಸರನ್ನು ಕಾಡುತ್ತಿದೆ.

'ಪ್ರಕರಣವನ್ನು ಸಿಐಡಿಗೆ ವಹಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಕೋರಿದ್ದಾರೆ. ಪ್ರಕರಣವು ಸಿಐಡಿ ತನಿಖೆಗೆ ಅರ್ಹವಾಗಿದ್ದು, ಈ ಬಗ್ಗೆ ಆದೇಶ ಹೊರಡಿಸಿ. ಕಡತಗಳನ್ನು ಸಿಐಡಿ ಅಧಿಕಾರಿಗಳಿಗೆ ಹಸ್ತಾಂತರಿಸುತ್ತೇವೆ' ಎಂದು ಪೊಲೀಸರು ಪ್ರಸ್ತಾವದಲ್ಲಿ ಹೇಳಿದ್ದಾರೆ.

'ಕಾನೂನು ಪ್ರಕಾರ ಪ್ರಸ್ತಾವ ಸಲ್ಲಿಸಲಾಗಿದೆ. ಅಧಿಕೃತ ಆದೇಶ ಹೊರಬಿದ್ದ ಬಳಿಕ ಪ್ರಕರಣದ ಕಡತಗಳನ್ನು ಸಿಐಡಿಗೆ ಹಸ್ತಾಂತರಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅಕ್ರಮದ ತನಿಖೆಯನ್ನು ಸಿಐಡಿಗೆ ವಹಿಸುವ ಸಂಬಂಧ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಗೃಹ ಸಚಿವ ಜಿ. ಪರಮೇಶ್ವರ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹಾಗೂ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಲಭ್ಯರಾಗಲಿಲ್ಲ.

'ಎಂ.ಡಿ ಭಾಗಿ; ಹಲವರಿಗೆ ಬಂಧನ ಭೀತಿ'

'ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಗಂಗಾ ಕಲ್ಯಾಣ ಸೇರಿದಂತೆ ವಿವಿಧ ಯೋಜನೆಗಳಲ್ಲಾದ ಅಕ್ರಮದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ರಾಜಕೀಯ ಮುಖಂಡರು ಭಾಗಿಯಾಗಿರುವ ಅನುಮಾನವಿದೆ. ಸಿಐಡಿ ತನಿಖೆ ಆರಂಭವಾದರೆ, ಅವರೆಲ್ಲರೂ ಬಂಧನವಾಗುತ್ತಾರೆ. ಅದೇ ಕಾರಣಕ್ಕೆ ಸಿಐಡಿ ತನಿಖೆ ತಡೆಯಲು ಹುನ್ನಾರ ನಡೆದಿದೆ' ಎಂದು ಇಲಾಖೆಯ ಮೂಲಗಳು ಹೇಳಿವೆ.

'ಅಂಬೇಡ್ಕರ್ ನಿಗಮ: ₹ 25 ಕೋಟಿ ಅಕ್ರಮ' ಶೀರ್ಷಿಕೆಯಡಿ 'ಪ್ರಜಾವಾಣಿ'ಯ 2022ರ ಡಿಸೆಂಬರ್ 22ರ ಸಂಚಿಕೆಯ ಮುಖಪುಟದಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು. ಭ್ರಷ್ಟಾಚಾರ, ಗಂಭೀರ ಸ್ವರೂಪದ ದುರ್ನಡತೆ ಮತ್ತು ಕರ್ತವ್ಯಲೋಪ ಆರೋಪದಲ್ಲಿ ಇಲಾಖಾ ವಿಚಾರಣೆ ಬಾಕಿ ಇರಿಸಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಕೆ.ಎಂ. ಸುರೇಶ್ ಕುಮಾರ್ ಅವರನ್ನು ಅಮಾನತು ಮಾಡಲಾಗಿತ್ತು.

ಹಜ್ ಯಾತ್ರೆ: ಸೌದಿ ಅರೇಬಿಯಾ ತಲುಪಿದ 15 ಲಕ್ಷ ವಿದೇಶಿ ಯಾತ್ರಿಕರು

ಮೆಕ್ಕಾ(ಎಪಿ): 'ಹಜ್ ಯಾತ್ರೆ ಹಿನ್ನೆಲೆಯಲ್ಲಿ ಇದುವರೆಗೆ 15 ಲಕ್ಷ ವಿದೇಶಿ ಯಾತ್ರಿಕರು ಸೌದಿ ಅರೇಬಿಯಾಗೆ ಬಂದಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದರು.

ಕೋವಿಡ್ ಹಿನ್ನೆಲೆಯಲ್ಲಿ 2020 ರಿಂದ ಹಜ್ ಯಾತ್ರೆಗೆ ಕೆಲವು ನಿರ್ಬಂಧ ವಿಧಿಸಲಾಗಿತ್ತು. ಆದರೆ, ಈ ಬಾರಿ ಯಾವುದೇ ನಿರ್ಬಂಧಗಳಿಲ್ಲದೇ ಹಜ್ ಯಾತ್ರೆ ನಡೆಯಲಿದೆ.

ಸೋಮವಾರದಿಂದ ಯಾತ್ರೆ ಆರಂಭವಾಗಲಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವ ನಿರೀಕ್ಷೆಯಿದೆ.

'ಕೋವಿಡ್‌ಗೂ ಮುಂಚೆ ಬರುತ್ತಿದ್ದ ಸಂಖ್ಯೆಯಷ್ಟು ಭಕ್ತರು ಈ ವರ್ಷ ಬರುವ ನಿರೀಕ್ಷೆಯಿದೆ. 2019ರಲ್ಲಿ 24 ಲಕ್ಷ ಮಂದಿ ಮುಸಲ್ಮಾನರು ಹಜ್ ಯಾತ್ರೆಗೆ ಬಂದಿದ್ದರು' ಎಂದು ಅಧಿಕಾರಿಗಳು ಹೇಳಿದರು.

ವೃದ್ಧೆ ಕೆನ್ನೆಗೆ ಹೊಡೆದ ಬಸ್ ನಿರ್ವಾಹಕಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕುಂದಗೋಳದಿಂದ ಹುಬ್ಬಳ್ಳಿಗೆ ಶುಕ್ರವಾರ ಬೆಳಿಗ್ಗೆ ಬರುತ್ತಿದ್ದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ವೃದ್ಧೆಯೊಬ್ಬರಿಗೆ ನಿರ್ವಾಹಕಿಯೊಬ್ಬರು ಕಪಾಳಕ್ಕೆ ಹೊಡೆದಿದ್ದಾರೆ.

ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಇತರ ಪ್ರಯಾಣಿಕರು ಈ ದೃಶ್ಯವನ್ನು ಮೊಬೈಲ್‌ನಲ್ಲಿ ವಿಡಿಯೊ ರೆಕಾರ್ಡ್ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.

ಬೆಳಿಗ್ಗೆ 7.30ರ ಸುಮಾರಿಗೆ ಬಸ್ ಶೆರೆವಾಡ ಬಳಿ ಬಂದಾಗ ಎಲ್ಲ ಪ್ರಯಾಣಿಕರಿಗೆ ಟಿಕೆಟ್ ಕೊಡಲು ಬಸ್ ನಿಲ್ಲಿಸಲಾಗಿತ್ತು. ಇದನ್ನು ಪ್ರಶ್ನಿಸಿದ ವೃದ್ಧೆ, ನಿರ್ವಾಹಕಿಯ ಜೊತೆ ವಾಗ್ವಾದ ನಡೆಸಿದರು. ತಮಗೆ ಬೇಗ ಹುಬ್ಬಳ್ಳಿಗೆ ಹೋಗಬೇಕಿದೆ. ಇಲ್ಲೇಕೆ ನಿಲ್ಲಿಸಿದೀರಿ ಎಂದು ಜಗಳ ಆರಂಭಿಸಿದರು. ಅವಾಚ್ಯ ಪದಗಳಿಂದ ನಿಂದಿಸಿದರು.

ಮಾತಿಗೆ ಮಾತು ಬೆಳೆದಾಗ ತಾಳ್ಮೆ ಕಳೆದುಕೊಂಡ ನಿರ್ವಾಹಕಿ ವೃದ್ಧೆಗೆ ಕಪಾಳ ಮೋಕ್ಷ ಮಾಡಿದರು.

ಕಾರಣ ಕೇಳಿ ನೋಟಿಸ್: 'ಪ್ರಕರಣ ಗಮನಕ್ಕೆ ಬಂದಿದೆ. ಶಕ್ತಿ ಯೋಜನೆಯಿಂದ ಪ್ರಯಾಣಿಕರ ದಟ್ಟಣೆ ಹೆಚ್ಚಿದೆ. ಮುಂದಿನ ನಿಲುಗಡೆ ಬರುವುದರೊಳಗೆ ಪ್ರಯಾಣಿಕರಿಗೆ ಟಿಕೆಟ್ ಕೊಡುವ ಒತ್ತಡ ನಿರ್ವಾಹಕರ ಮೇಲಿದೆ. ಆದರೂ ತಾಳ್ಮೆ ಕಾಯ್ದುಕೊಳ್ಳಬೇಕು. ನಿರ್ವಾಹಕಿಗೆ ಕಾರಣ ಕೇಳಿ ನೋಟಿಸ್ ಕೊಡಲಾಗುವುದು' ಎಂದು ಸಾರಿಗೆ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ರಾಮನಗೌಡರ ಹೇಳಿದರು.

ಟೈಟಾನಿಕ್ ಹಡಗಿನ ಅವಶೇಷಗಳತ್ತ ಹೋದ ಟೈಟನ್ ನೌಕೆ ಸ್ಫೋಟ

ಐವರು ಸಿರಿವಂತ ಸಾಹಸಿಗರ ದುರಂತ ಅಂತ್ಯ

ಬೋಸ್ಟನ್ (ಎಪಿ): ಅಟ್ಲಾಂಟಿಕ್ ಸಾಗರದಲ್ಲಿ ಶತಮಾನದ ಹಿಂದೆ ಮುಳುಗಿರುವ ಟೈಟಾನಿಕ್ ಹಡಗಿನ ಅವಶೇಷಗಳ ವೀಕ್ಷಣೆಗಾಗಿ ಐದು ದಿನಗಳ ಹಿಂದೆ ತೆರಳಿದಾಗ ಕಣ್ಮರೆಯಾಗಿದ್ದ ಟೈಟನ್ ಹೆಸರಿನ ಸಬ್‌ಮರ್ಸಿಬಲ್ ಪುಟ್ಟ ನೌಕೆ ಸ್ಫೋಟಗೊಂಡಿದ್ದು, ನೌಕೆಯಲ್ಲಿದ್ದ ಎಲ್ಲ ಐವರು ಸಾಹಸಯಾತ್ರಿಗಳು ಮೃತಪಟ್ಟಿದ್ದಾರೆ ಎಂದು ಅಮೆರಿಕದ ಕರಾವಳಿ ಕಾವಲು ಪಡೆ ಖಚಿತಪಡಿಸಿದೆ.

ಟೈಟಾನಿಕ್ ಹಡಗಿನ ಅವಶೇಷಗಳ ವೀಕ್ಷಣೆಗೆ ಓಷನ್‌ಗೇಟ್ ಎಕ್ಸ್‌ಪೆಡಿಷನ್ ಕಂಪನಿಯ ಸಿಇಒ ಸ್ಟಾಕ್‌ಟನ್ ರಷ್, ಭಾರತದಲ್ಲಿ ಚೀತಾ ಮರುಪರಿಚಯಿಸುವ ಯೋಜನೆಗೆ ಕೈಜೋಡಿಸಿದ್ದ ಬ್ರಿಟಿಷ್ ಉದ್ಯಮಿ ಹಮಿಷ್ ಹಾರ್ಡಿಂಗ್, ಪಾಲ್ ಹೆನ್ರಿ, ಪಾಕಿಸ್ತಾನಿ ಉದ್ಯಮಿ ಶಹಝಾದಾ ದಾವೂದ್ ಮತ್ತು ಅವರ ಮಗ ಸುಲೇಮಾನ್ ದಾವೂದ್ ಅವರು ಈ ಸಬ್‌ಮರ್ಸಿಬಲ್ ಟೈಟನ್ ನೌಕೆಯಲ್ಲಿ, 1912ರಲ್ಲಿ ದುರಂತಕ್ಕೀಡಾದ ಟೈಟಾನಿಕ್ ಹಡಗಿನ ಅವಶೇಷಗಳನ್ನು ನೋಡಲು ಭಾನುವಾರ ಅಟ್ಲಾಂಟಿಕ್ ಆಳ ಸಮುದ್ರದತ್ತ ಪ್ರಯಾಣಿಸಿದ್ದರು. ಓಷನ್‌ಗೇಟ್ ಎಕ್ಸ್‌ಪೆಡಿಷನ್ ಕಂಪನಿಯೇ ತನ್ನ ಟೈಟನ್ ನೌಕೆಯ ಮೂಲಕ ಈ ದುಬಾರಿ ಪ್ರವಾಸವನ್ನು ಮೂರನೇ ಬಾರಿಗೆ ಆಯೋಜಿಸಿತ್ತು.



ಹಮಿಷ್ ಹಾರ್ಡಿಂಗ್, ಸ್ಟಾಕ್‌ಟನ್ ರಷ್ (ಮೇಲಿನ ಚಿತ್ರಗಳು) ಪಾಲ್ ಹೆನ್ರಿ ನಾರ್ಗಿಯೊಲೆಟ್, ಸುಲೇಮಾನ್ ದಾವೂದ್ ಮತ್ತು ಶಹಝಾದಾ ದಾವೂದ್ (ಎಡದಿಂದ ಬಲಕ್ಕೆ) – ಎಎಫ್‌ಪಿ ಚಿತ್ರಗಳು

ನಿರಂತರ ಶೋಧದ ನಂತರ, ಟೈಟನ್ ನೌಕೆಯ ಅವಶೇಷಗಳು ಪತ್ತೆಯಾಗಿವೆ. ಸಾಗರದ ಒಳಗಡೆ ಟೈಟಾನಿಕ್ ಹಡಗಿನ ಅವಶೇಷಗಳ ಬಳಿಯೇ ಟೈಟನ್ ನೌಕೆಯು ಸ್ಫೋಟಗೊಂಡಿದೆ ಎಂದು ಅಮೆರಿಕ ಕರಾವಳಿ ಕಾವಲು ಪಡೆಯ ರಿಯರ್ ಅಡ್ಮಿರಲ್ ಜಾನ್ ಮೌಗರ್ ತಿಳಿಸಿದ್ದಾರೆ.

ಟೈಟನ್ ನೌಕೆಯ ಅವಶೇಷಗಳನ್ನು ಆಳ ಸಮುದ್ರದಲ್ಲಿ ಕಾರ್ಯಾಚರಣೆ ನಡೆಸುವ ರೋಬೊಟ್ ಮೂಲಕ ಪತ್ತೆಹಚ್ಚಲಾಗಿದೆ. ಈ ನೌಕೆಗೆ ನೀರಿನಾಳದಲ್ಲಿ ಏನಾಯಿತು ಎನ್ನುವುದನ್ನು ತಿಳಿಯುವ ಪ್ರಯತ್ನಗಳು ಪ್ರಗತಿಯಲ್ಲಿವೆ ಎಂದು ಅವರು ಹೇಳಿದ್ದಾರೆ.

ಟೈಟನ್ ನೌಕೆ ಆಳ ಸಮುದ್ರಕ್ಕೆ ಧುಮುಕಿದ ಕೇವಲ ಒಂದುಮುಕ್ಕಾಲು ತಾಸಿನಲ್ಲಿ ಮಾತ್ರ ನೌಕೆಯ ನಿಯಂತ್ರಣ ಸಂಪರ್ಕ ಕಳೆದುಕೊಂಡಿತ್ತು. ಕೇವಲ 96 ತಾಸು ಉಸಿರಾಡಲು ಆಗುವಷ್ಟು ಆಮ್ಲಜನಕವನ್ನಷ್ಟೇ ಹೊಂದಿದ್ದ ಈ ಪುಟ್ಟ ನೌಕೆಯಲ್ಲಿರುವವರನ್ನು ಸುರಕ್ಷಿತವಾಗಿ ಪಾರುಮಾಡಲು ಅಮೆರಿಕ, ಕೆನಡಾ, ಫ್ರಾನ್ಸ್, ಬ್ರಿಟನ್‌ನ ರಕ್ಷಣಾ ತಂಡಗಳು ತೀವ್ರ ಶೋಧ ಕಾರ್ಯ ನಡೆಸಿದ್ದವು.

ರಷ್ಯಾದ 13 ಕ್ರೂಸ್ ಕ್ಷಿಪಣಿ ಧ್ವಂಸ: ಉಕ್ರೇನ್

ಕೀವ್ (ಎಎಫ್‌ಪಿ): ದೇಶದ ಪಶ್ಚಿಮದಲ್ಲಿರುವ ಸೇನೆಯ ಪ್ರಮುಖ ವಾಯುನೆಲೆ ಗುರಿಯಾಗಿಸಿ ರಷ್ಯಾ ಸೇನೆ ಗುರುವಾರ ಮಧ್ಯರಾತ್ರಿ ಉಡಾಯಿಸಿದ 13 ಕ್ರೂಸ್ ಕ್ಷಿಪಣಿಗಳನ್ನು ವಾಯು ರಕ್ಷಣಾ ವ್ಯವಸ್ಥೆಯಿಂದ ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ಶುಕ್ರವಾರ ಹೇಳಿದೆ.

ಅಲ್ಲದೆ, ರಷ್ಯಾ ಪಡೆಗಳು ರಾತ್ರಿ ವೇಳೆ ಹಾರಿಸಿದ ಬೇಹುಗಾರಿಕೆ ಡ್ರೋನ್‌ಗಳನ್ನು ಧ್ವಂಸ ಮಾಡಲಾಗಿದೆ. ಈ ಬಾರಿ ರಷ್ಯಾದ ಕ್ರೂಸ್ ಕ್ಷಿಪಣಿಗಳ ಗುರಿ ಖ್ಮೆಲ್ನಿಟ್‌ಸ್ಕಿ ಪ್ರದೇಶದ ಸೇನಾ ವಾಯುನೆಲೆಯ ಮೇಲೆ ನೆಟ್ಟಿತ್ತು. ಕಳೆದ ಚಳಿಗಾಲದಿಂದಲೂ ರಷ್ಯಾ ಕ್ರೂಸ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳ ಮೂಲಕ ಸತತವಾಗಿ ವಾಯುದಾಳಿ ನಡೆಸುತ್ತಿದೆ ಎಂದು ಉಕ್ರೇನ್ ವಾಯುಪಡೆ ಹೇಳಿಕೆ ಬಿಡುಗಡೆ ಮಾಡಿದೆ.

ಸೆಮಿಗೆ ಮಣಿಕಾ– ಸತ್ಯನ್

ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿ

ನವದೆಹಲಿ (ಪಿಟಿಐ): ಭಾರತದ ಮಣಿಕಾ ಬಾತ್ರ ಮತ್ತು ಜಿ.ಸತ್ಯನ್ ಜೋಡಿ ಟುನೀಷಿಯಾದಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಮಿಕ್ಸಡ್ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು.

ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 11–8, 11–3, 11–8 ರಿಂದ ಜರ್ಮನಿಯ ಸೆಡ್ರಿಕ್ ಮೆಸ್ನೆರ್– ಯುವಾನ್ ವಾನ್ ಎದುರು ಗೆದ್ದಿತು. ನಾಲ್ಕರ ಘಟ್ಟದ ಪಂದ್ಯದಲ್ಲಿ ಅವರು ಕೊರಿಯಾದ ಶಿನ್ ಯುಬಿನ್– ಲಿಮ್ ಜಾಂಗ್‌ಹೂನ್ ವಿರುದ್ಧ ಪೈಪೋಟಿ ನಡೆಸುವರು.

ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಕೊನೆಗೊಂಡಿತು. ಪುರುಷರ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಹರ್ಮೀತ್ ದೇಸಾಯಿ 5-11, 6-11, 5-11 ರಿಂದ ಚೀನಾದ ಲಿಯಾಂಗ್ ಯಾನಿಂಗ್ ಕೈಯಲ್ಲಿ ಪರಾಭವಗೊಂಡರು. ಅಚಂತಾ ಶರತ್ ಕಮಲ್ ಮತ್ತು ಸತ್ಯನ್ ಅವರು ಮೊದಲ ಸುತ್ತಿನಲ್ಲೇ ಸೋತಿದ್ದರು.



ಮಣಿಕಾ ಬಾತ್ರ (ಎಡ) ಮತ್ತು ಜಿ.ಸತ್ಯನ್

ಮಹಿಳೆಯರ ಸಿಂಗಲ್ಸ್‌ನ 16ರ ಘಟ್ಟದ ಪಂದ್ಯದಲ್ಲಿ ಐಹಿಕಾ ಮುಖರ್ಜಿ 5–11, 9–11, 10–12 ರಲ್ಲಿ ಜಪಾನ್‌ನ ಮಿಯು ನಾಗಸಾಕಿ ಎದುರು ಮಣಿದರು. ಮಣಿಕಾ, ಶ್ರೀಜಾ ಅಕುಲಾ ಮತ್ತು ದಿಯಾ ಚಿತಾಳೆ ಮೊದಲ ಸುತ್ತಿನಲ್ಲಿ ಪರಾಭವಗೊಂಡಿದ್ದರು.

ತೈಪೆ ಓಪನ್: ಪ್ರಣಯ್ ಪರಾಭವ

ತೈಪೆ (ಪಿಟಿಐ): ಎಚ್.ಎಸ್. ಪ್ರಣಯ್ ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೋಲುವುದರೊಂದಿಗೆ, ತೈಪೆ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲಿಗೆ ತೆರೆಬಿತ್ತು.

ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ 9ನೇ ರ‍್ಯಾಂಕ್‌ನ ಆಟಗಾರ ಪ್ರಣಯ್ 19–21, 8–21 ರಲ್ಲಿ ಹಾಂಗ್‌ಕಾಂಗ್‌ನ ಆ್ಯಂಗಸ್ ಎಂಗ್ ಕಾ ಲಾಂಗ್ ಎದುರು ಪರಾಭವಗೊಂಡರು.

ಈ ಪಂದ್ಯಕ್ಕೂ ಮುನ್ನ ಪ್ರಣಯ್ ಅವರು ಎದುರಾಳಿ ವಿರುದ್ಧ 6–5 ಗೆಲುವಿನ ದಾಖಲೆ ಹೊಂದಿದ್ದರು. ಮೊದಲ ಗೇಮ್‌ನಲ್ಲಿ ಎದುರಾಳಿಗೆ ತಕ್ಕ ಪೈಪೋಟಿ ನೀಡಿದ ಭಾರತದ ಆಟಗಾರ, ಎರಡನೇ ಗೇಮ್‌ನಲ್ಲಿ ಹೆಚ್ಚಿನ ಪ್ರತಿರೋಧ ಒಡ್ಡಲು ವಿಫಲರಾದರು. ಆರಂಭಿಕ ಗೇಮ್‌ನಲ್ಲಿ ವಿರಾಮದ ವೇಳೆಗೆ ಪ್ರಣಯ್ 12–10 ರಲ್ಲಿ ಮುನ್ನಡೆ ಸಾಧಿಸಿದ್ದರು. ಆ ಬಳಿಕ ಆ್ಯಂಗಸ್, ಸತತ ಎರಡು ಪಾಯಿಂಟ್ಸ್ ಗಿಟ್ಟಿಸಿ 12–12 ರಲ್ಲಿ ಸಮಬಲ ಸಾಧಿಸಿದರು. ಅನಂತರ ಇಬ್ಬರೂ ಪಟ್ಟುಬಿಡದೆ ಪೈಪೋಟಿ ನಡೆಸಿದ್ದರಿಂದ 19–19 ರಲ್ಲಿ ಸಮಬಲ ಕಂಡುಬಂತು. ಈ ಹಂತದಲ್ಲಿ ಒತ್ತಡವನ್ನು ಬದಿಗೊತ್ತಿದ ಆ್ಯಂಗಸ್ ಎರಡು ಪಾಯಿಂಟ್ಸ್ ಗಳಿಸಿ ಗೆದ್ದರು.

ಎರಡನೇ ಗೇಮ್‌ನ ಆರಂಭದಲ್ಲೇ 7–2 ರಲ್ಲಿ ಮೇಲುಗೈ ಪಡೆದು, ಪ್ರಣಯ್ ಮೇಲೆ ಒತ್ತಡ ಹೇರಿದ ಹಾಂಗ್ ಕಾಂಗ್‌ನ ಆಟಗಾರ ಸುಲಭ ಗೆಲುವು ತಮ್ಮದಾಗಿಸಿದರು.



ವಿಶ್ವನಾಥನ್ ಆನಂದ್ ಮತ್ತು ಯಾನ್ ಕ್ರಿಸ್ಟೋಫ್ ದೂಡಾ –ಟ್ವಿಟ್ಟರ್ ಚಿತ್ರ

ಗ್ಲೋಬಲ್ ಚೆಸ್: ಕಾರ್ಲ್‌ಸನ್, ಆನಂದ್ ತಂಡಗಳ ಶುಭಾರಂಭ

ದುಬೈ (ಪಿಟಿಐ):ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ನೇತೃತ್ವದ ಎಸ್‌ಜಿ ಅಲ್‌ಪೈನ್ ವಾರಿಯರ್ಸ್ ತಂಡ, ಗ್ಲೋಬಲ್ ಚೆಸ್ ಲೀಗ್‌ನ ಎರಡನೇ ದಿನವಾದ ಶುಕ್ರವಾರ 9–7 ಪಾಯಿಂಟ್‌ಗಳಿಂದ ಬಾಲನ್ ಅಲಾಸ್ಕನ್ ನೈಟ್ಸ್ ವಿರುದ್ಧ ಜಯಗಳಿಸಿತು.

ಪ್ರಭಾವಶಾಲಿ ಆಟಗಾರರಾದ ನಾರ್ವೆಯ ಕಾರ್ಲ್‌ಸನ್ ಮತ್ತು ರಷ್ಯಾದ ನಿಪೊಮ್‌ನಿಯಾಷಿ (ಅಲಾಸ್ಕನ್ ನೈಟ್ಸ್) ನಡುವಣ ಪಂದ್ಯ ಡ್ರಾ ಆಯಿತು. ಆದರೆ ತೈಮೂರ್ ರಾಡ್ಯಾಬೋವ್ ಕಪ್ಪು ಕಾಯಿಗಳಲ್ಲಿ ಗೆದ್ದ ಕಾರಣ ಅಲಾಸ್ಕನ್ ತಂಡಕ್ಕೆ ಮುನ್ನಡೆ ದೊರೆಯಿತು. ನಂತರದ ಪಂದ್ಯಗಳಲ್ಲಿ ಅಲ್‌ಪೈನ್ ತಂಡದ ಇಬ್ಬರು ಆಟಗಾರರು ಜಯಗಳಿಸಿದ್ದರಿಂದ ತಂಡ ನಿರ್ಣಾಯಕ ಮುನ್ನಡೆ ಪಡೆಯಿತು.

ಗಂಗಾಸ್‌ಗೆ ಗೆಲುವು: ಮಾಜಿ ವಿಶ್ವ ಚಾಂಪಿಯನ್ನರಾದ ವಿಶ್ವನಾಥನ್ ಆನಂದ್ ಮತ್ತು ಹೌ ಯಿಫಾನ್ ಸುಲಭವಾಗಿ ಗೆಲ್ಲುವುದರೊಡನೆ, ಗಂಗಾಸ್ ಗ್ರ್ಯಾಂಡ್‌ಮಾಸ್ಟರ್ಸ್ ತಂಡ ಶುಭಾರಂಭ ಮಾಡಿತು.

ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಗಂಗಾಸ್ ತಂಡ 10–4 ಪಾಯಿಂಟ್‌ಗಳಿಂದ ಚಿಂಗಾರಿ ಗಲ್ಫ್ ಟೈಟನ್ಸ್ ತಂಡದ ಮೇಲೆ ಜಯ ಸಾಧಿಸಿತು.

ಬಿಳಿ ಕಾಯಿಗಳಲ್ಲಿ ಆಡುವ ಅನುಕೂಲದ ಜೊತೆ ಆನಂದ್ ತಮ್ಮ ಅನುಭವವನ್ನೂ ಬಳಸಿಕೊಂಡು, 2021ರ ವಿಶ್ವಕಪ್ ವಿಜೇತ ಯಾನ್ ಕ್ರಿಸ್ಟೋಫ್ ದೂಡಾ ಅವರನ್ನು ಸೋಲಿಸಿ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು.

ನಾಣ್ಯಚಿಮ್ಮುಗೆ (ಟಾಸ್) ನಡೆಸಿ ಬಿಳಿ ಮತ್ತು ಕಪ್ಪು ಕಾಯಿಗಳನ್ನು ಆಡುವ ತಂಡವನ್ನು ನಿರ್ಧರಿಸುವ ವ್ಯವಸ್ಥೆಯನ್ನು ಮೊದಲ ಬಾರಿ ಈ ಚೆಸ್ ಲೀಗ್‌ನಲ್ಲಿ ಪರಿಚಯಿಸಲಾಗಿದೆ.

ತಂಡದ ಎಲ್ಲ ಆಟಗಾರರೂ ಒಂದೇ ಬಣ್ಣದ ಕಾಯಿಗಳನ್ನು ಮುನ್ನಡೆಸಬೇಕಾಗುತ್ತದೆ.

ಮುಂಬಾ ಮಾಸ್ಟರ್ಸ್‌ಗೆ ಗೆಲುವು: 'ಟಾಸ್'ನಲ್ಲಿ ಸೋತು ಕಪ್ಪು ಕಾಯಿಗಳಲ್ಲಿ ಆಡಿದರೂ ಮುಂಬಾ ಮಾಸ್ಟರ್ಸ್ ತಂಡ ಗೆಲುವನ್ನು ಪಡೆಯಿತು. ಮುಂಬಾ ತಂಡವು ರಷ್ಯಾದ ಅನುಭವಿ ಆಟಗಾರ ಅಲೆಕ್ಸಾಂಡರ್ ಗ್ರಿಸ್ಚುಕ್ ಅವರ ಗೆಲುವಿನ ಬಲದಿಂದ 8–7ರಲ್ಲಿ ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ಮೇಲೆ ಜಯಗಳಿಸಿತು.

ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್: ಭಾರತ ತಂಡಕ್ಕೆ ಇಂದು ನೇಪಾಳ ಸವಾಲು

ಸತತ ಎರಡನೇ ಗೆಲುವಿನ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದ ವಿರುದ್ಧ ದೊರೆತ ಭರ್ಜರಿ ಗೆಲುವಿನ ಆತ್ಮವಿಶ್ವಾಸದಲ್ಲಿರುವ ಭಾರತ ತಂಡದವರು ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಎರಡನೇ ಪಂದ್ಯದಲ್ಲಿ ಶನಿವಾರ, ನೇಪಾಳ ವಿರುದ್ಧ ಹಣಾಹಣಿ ನಡೆಸಲಿದ್ದಾರೆ.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದಿದ್ದ ಪಂದ್ಯದಲ್ಲಿ ಸುನಿಲ್ ಚೆಟ್ರಿ ಬಳಗ 4–0 ಗೋಲುಗಳಿಂದ ಪಾಕ್ ತಂಡವನ್ನು ಮಣಿಸಿತ್ತು. ನೇಪಾಳ ವಿರುದ್ಧ ಗೆದ್ದರೆ, ಸೆಮಿಫೈನಲ್‌ನತ್ತ ಮತ್ತೊಂದು ಹೆಜ್ಜೆ ಇಡಲಿದೆ. 'ಎ' ಗುಂಪಿನಲ್ಲಿ ಭಾರತ ಮತ್ತು ಕುವೈತ್ ಒಂದು ಪಂದ್ಯ ಗೆದ್ದಿದ್ದು, ತಲಾ ಮೂರು ಪಾಯಿಂಟ್ಸ್ ಹೊಂದಿವೆ.

ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ನಾಯಕ ಚೆಟ್ರಿ, ಹ್ಯಾಟ್ರಿಕ್ ಗೋಲು ಗಳಿಸಿ ಮಿಂಚಿದ್ದರು. ಆಕ್ರಮಣ ಮತ್ತು ರಕ್ಷಣೆಯಲ್ಲಿ ಆತಿಥೇಯ ತಂಡ ಉತ್ತಮ ಆಟವಾಡಿತ್ತು. ನೇಪಾಳ ವಿರುದ್ಧವೂ ಅದೇ ಲಯವನ್ನು ಮುಂದುವರಿಸುವ ವಿಶ್ವಾಸದಲ್ಲಿ ಆಟಗಾರರು ಇದ್ದಾರೆ.

ಲಾಲ್‌ಲಿಯಾನ್‌ಜುವಾಲ ಚಾಂಗ್ಟೆ ಮತ್ತು ಆಶಿಖ್ ಕುರುಣಿಯನ್ ಮೊದಲ ಪಂದ್ಯದಲ್ಲಿ ಚೆಟ್ರಿಗೆ ತಕ್ಕ ಸಾಥ್ ನೀಡಿದ್ದರು. ಎರಡನೇ ಅವಧಿಯಲ್ಲಿ ಬದಲಿ ಆಟಗಾರನಾಗಿ ಬಂದು ಗೋಲು ಗಳಿಸಿದ್ದ ಉದಾಂತ ಸಿಂಗ್ ಕೂಡಾ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ತಾನಾಡಿದ ಕೊನೆಯ ಏಳು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತ, ಒಟ್ಟು 12 ಗೋಲುಗಳನ್ನು ಗಳಿಸಿದೆ. ಆದರೆ, ಎದುರಾಳಿಗಳಿಗೆ ಒಂದೂ ಗೋಲು ಗೋಲು ಬಿಟ್ಟುಕೊಟ್ಟಿಲ್ಲ. ರಕ್ಷಣಾ ವಿಭಾಗದ ಬಲ ಹೆಚ್ಚಿರುವುದಕ್ಕೆ ಇದು ಸಾಕ್ಷಿ. ಡಿಫೆಂಡರ್‌ಗಳಾದ ಸಂದೇಶ್ ಜಿಂಘಾನ್, ಅಮರಿಂದರ್ ಮತ್ತು ಅನ್ವರ್ ಅಲಿ ಅವರು ರಕ್ಷಣಾ ವಿಭಾಗಕ್ಕೆ ಬಲ ತುಂಬಿದ್ದಾರೆ.


ಭಾರತ ತಂಡದ ನಾಯಕ ಸುನಿಲ್ ಚೆಟ್ರಿ (ಬಲ) ಅವರು ಸಹ ಆಟಗಾರರೊಂದಿಗೆ ಶುಕ್ರವಾರ ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಮೊದಲ ಪಂದ್ಯದಲ್ಲಿ ಕುವೈತ್ ಕೈಯಲ್ಲಿ 1–3 ಗೋಲುಗಳಿಂದ ಸೋತಿದ್ದ ನೇಪಾಳ ತಂಡ ಪುಟಿದೇಳುವ ಪ್ರಯತ್ನದಲ್ಲಿದೆ. ಆದ್ದರಿಂದ ಚೆಟ್ರಿ ಬಳಗ, ಎದುರಾಳಿಗಳನ್ನು ಹಗುರವಾಗಿ ಪರಿಗಣಿಸಲು ಸಿದ್ಧವಿಲ್ಲ.

ಇಂದಿನ ಪಂದ್ಯಗಳು
ಪಾಕಿಸ್ತಾನ – ಕುವೈತ್
ಆರಂಭ: ಮಧ್ಯಾಹ್ನ 3.30
ಭಾರತ– ನೇಪಾಳ
ಆರಂಭ: ರಾತ್ರಿ 7.30

ಸ್ಟಿಮ್ಯಾಚ್ ಅಲಭ್ಯ: ಈ ಪಂದ್ಯದ ವೇಳೆ ಭಾರತ ತಂಡಕ್ಕೆ ಮುಖ್ಯ ಕೋಚ್ ಇಗೊರ್ ಸ್ಟಿಮ್ಯಾಚ್ ಅವರ ಮಾರ್ಗದರ್ಶನ ದೊರೆಯುತ್ತಿಲ್ಲ. ಪಾಕ್ ವಿರುದ್ಧದ ಪಂದ್ಯದಲ್ಲಿ ರೆಡ್ ಕಾರ್ಡ್ ಪಡೆದಿದ್ದರಿಂದ ಒಂದು ಪಂದ್ಯದ ನಿಷೇಧಕ್ಕೆ ಒಳಗಾಗಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಸಹಾಯಕ ಕೋಚ್ ಮಹೇಶ್ ಗಾವ್ಳಿ, ಡಗ್‌ಔಟ್ ಬಳಿ ನಿಂತು ಆಟಗಾರರಿಗೆ ಮಾರ್ಗದರ್ಶನ ನೀಡಲಿದ್ದಾರೆ.

ಬಲಾಬಲ: ಭಾರತ ತಂಡ ನೇಪಾಳದ ವಿರುದ್ಧ 16–2ರ ಗೆಲುವಿನ ದಾಖಲೆ ಹೊಂದಿದೆ. ಉಭಯ ತಂಡಗಳು ಒಟ್ಟು 23 ಬಾರಿ ಎದುರಾಗಿದ್ದು, ಐದು ಪಂದ್ಯಗಳು ಡ್ರಾ ಆಗಿವೆ. 2021ರ ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಪೈಪೋಟಿ ನಡೆಸಿದ್ದಾಗ, ಭಾರತ 3–0 ರಿಂದ ಗೆದ್ದಿತ್ತು.

ನೇರಪ್ರಸಾರ: ಫ್ಯಾನ್‌ಕೋಡ್ ಆ್ಯಪ್

'ಸ್ಟಿಮ್ಯಾಚ್ ಮೇಲೆ ಕಠಿಣ ಕ್ರಮ ಇಲ್ಲ'

ಬೆಂಗಳೂರು (ಪಿಟಿಐ): ಪಾಕಿಸ್ತಾನ ವಿರುದ್ಧದ ಪಂದ್ಯದ ವೇಳೆ ಅಶಿಸ್ತು ತೋರಿ ರೆಡ್ ಕಾರ್ಡ್ ಪಡೆದಿದ್ದ ಭಾರತ ತಂಡದ ಕೋಚ್ ಇಗೊರ್ ಸ್ಟಿಮ್ಯಾಚ್ ಅವರು ಹೆಚ್ಚಿನ ಪಂದ್ಯಗಳ ನಿಷೇಧಕ್ಕೆ ಒಳಗಾಗುವ ಅಪಾಯದಿಂದ ಪಾರಾಗಿದ್ದಾರೆ.

ರೆಡ್ ಕಾರ್ಡ್ ಪಡೆದವರು ಒಂದು ಪಂದ್ಯದ ನಿಷೇಧಕ್ಕೆ ಒಳಗಾಗುವರು. ಗಂಭೀರ ಸ್ವರೂಪದ ತಪ್ಪು ಮಾಡಿದ್ದರೆ ಒಂದಕ್ಕಿಂತ ಹೆಚ್ಚಿನ ಪಂದ್ಯಗಳ ನಿಷೇಧಕ್ಕೆ ಒಳಗಾಗುವರು.

'ಸ್ಟಿಮ್ಯಾಚ್ ಮಾಡಿರುವ ತಪ್ಪು, ಒಂದಕ್ಕಿಂತ ಹೆಚ್ಚಿನ ಪಂದ್ಯಗಳ ನಿಷೇಧ ಹೇರುವಷ್ಟು ಗಂಭೀರವಾದುದಲ್ಲ. ಪಂದ್ಯದ ರೆಫರಿ ಅವರ ವಿರುದ್ಧ ನೀಡಿರುವ ವರದಿಯನ್ನು ಸ್ಯಾಫ್ ಶಿಸ್ತು ಸಮಿತಿಯ ಮುಂದೆ ಇಡುವುದಿಲ್ಲ' ಎಂದು ದಕ್ಷಿಣ ಏಷ್ಯಾ ಫುಟ್‌ಬಾಲ್ ಫಡರೇಷನ್ ಪ್ರಧಾನ ಕಾರ್ಯದರ್ಶಿ ಅನ್ವರುಲ್ ಹಕ್ ತಿಳಿಸಿದ್ದಾರೆ.

ಪಾಕ್ ಆಟಗಾರ 'ಥ್ರೋ ಇನ್' ಮಾಡಲು ಮುಂದಾದಾಗ ಚೆಂಡನ್ನು ಕಸಿದುಕೊಂಡಿದ್ದಕ್ಕೆ, ಸ್ಟಿಮ್ಯಾಚ್‌ಗೆ ರೆಡ್ ಕಾರ್ಡ್ ನೀಡಲಾಗಿತ್ತು.

ಋತುರಾಜ್, ಯಶಸ್ವಿಗೆ ಅವಕಾಶ

ವೆಸ್ಟ್ ಇಂಡೀಸ್ ಪ್ರವಾಸ: ಪೂಜಾರ, ಉಮೇಶ್‌ಗೆ ಕೊಕ್

ನವದೆಹಲಿ (ಪಿಟಿಐ): ಯುವಪ್ರತಿಭೆಗಳಾದ ಋತುರಾಜ್ ಗಾಯಕವಾಡ್ ಮತ್ತು ಯಶಸ್ವಿ ಜೈಸ್ವಾಲ್ ಅವರಿಗೆ ಭಾರತ ಟೆಸ್ಟ್ ಕ್ರಿಕೆಟ್ ತಂಡದಲ್ಲಿ ಸ್ಥಾನ ಲಭಿಸಿದೆ. ಪರಿಣತ ಬ್ಯಾಟರ್ ಚೇತೇಶ್ವರ್ ಪೂಜಾರ ಹಾಗೂ ವೇಗದ ಬೌಲರ್ ಉಮೇಶ್ ಯಾದವ್ ಅವರನ್ನು ಕೈಬಿಡಲಾಗಿದೆ.

ಜುಲೈ 12ರಿಂದ ಭಾರತ ತಂಡವು ವೆಸ್ಟ್ ಇಂಡೀಸ್ ಪ್ರವಾಸ ಮಾಡಲಿದೆ. ಅದರಲ್ಲಿ ನಡೆಯುವ ಟೆಸ್ಟ್ ಮತ್ತು ಏಕದಿನ ಸರಣಿಗಳಲ್ಲಿ ಆಡುವ ತಂಡಗಳನ್ನು ಶುಕ್ರವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಪ್ರಕಟಿಸಿದೆ.

ಉಭಯ ಸರಣಿಗಳಲ್ಲಿಯೂ ತಂಡವನ್ನು ರೋಹಿತ್ ಶರ್ಮಾ ಮುನ್ನಡೆಸುವರು. ಅಜಿಂಕ್ಯ ರಹಾನೆ ಉಪನಾಯಕರಾಗಿದ್ದಾರೆ.

ಯುವ ಬೌಲರ್ ಮುಕೇಶ್ ಕುಮಾರ್ ಅವರಿಗೂ ತಂಡದಲ್ಲಿ ಸ್ಥಾನ ಲಭಿಸಿದೆ. ಮೊಹಮ್ಮದ್ ಶಮಿ ಅವರಿಗೆ ವಿಶ್ರಾಂತಿ ನೀಡಲಾಗಿದೆ. ನವದೀಪ್ ಸೈನಿ ತಂಡಕ್ಕೆ ಮರಳಿದ್ದಾರೆ. ಕೇರಳದ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರನ್ನು ಏಕದಿನ ತಂಡಕ್ಕೆ ಆಯ್ಕೆ ಮಾಡಲಿದೆ. ಇಶಾನ್ ಕಿಶನ್ ಎರಡೂ ಮಾದರಿಗಳ ತಂಡಗಳಲ್ಲಿದ್ದಾರೆ. ಟೆಸ್ಟ್‌ಗೆ ಕೆ.ಎಸ್. ಭರತ್ ಅವರಿಗೆ ಸ್ಥಾನ ನೀಡಲಾಗಿದೆ.

ಟೆಸ್ಟ್ ಸರಣಿಯಲ್ಲಿ ಎರಡು ಮತ್ತು ಏಕದಿನ ಸರಣಿಯಲ್ಲಿ ಮೂರು ಪಂದ್ಯಗಳು ನಡೆಯಲಿವೆ. ಈಚೆಗೆ ಲಂಡನ್‌ನ ದ ಓವಲ್ ಕ್ರೀಡಾಂಗಣದಲ್ಲಿ ನಡೆದಿದ್ದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಎದುರು ಸೋತಿತ್ತು.

ತಂಡಗಳು; ಟೆಸ್ಟ್: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಋತುರಾಜ್ ಗಾಯಕವಾಡ್, ವಿರಾಟ್ ಕೊಹ್ಲಿ, ಯಶಸ್ವಿ ಜೈಸ್ವಾಲ್, ಅಜಿಂಕ್ಯ ರಹಾನೆ (ಉಪ ನಾಯಕ), ಕೆ.ಎಸ್. ಭರತ್, ಇಶಾನ್ ಕಿಶನ್ (ಇಬ್ಬರೂ ವಿಕೆಟ್ ಕೀಪರ್), ಆರ್. ಅಶ್ವಿನ್, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಅಕ್ಷರ್ ಪಟೇಲ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಜಯದೇವ್ ಉನದ್ಕತ್, ನವದೀಪ್ ಸೈನಿ.

ಏಕದಿನ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಋತುರಾಜ್ ಗಾಯಕವಾಡ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಸಂಜು ಸ್ಯಾಮ್ಸನ್, ಇಶಾನ್ ಕಿಶನ್ (ಇಬ್ಬರೂ ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ (ಉಪನಾಯಕ), ಶಾರ್ದೂಲ್ ಠಾಕೂರ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಜಯದೇವ್ ಉನದ್ಕತ್, ಮೊಹಮ್ಮದ್ ಸಿರಾಜ್, ಉಮ್ರಾನ್ ಮಲಿಕ್, ಮುಕೇಶ್ ಕುಮಾರ್.


ಋತುರಾಜ್ ಗಾಯಕವಾಡ್


ಯಶಸ್ವಿ ಜೈಸ್ವಾಲ್

ಮುಕೇಶ್ ಟೆಸ್ಟ್ ಕನಸು ಕೈಗೂಡುವ ಹೊತ್ತು


ಮುಕೇಶ್ ಕುಮಾರ್

ಕೋಲ್ಕತ್ತ (ಪಿಟಿಐ): ಬಂಗಾಳ ತಂಡದ ಮಧ್ಯಮವೇಗಿ ಮುಕೇಶ್ ಕುಮಾರ್ ಹಲವು ವರ್ಷಗಳಿಂದ ಕಂಡಿದ್ದು ಕನಸು ಈಗ ಕೈಗೂಡುವ ಕಾಲ ಬಂದಿದೆ.

ವೆಸ್ಟ್ ಇಂಡೀಸ್‌ನಲ್ಲಿ ಮುಂದಿನ ತಿಂಗಳು ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿ 29 ವರ್ಷದ ಮುಕೇಶ್ ಸ್ಥಾನ ಪಡೆದಿದ್ದಾರೆ. ತಮ್ಮ ಜೀವನದುದ್ದಕ್ಕೂ ಕಠಿಣ ಸವಾಲುಗಳನ್ನು ಎದುರಿಸಿ ಈ ಹಂತಕ್ಕೆ ಬಂದಿರುವ ಅಟಗಾರ. ಜೂನಿಯರ್ ಹಂತದ ಕ್ರಿಕೆಟ್ ಆಡುವಾಗಲೇ ತಂದೆಯ ನಿಧನದ ನೋವು ನುಂಗಿಕೊಂಡೇ ಮುಕೇಶ್ ಬೆಳೆದರು.

'ಟೆಸ್ಟ್ ಆಡದಿದ್ದರೆ ಏನು ಸಾಧನೆ ಮಾಡಿದರೂ ಕಮ್ಮಿಯೇ ಎನ್ನಲಾಗುತ್ತದೆ. ಇದೀಗ ನನ್ನ ವೃತ್ತಿಜೀವನ ಅರ್ಥಪೂರ್ಣವಾಗುವ ಸಮಯವಿದು. ನಾನು ಸದಾ ಕಂಡ ಕನಸು ಈಗ ನನ್ನ ಮುಂದಿದೆ. ಭಾರತ ಟೆಸ್ಟ್ ತಂಡಕ್ಕೆ ಆಯ್ಕೆಯಾಗಿರುವುದು ಸಂತಸವಾಗಿದೆ' ಎಂದರು.

ಡೈವಿಂಗ್: ಚಿನ್ನ ಗೆದ್ದ ಲಂಡನ್ ಸಿಂಗ್

ರಾಷ್ಟ್ರೀಯ ವಾಟರ್ ಪೋಲೊ ಚಾಂಪಿಯನ್‌ಷಿಪ್: ಕರ್ನಾಟಕಕ್ಕೆ ನಿರಾಶೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಿಸಸ್ ತಂಡದ ಸಾಹಸಿಗಳು ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ನಡೆಯುತ್ತಿರುವ 76ನೇ ರಾಷ್ಟ್ರೀಯ ಡೈವಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪಾರಮ್ಯ ಮೆರೆದರು.

ಪುರುಷರ ವಿಭಾಗದ ಒಂದು ಮೀಟರ್ ಸ್ಪ್ರಿಂಗ್ ಬೋರ್ಡ್ ಡೈವಿಂಗ್‌ನಲ್ಲಿ ಸರ್ವಿಸಸ್‌ನ ಎಚ್. ಲಂಡನ್ ಸಿಂಗ್ ಮೊದಲ ಸ್ಥಾನ ಗಳಿಸಿದರು. 348.40 ಅಂಕಗಳೊಂದಿಗೆ ಚಿನ್ನ ಗೆದ್ದರು.

ಅದೇ ತಂಡದ ಸುರಜೀತ್ ರಾಜಬನ್ಷಿ (309.95) ಮತ್ತು ಉತ್ತರಪ್ರದೇಶದ ಸತೀಶಕುಮಾರ್ ಪ್ರಜಾಪತಿ (303.95) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. ಇದೇ ಸ್ಪರ್ಧೆಯಲ್ಲಿ ಕರ್ನಾಟಕದ ವರುಣ್ ಸತೀಶ್ ಪೈ (193.95) ಹಾಗೂ ಆಶಿತೋಷ್ ಬಿಲ್‌ಗೋಜಿ (97.40) ಕ್ರಮವಾಗಿ 11 ಮತ್ತು 19ನೇ ಸ್ಥಾನ ಪಡೆದರು.

ಮಹಿಳೆಯರ ವಿಭಾಗದ ಒಂದು ಮೀಟರ್ ಸ್ಪ್ರಿಂಗ್ ಬೋರ್ಡ್ ಸ್ಪರ್ಧೆಯಲ್ಲಿ ಮಧ್ಯಪ್ರದೇಶದ ಪಲಕ್ ಶರ್ಮಾ ಚಿನ್ನ ಗೆದ್ದರು. 171.30 ಅಂಕಗಳಿಸಿ ಪ್ರಥಮ ಸ್ಥಾನ ಪಡೆದರು. ಈ ಚಾಂಪಿಯನ್‌ಷಿಪ್‌ನಲ್ಲಿ ಅವರು ಗಳಿಸಿದ ಎರಡನೇ ಪದಕ ಇದಾಗಿದೆ.


ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ಈಜುಕೊಳದಲ್ಲಿ ಶುಕ್ರವಾರ ಎಸ್‌ಎಸ್‌ಪಿಬಿಯ ಎಚ್. ಲಂಡನ್ ಸಿಂಗ್ ಅವರು 76ನೇ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಷಿಪ್‌ನಲ್ಲಿ 1 ಮೀಟರ್ ಸ್ಪ್ರಿಂಗ್ ಬೋರ್ಡ್ ಡೈವಿಂಗ್ ನಲ್ಲಿ ಚಿನ್ನದ ಪದಕ ಗಳಿಸಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ರೈಲ್ವೆಯ ಹೃತಿಕಾ ಶ್ರೀರಾಮ್ (164.35) ಮತ್ತು ಮಹಾರಾಷ್ಟ್ರದ ಮಧಾಲಿ ರೇಡ್ಕರ್ (161.55) ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಪ್ರಶಸ್ತಿ ಗಳಿಸಿದರು.

ಕರ್ನಾಟಕದ ಚೈತ್ರಾ ಎಸ್ ಪ್ರಸಾದ್ (99.90) ಹಾಗೂ ಶಖೈನಾ ಜೆ ರಾವ್ (91.05) 10 ಮತ್ತು 11ನೇ ಸ್ಥಾನಗಳನ್ನು ಪಡೆದರು.

ವಾಟರ್ ಪೋಲೊನಲ್ಲಿ ನಿರಾಶೆ: ಆತಿಥೇಯ ಕರ್ನಾಟಕದ ಪುರುಷ ಹಾಗೂ ಮಹಿಳಾ ತಂಡಗಳು ಬಸವನ ಗುಡಿ ಈಜುಕೇಂದ್ರದಲ್ಲಿ ನಡೆಯುತ್ತಿರುವ ವಾಟರ್ ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ನಿರಾಶೆ ಅನುಭವಿಸಿದವು.

ಶುಕ್ರವಾರ ಮಹಿಳೆಯರ ವಿಭಾಗದಲ್ಲಿ ನಡೆದ ಪಂದ್ಯದಲ್ಲಿ ಬಂಗಾಳ ತಂಡವು 7–3ರಿಂದ ಕರ್ನಾಟಕವನ್ನು ಸೋಲಿಸಿತು. ಇನ್ನುಳಿದ ಪಂದ್ಯಗಳಲ್ಲಿ ಕೇರಳ ತಂಡವು 15–0ಯಿಂದ ಅಸ್ಸಾಂ ಎದುರು, ಪೊಲೀಸ್ ತಂಡವು 16–0ಯಿಂದ ತೆಲಂಗಾಣ ವಿರುದ್ಧ; ದೆಹಲಿ ತಂಡವು 6–1ರಿಂದ ತಮಿಳುನಾಡು ಎದುರು ಜಯಿಸಿದವು.

ಪುರುಷರ ವಿಭಾಗದಲ್ಲಿ ಮಹಾರಾಷ್ಟ್ರ ತಂಡವು 9–4ರಿಂದ ಕರ್ನಾಟಕವನ್ನು ಸೋಲಿಸಿತು. ಇನ್ನುಳಿದ ಪಂದ್ಯಗಳಲ್ಲಿ ರೈಲ್ವೆ ತಂಡವು 6–4ರಿಂದ ಕೇರಳ ಎದುರು; ಸರ್ವಿಸಸ್ 5–3ರಿಂದ ಬಂಗಾಲ ಎದುರು; ಪೊಲೀಸ್ ತಂಡವು 6–0ಯಿಂದ ತೆಲಂಗಾಣ ವಿರುದ್ಧ; ಪಂಜಾಬ್ 10–0ಯಿಂದ ಅಸ್ಸಾಂ ಎದುರು ಜಯಿಸಿದವು.


ಸುರೇಶ್ ರೈನಾ –ಟ್ವಿಟರ್ ಚಿತ್ರ

ಆ್ಯಮ್‌ಸ್ಟರ್‌ಡ್ಯಾಂನಲ್ಲಿ ರೈನಾ ರೆಸ್ಟೋರೆಂಟ್

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಎಡಗೈ ಬ್ಯಾಟರ್ ಆಗಿದ್ದ ಸುರೇಶ್ ರೈನಾ ಅವರು ನೆದರ್ಲೆಂಡ್ಸ್‌ನ ರಾಜಧಾನಿ ಆ್ಯಮ್‌ಸ್ಟರ್‌ಡ್ಯಾಂನಲ್ಲಿ ರೆಸ್ಟೋರೆಂಟ್ ಆರಂಭಿಸಿದ್ದಾರೆ.

'ರೈನಾ ಇಂಡಿಯನ್ ರೆಸ್ಟೋರೆಂಟ್' ಹೆಸರಿನ ರೆಸ್ಟೋರೆಂಟ್ ಆರಂಭಿಸಿರುವ ವಿಚಾರವನ್ನು ಅವರು ಟ್ವಿಟರ್‌ನಲ್ಲಿ ತಿಳಿಸಿದ್ದಾರೆ. ಸಿಬ್ಬಂದಿ ಜತೆಗಿರುವ ಮತ್ತು ತಾವು ಖಾದ್ಯ ಸಿದ್ಧಪಡಿಸುತ್ತಿರುವ ಫೋಟೊಗಳನ್ನು ಪ್ರಕಟಿಸಿದ್ದಾರೆ.

'ಆ್ಯಮ್‌ಸ್ಟರ್‌ಡ್ಯಾಂನಲ್ಲಿ ಇಂಡಿಯನ್ ರೆಸ್ಟೋರೆಂಟ್ ಆರಂಭಿಸಲು ಸಂತಸವಾಗುತ್ತಿದೆ. ಭಾರತದ ವಿವಿಧ ಭಾಗಗಳ ರುಚಿಯಾದ ಭಕ್ಷ್ಯಗಳನ್ನು ಯೂರೋಪ್‌ನ ಹೃದಯಭಾಗಕ್ಕೆ ತಲುಪಿಸುವ ಸಾಹಸಕ್ಕೆ ಮುಂದಾಗಿದ್ದೇನೆ' ಎಂದು ಅವರು ಹೇಳಿದ್ದಾರೆ.

ಹಾಕಿ: ಭಾರತದ ಮೊದಲ ಎದುರಾಳಿ ಕೆನಡಾ

ನವದೆಹಲಿ (ಪಿಟಿಐ): ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತ ತಂಡದವರು ಕೆನಡಾದ ಸವಾಲು ಎದುರಿಸಲಿದ್ದಾರೆ.

ವಿಶ್ವಕಪ್ ಟೂರ್ನಿ ಚಿಲಿಯ ಸ್ಯಾಂಟಿಯಾಗೊದಲ್ಲಿ ನ.29 ರಿಂದ ಡಿ.10ರ ವರೆಗೆ ಆಯೋಜನೆಗೊಂಡಿದೆ. ಭಾರತ ತಂಡವು 'ಸಿ' ಗುಂಪಿನಲ್ಲಿ ಕೆನಡಾ, ಬೆಲ್ಜಿಯಂ ಮತ್ತು ಜರ್ಮನಿ ತಂಡಗಳ ಜತೆ ಸ್ಥಾನ ಪಡೆದುಕೊಂಡಿದೆ.

ಭಾರತ ತಂಡ ಲೀಗ್ ಹಂತದಲ್ಲಿ ನ.29 ರಂದು ಕೆನಡಾ, ಡಿ.1 ರಂದು ಜರ್ಮನಿ ಹಾಗೂ ಡಿ. 2 ರಂದು ಬೆಲ್ಜಿಯಂ ತಂಡಗಳನ್ನು ಎದುರಿಸಲಿದೆ.

ಭಾರತಕ್ಕೆ ಆರನೇ ರ‍್ಯಾಂಕ್: ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್), ವಿಶ್ವಕಪ್ ಟೂರ್ನಿಯ ವೇಳಾಪಟ್ಟಿಯ ಜತೆಯಲ್ಲೇ ಜೂನಿಯರ್ ತಂಡಗಳ ರ‍್ಯಾಂಕಿಂಗ್ ಪಟ್ಟಿಯನ್ನೂ ಬಿಡುಗಡೆಗೊಳಿಸಿತು. ಭಾರತವು ಆರನೇ ರ‍್ಯಾಂಕ್ ಹೊಂದಿದೆ. ನೆದರ್ಲೆಂಡ್ಸ್ ಅಗ್ರಸ್ಥಾನ ಹೊಂದಿದ್ದು ಅರ್ಜೆಂಟೀನಾ, ಜರ್ಮನಿ, ಇಂಗ್ಲೆಂಡ್ ಮತ್ತು ಅಮೆರಿಕ ತಂಡಗಳು ಕ್ರಮವಾಗಿ 2ರಿಂದ 5ರವರೆಗಿನ ಸ್ಥಾನ ಪಡೆದುಕೊಂಡಿವೆ.

ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲಿರುವ 16 ತಂಡಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

ಗಾಲ್ಫ್: ವಿಧಾತ್ರಿ ಅರಸ್‌ಗೆ ಪ್ರಶಸ್ತಿ

ಬೆಂಗಳೂರು: ಅಮೆಚೂರ್ ಆಟಗಾರ್ತಿ ಮೈಸೂರಿನ ವಿಧಾತ್ರಿ ಅರಸ್ ಅವರು ಶುಕ್ರವಾರ ಇಲ್ಲಿ ಕೊನೆಗೊಂಡ ಹೀರೊ ಮಹಿಳೆಯರ ಪ್ರೊ ಗಾಲ್ಫ್ ಟೂರ್‌ನ 9ನೇ ಲೆಗ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಪ್ರೆಸ್ಟಿಜ್ ಗಾಲ್ಫ್‌ಶೈರ್‌ನಲ್ಲಿ ನಡೆದ ಟೂರ್ನಿಯಲ್ಲಿ ವಿಧಾತ್ರಿ ಒಟ್ಟು 200 ಸ್ಕೋರ್‌ಗಳೊಂದಿಗೆ (16 ಅಂಡರ್) ಅಗ್ರಸ್ಥಾನ ಪಡೆದರು. ಅಂತಿಮ ಸುತ್ತನ್ನು ಅವರು 68 ಸ್ಟ್ರೋಕ್‌ಗಳಲ್ಲಿ (ಫೋರ್ ಅಂಡರ್) ಕೊನೆಗೊಳಿಸಿದರು.

ಎರಡನೇ ಸುತ್ತಿನ ಕೊನೆಯಲ್ಲಿ ಇತರ ಸ್ಪರ್ಧಿಗಳಿಗಿಂತ 9 ಶಾಟ್‌ಗಳ ಮುನ್ನಡೆಯಲ್ಲಿದ್ದ ವಿಧಾತ್ರಿ, ಒಟ್ಟಾರೆ 13 ಶಾಟ್‌ಗಳ ಅಂತರದಿಂದ ಗೆದ್ದರು.

ಬೆಂಗಳೂರಿನ ಅಮೆಚೂರ್ ಸ್ಪರ್ಧಿ ಸಾನ್ವಿ ಸೋಮು ಮತ್ತು ಎಲೀಟ್ ಆಟಗಾರ್ತಿ ಜಾಸ್ಮಿನ್ ಶೇಖರ್ ಅವರು ಜಂಟಿ 2ನೇ ಸ್ಥಾನ ತಮ್ಮದಾಗಿಸಿಕೊಂಡರು.

ಆಡ್‌ಹಾಕ್ ಸಮಿತಿ ನಿಲುವನ್ನು ಟೀಕಿಸಿದ ಯೋಗೇಶ್ವರ್

ರಿಯಾಯಿತಿ ನೀಡಿದ್ದು ಅನ್ಯಾಯದ ಕ್ರಮ

ನವದೆಹಲಿ (ಪಿಟಿಐ): ಏಷ್ಯನ್ ಮತ್ತು ವಿಶ್ವಚಾಂಪಿಯನ್‌ಷಿಪ್ ಆಯ್ಕೆ ಟ್ರಯಲ್ಸ್ ಪ್ರಕ್ರಿಯೆಯಿಂದ ಆರು ಮಂದಿ ಕುಸ್ತಿಪಟುಗಳಿಗೆ ರಿಯಾಯಿತಿ ನೀಡಿದ ಭಾರತ ಒಲಿಂಪಿಕ್ ಸಂಸ್ಥೆಯ ಅಡ್‌ಹಾಕ್ ಸಮಿತಿ ಕ್ರಮವನ್ನು ಹಿರಿಯ ಕುಸ್ತಿಪಟು ಯೋಗೇಶ್ವರ್ ದತ್ ಟೀಕಿಸಿದ್ದಾರೆ. 'ಪೈಲ್ವಾನರು ಹೋರಾಟ ನಡೆಸಿದ್ದು ಇಂಥ ಲಾಭ ಪಡೆಯಲಿಕ್ಕೆಯೇ' ಎಂದು ಪ್ರಶ್ನಿಸಿದ್ದಾರೆ.

ವಿನೇಶಾ ಫೋಗಟ್, ಬಜರಂಗ್ ಪೂನಿಯಾ, ಅವರ ಪತ್ನಿ ಸಂಗೀತಾ ಫೋಗಟ್, ಸಾಕ್ಷಿ ಮಲಿಕ್ ಮತ್ತು ಅವರ ಪತಿ ಸತ್ಯವ್ರತ ಕಾದಿಯಾನ್, ಜಿತೇಂದರ್ ಕಿನ್ಹಾ ಅವರಿಗೆ ಅಡ್‌ಹಾಕ್ ಸಮಿತಿ ರಿಯಾಯಿತಿ ನೀಡಿತ್ತು. ಅವರು ಪೂರ್ಣ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಿಲ್ಲ. ಆಯ್ಕೆ ಟ್ರಯಲ್ಸ್‌ನ ವಿಜೇತರ ವಿರುದ್ಧ ಅವರು (ತಮ್ಮ ತಮ್ಮ ತೂಕ ವಿಭಾಗದಲ್ಲಿ) ಗೆದ್ದರೆ ಈ ಎರಡು ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ತಂಡಕ್ಕೆ ಆಯ್ಕೆ ಮಾಡಲಾಗುವುದು ಎಂದು ಅಡ್‌ಹಾಕ್ ಸಮಿತಿ ಈ ಆರು ಮಂದಿಗೆ ತಿಳಿಸಿತ್ತು.


ಯೋಗೇಶ್ವರ್ ದತ್

ವಿನಂತಿಯಂತೆ ಆಗಸ್ಟ್‌ನಲ್ಲಿ ಈ ಸೆಣಸಾಟಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದೂ ಭರವಸೆ ನೀಡಿತ್ತು. ಇಂಥ ನಿಲುವು ತಾಳುವ ಮೂಲಕ ಭೂಪೇಂದರ್ ಸಿಂಗ್ ಬಾಜ್ವಾ ನೇತೃತ್ವದ ಸಮಿತಿ ದೇಶದ ಕಿರಿಯ ಕುಸ್ತಿಪಟುಗಳಿಗೆ ಅನ್ಯಾಯ ಮಾಡಿದೆ ಎಂದು ಬಿಜೆಪಿ ನಾಯಕರೂ ಆಗಿರುವ ದತ್ ಹೇಳಿದ್ದಾರೆ.

'ಈ ರೀತಿಯ ಟ್ರಯಲ್ಸ್ ನಡೆಸುವ ನಿರ್ಧಾರಕ್ಕೆ ಅಡ್‌ಹಾಕ್ ಸಮಿತಿ ಅನುಸರಿಸಿರುವ ಮಾನದಂಡವಾದರೂ ಏನು?' ಎಂದು ದತ್ ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ಹೇಳಿದ್ದಾರೆ.

ರವಿ ದಹಿಯಾ ಒಲಿಂಪಿಕ್ ಬೆಳ್ಳಿ ವಿಜೇತ. ದೀಪಕ್ ಪೂನಿಯಾ ಕಾಮನ್ವೆಲ್ತ್ ಚಿನ್ನದ ಪದಕ ಗೆದ್ದವರು. ಅನ್ಶು ಮಲಿಕ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ವಿಜೇತೆ. ಸೋನಮ್ ಮಲಿಕ್ ಕೂಡ ಇದ್ದಾರೆ. ಇನ್ನೂ ಹಲವು ಸಾಧಕರಿದ್ದಾರೆ. ಈ ಪಕ್ಷಪಾತ, ಅನ್ಯಾಯದ ವಿರುದ್ಧ ಜೂನಿಯರ್ ಕುಸ್ತಿಪಟುಗಳು, ಅವರ ತರಬೇತುದಾರರು, ಪೋಷಕರು ಧ್ವನಿ ಎತ್ತಬೇಕು ಎಂದೂ ದತ್ ಹೇಳಿದ್ದಾರೆ.

'ಇದರ (ಪಕ್ಷಪಾತದ ವಿರುದ್ಧ) ಗ್ರೀಕೊ ರೋಮನ್, ಪುರುಷರ ಮತ್ತು ಮಹಿಳಾ ಫ್ರೀಸ್ಟೈಲ್ ಕುಸ್ತಿಪಟುಗಳು ಧ್ವನಿ ಎತ್ತಬೇಕು. ಇದರ ವಿರುದ್ಧ ಪ್ರತಿಭಟನೆಗೆ ಕುಳಿತುಕೊಳ್ಳಿ. ಪ್ರಧಾನಿ, ಗೃಹ ಸಚಿವ, ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಐಒಎಗೆ ಪತ್ರ ಬರೆಯಿರಿ' ಎಂದಿದ್ದಾರೆ.

ಬ್ರಿಜ್‌ಭೂಷಣ್ ಗುಲಾಮನ ರೀತಿ ದತ್: ವಿನೇಶಾ

ನವದೆಹಲಿ (ಪಿಟಿಐ): 'ಯೋಗೇಶ್ವರ ದತ್ ಅವರನ್ನು ಕುಸ್ತಿ ಲೋಕವು ಡಬ್ಲ್ಯುಎಫ್‌ಐ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಗುಲಾಮನ ರೀತಿಯಲ್ಲಿ ನೆನಪಿಡುತ್ತದೆ' ಎಂದು ಕುಸ್ತಿಪಟು ವಿನೇಶಾ ಫೋಗಟ್ ಶುಕ್ರವಾರ ಟೀಕಿಸಿದ್ದಾರೆ.

ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ಆಯ್ಕೆ ಟ್ರಯಲ್ಸ್ ಪ್ರಕ್ರಿಯೆಯಿಂದ ವಿನೇಶಾ ಮತ್ತು ಇತರ ಐವರು ಪೈಲ್ವಾನರಿಗೆ ನೀಡಿರುವ ರಿಯಾಯಿತಿಯನ್ನು ಲಂಡನ್ ಒಲಿಂಪಿಕ್ಸ್ ಪದಕ ವಿಜೇತ ದತ್ ಪ್ರಶ್ನಿಸಿದ ಕೆಲವೇ ಗಂಟೆಗಳ ನಂತರ ವಿನೇಶಾ ಈ ಪ್ರತಿಕ್ರಿಯೆ ನೀಡಿದ್ದಾರೆ.

'ಕುಸ್ತಿ ಫೆಡರೇಷನ್ ಅಧ್ಯಕ್ಷರ ವಿರುದ್ಧ ಮಹಿಳಾ ಕುಸ್ತಿಪಟುಗಳ ದೂರುಗಳ ಬಗ್ಗೆ ವಿಚಾರಣೆ ನಡೆಸಲು ನೇಮಿಸಿದ್ದ ಸಮಿತಿಯಲ್ಲಿದ್ದ ದತ್ ಅವರು ಆರೋಪಗಳ ಬಗ್ಗೆ ವಿಕಟ ನಗೆ ಬೀರಿದ್ದರು. ವಿಚಾರಣೆ ಸಂದರ್ಭದಲ್ಲಿ ಮಹಿಳಾ ಕುಸ್ತಿಪಟುವಿನ ಮುಂದೆ 'ಇಂಥದ್ದು ನಡೆಯುತ್ತಿರುತ್ತದೆ' ಎಂದಿದ್ದರು' ಎಂದೂ ವಿನೇಶಾ ಆರೋಪ ಮಾಡಿದ್ದಾರೆ.

ಸಮಿತಿಯಲ್ಲಿ ಆರು ಸದಸ್ಯರಿದ್ದು ಅವರಲ್ಲಿ ದತ್ ಒಬ್ಬರಾಗಿದ್ದರು. ಸರ್ಕಾರ ವು ಸಮಿತಿಯ ವರದಿಯನ್ನು ಇನ್ನೂ ಬಹಿರಂಗಪಡಿಸಿಲ್ಲ.

ದತ್ ಅವರನ್ನು ಬ್ರಿಜ್‌ಭೂಷಣ್ ಅವರ ಬೆನ್ನೆಲುಬಿಲ್ಲದ ಹಿಂಬಾಲಕ ಎಂದು ಟ್ವಿಟರ್ ಪೋಸ್ಟ್‌ನಲ್ಲಿ ಜರೆದಿರುವ ವಿನೇಶಾ, ತಮ್ಮ ಕ್ಷೇತ್ರದವರಿಗೇ ದ್ರೋಹ ಬಗೆದ ವ್ಯಕ್ತಿ ಈತ ಎಂದೂ ಟೀಕಿಸಿದ್ದಾರೆ.


ವಿನೇಶಾ

'ಯೋಗೇಶ್ವರ್ ಅವರಂಥ ಜಯಚಂದ್ರನ ರೀತಿಯ ವ್ಯಕ್ತಿಯಿರುವವರೆಗೆ ದಮನಿತರ ಸ್ಫೂರ್ತಿ ಎತ್ತರದಲ್ಲೇ ಇರುತ್ತದೆ' ಎಂದೂ ಬರೆದಿದ್ದಾರೆ. (ಕನೌಜ್‌ನ ಅರಸ ಪೃಥ್ವಿರಾಜ್ ಅವರನ್ನು ಸೋಲಿಸಲು ಮೊಹಮ್ಮದ್ ಘೋರಿ ಅವರೊಂದಿಗೆ ಜಯಚಂದ್ರ ಸಂಚು ನಡೆಸಿದ್ದರು ಎಂದು ಇತಿಹಾಸದಲ್ಲಿ ಉಲ್ಲೇಖವಾಗಿದೆ).

ಆರೋಪ: ಸಮಿತಿಯ ವಿಚಾರಣೆಯ ವೇಳೆ ಯೋಗೇಶ್ವರ ಅವರು ಬ್ರಿಜ್ ಭೂಷಣ್ ವಿರುದ್ಧದ ದೂರುಗಳನ್ನು ದುರ್ಬಲಗೊಳಿಸಲು ಪ್ರಯತ್ನಿಸಿದ್ದರು ಎಂದು ವಿನೇಶಾ ಆರೋಪಿಸಿದ್ದಾರೆ.

'ಇಬ್ಬರು ಮಹಿಳಾ ಪೈಲ್ವಾನರು ನೀರು ಕುಡಿಯಲು ಹೊರಗೆ ಬಂದಾಗ ಅವರನ್ನು ಹಿಂಬಾಲಿಸಿದ ದತ್, 'ಬ್ರಿಜ್‌ಭೂಷಣ್‌ಗೆ ಏನೂ ಆಗುವುದಿಲ್ಲ. ಹೋಗಿ ನಿಮ್ಮ ಪ್ರಾಕ್ಟೀಸ್ ಶುರುಮಾಡಿಕೊಳ್ಳಿ' ಎಂದಿದ್ದರು' ಎಂದು ವಿನೇಶಾ ಹೇಳಿದ್ದಾರೆ.

ಯೋಗೇಶ್ವರ್ ತಿರುಗೇಟು: ವಿನೇಶಾ ಫೋಗಟ್ ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಯೋಗೇಶ್ವರ್ ದತ್, 'ನನಗೆ ನಿಮ್ಮ ಪ್ರಮಾಣಪತ್ರದ ಅಗತ್ಯ ಇಲ್ಲ' ಎಂದು ತಿರುಗೇಟು ನೀಡಿದ್ದಾರೆ.

ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಲೀಗ್ ಇಂದಿನಿಂದ

ಬೆಂಗಳೂರು: ಎಂ.ಸಿ. ಶ್ರೀನಿವಾಸ ಸ್ಮಾರಕ ಟ್ರೋಫಿಗಾಗಿ ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ರಾಜ್ಯ 'ಬಿ' ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಶನಿವಾರದಿಂದ 30ರವರೆಗೆ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ.

ಲೀಗ್‌ನಲ್ಲಿ 10 ತಂಡಗಳು ಭಾಗವಹಿಸಲಿವೆ.

ಜೂನಿಯರ್ ಹಾಕಿ ಆಟಗಾರ ರಾಜೀವ್ ಮಿಶ್ರಾ ಸಾವು

ನವದೆಹಲಿ (ಪಿಟಿಐ): ಭಾರತ ಜೂನಿಯರ್ ಹಾಕಿ ತಂಡದ ಮಾಜಿ ಆಟಗಾರ ರಾಜೀವ್ ಮಿಶ್ರಾ (46) ಅನುಮಾನಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ್ದಾರೆ.

ವಾರಾಣಸಿಯ ಸರ್‌ಸೌಲಿ ಪ್ರದೇಶದಲ್ಲಿರುವ ಮನೆಯಲ್ಲಿ ಬುಧವಾರ ಮೃತದೇಹ ಪತ್ತೆಯಾಗಿದೆ. ಅವರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ.

ರಾಜೀವ್, 1997ರಲ್ಲಿ ಲಂಡನ್‌ನಲ್ಲಿ ನಡೆದಿದ್ದ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿ, ಪ್ರಸಿದ್ಧಿಗೆ ಬಂದಿದ್ದರು. ಆ ಬಳಿಕ ಗಾಯದ ಸಮಸ್ಯೆಯಿಂದ ಸೀನಿಯರ್ ತಂಡದಲ್ಲಿ ಅವಕಾಶ ದೊರೆತಿರಲಿಲ್ಲ.

'ರಾಜೀವ್ ಮನೆಯಲ್ಲಿ ಒಬ್ಬರೇ ವಾಸಿಸುತ್ತಿದ್ದರು. ಅವರು ಕೆಲ ದಿನಗಳ ಹಿಂದೆಯೇ ಮೃತಪಟ್ಟಿರುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಶನಿವಾರ • ಜೂನ್ 24, 2023

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

"CAMPERVAN REGISTERED IN KARNATAKA FOR SALE"

ideal for camping anywhere



For more details call :
96060 85341
88673 54347

CAMPERVANS Built on Isuzu DMax & Mahindra Imperio are on SALE. The demountable Camping POD contains a Small Shower, Geyser, Imported Cassette Toilet, Mini Fridge, Draw Out Kitchen Table, 1 KVA Generator, Inverter, Batteries, Manual Awning, 2 Queen Size Beds Including a Motorised Roof Top Tent and Provision to Connect External Power.

This is a Light Motor Vehicle LMV and can be driven using a Car Driving License. Vehicles registered in Karnataka as Yellow Board and life time tax paid in Karnataka, Vehicles are in good condition.

CARAVAN FOR SALE

KARNATAKA REGISTERED CARAVANS FOR SALE

Can accommodate 4 Passengers. Caravan has a Small Shower and Toilet, Kitchenette, Fridge, Microwave A/C, Geyser, Fans and External Power Connection from BESCOM or Generator. Its a Heavy Vehicle and built on Ashok Leyland Chassis by a German Team and 3 years old, In good condition, Sparingly used.

For more details call :
9606085341
8867354347



ಆಷಾಡದ ಪ್ರಯುಕ್ತ, ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ

ಅಭಿವೃದ್ಧಿ

ಸಿಲ್ಕ್ ಇಂಡಿಯ® 2023

ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು

16 ರಿಂದ 25 ಜೂನ್ 2023 ರವರೆಗೆ | ಸಮಯ : ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ

ವೈಟ್ ಪೆಟಲ್ಸ್ (ವಿಜಯನಗರ)

ಬಿಎಂಟಿಸಿ ಬಸ್ ಡಿಪೋ, ರಿಲಯನ್ಸ್ ಮಾರ್ಟ್ ಪಕ್ಕ, ಮಾರುತಿ ಮಂದಿರದ ಹತ್ತಿರ, ವಿಜಯನಗರ, ಬೆಂಗಳೂರು.

ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೂಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು

Last 2 Days



Entry Free | All Credit & Debit Cards Accepted
Contact : +91 86607 14252
(Registered with O/o D C (H) Ministry of Textiles, Govt. of India)

CNR Infocity

READY TO BUILD PLOTS FOR EVERY DREAM HOME

BMRDA APPROVED SITES

AVAILABLE @ **NELAMANGALA**



CONTACT FOR MORE INFORMATION
87222 27780, 87222 27711

REAL ESTATE SELLING

Sites

Banashankari

AVAILABLE BDA Sites,Banshankari6th,Stage, Anjanapura Visweswaraiah LayoutJPNagar8th,9th,Phase 20x30,30x40 40x60, 50x80,Contact Genuine Buyers: 9945778333

BANASHANKARI 6TH Stage, 6th Block 30x40,North And East,3rd Block 30x40 West,4th Block20x30 South, Contact: 9900097239

Hesaraghatta

30X40 SITE Sale (2 side Road) Kirloskar Layout, Hesaraghatta Main Road, Opposite Sapthagiri College. 9620480363

Hanumanthnagar

"KATRIGUPPE A_KATHA 30x43, old_demolition House 2 Crore, 15x45_old_demolition House 1.15 Crore, 9845286505"

J P Nagar

SALE J.P.NAGAR Residential/ Commercial Property 50x80, 40x60, 30x40 Genuine Buyers Call: Raju Richie Rich 9845246545

JPNAGAR 8TH Phase, Royal County BDA Site Sale,30x50, S/F, 9800/- Negotioble : 9538680364,9513004587

J C Road

SALE: PRIME Properties on JC Road. 1) 83' width x 31' depth. North facing. 2) 45' width x 37' depth. Both 'A' Khatas. GN Properties: 9845044179.

Kempegowda Layout

KEMPEGOWDA LAYOUT Commercial Site for Sale 7th Block, J Sector, 50x80 North Facing. Kumar 9945112279

Multiple Locations

FOR SALE Corner Site area 1350 sq.ft., built-up area 6000 sq.ft. at Link Road, Malleswaram/ Seshadripuram. 9845545357.

Mysore Road

SALE 17000 to 87000sft Commercial/ Residential land in Bidadi Highway-Road frontage 525ft. 9620253180/ 9916310226. www. vernadevelopers.com

Nelamangala

NELAMANGALA SITE For sale at E.K. Enclave just opp. to RTO Nelamangala. Contact Raju:- 9448082402.

Yelahanka

30x40 Converted Plot @ 1,60,000/-
133/- per sq.ft, 90 minutes Journey from Yelahanka
Ready for Registration
9343510635, 9010559539

Rajarajeshwari Nagar

R.R.NAGARA BEML Layout 30X40 House Sale 1.60Cr. Javaregowdana Doddi 30x40 Site Sale 66L. 9148914809, 9740075563.

Vishweswariah Layout

SALE BOMMASANDRA near`Electronic City, near upcoming Metro Station, 2 BHK Two flats, one East facing, one West facing each flat 35,00,000/- negotiable including Interiors -8747030003/9886433007

SITE FOR SALE 40X60 #398, 40feet-road_MPM-layout Mallathahalli, near_outer_ring road,Developed area_good-location. Contact: 9844533371/ 9341733480

"40X60 NF Good Residential BDA Site Sale 5th Block Vishveshwaraiah Layout [Genuine_Buers] Contact: 7338328879"

SITE FOR Sale- Sir M.Visveswaraiah Layout, 4th Block, West Facing, 30x40, Rs.7000/-sft. Contact: 9880041562. Brokers Excuse

CORNER SITE available in SMV layout 7th-block (Muddinapalya) and BDA APPROVED site-in Mallathahalli (ITI-layout). 9353199141

Flat

Kanakapura Road

SALE: 2BHK FLAT, Ready Occupation, Near Thalaghattapura Metro Station. Kanakapura Main Road. Contact: 99806-93496/ 99725-28333

Malleshwaram



MALLESWARAM southwest corner 2340 sft property with three floor building for sale. 8 crores. Contact. 6363161053

SALE 3BHK apartment 1755sqft Renaissance Park-3, Malleshwaram West. price1.85 crores negotiable with 2 carparking. Contact: 9342139450

Electronic City

SALE BOMMASANDRA near`Electronic City, near`upcoming Metro-Station, 2_BHK`Two Flats,`one East`facing, one`West facing_each Flat-35,00000/ negotiable including Interiors -8747030003/ 9886433007

Rajarajeshwari Nagar

"FLAT FOR-SALE 2&3 BHK East facing Ready to move, Good location near Gnanakshi School Rajarajeshwari Nagar. 9019533999/ 9900275599"

Sadashiva Nagar

SALE 2 BHK Palace Guttahalli, LPO Sadashivanagar, 1250 sft 1.15 Cr. 12 year old: 7625049680

Uttarahalli

IMAGE GREENS Apartment 1st Floor. 1300 Sqft. 2 BHK SALE. Poornaprajna Layout. 13 Years old. Call:9945724472

Farm House/ Land/ Resorts

Intl Airport Road

10 YEARS Mango Jamum Organic Farm Land Sale Villa, Homestay, before ISHA Foundation- 8310870413

House

Banashankari

ITTAMADU HOUSE SALE. Ground 2 BHK, 1st, 2nd Duplex. Car_Parking, Site-South, Door- East. 9945724472.

Multiple Locations

ANY DIMENSION BDA/BDA Approved Sites/House Jayanagar, J.P.Nagar BTM,_BSK, HSR Around Areas (Owners only) Gupta -9845232711.

Yelahanka

HOUSE FOR SALE Bagalur Cross, Vinayaka Nagar, Yelahanka, Site Size 30x42, West Face B-Katha. 9845270659

Rajajinagar

RAJAJINAGAR 4TH M Block 43x55 BDA NE Corner old`House For-Sale on`Main Road`opposite Sujatha theatre 22k Negotiable Sunil: 9845201710

Sadashiva Nagar

INDEPENDENT HOUSE 40x60 Site with GF 2BHK FF & SF Duplex 5 BHK Sale in LPO SADASHIVANAGAR Elite Neighborhood. 9845190654

Villas/Bunglows

Thanisandra

SOBHA CITY Tanisandra Main Road, 5 BHK Row House villa for sale. Contact; Chandan: 9900665081

Industrial & Factory

Out-Station

BUILD-TO-SUIT OR on sale 3 acre Industrial Converted Land at Magadi Singripalya attached STRR corner @ 495 psqf contact 9845851473.

REAL ESTATE BUYING

Farm House/ Land/ Resorts

Mysore

FOR BUYING & Selling any Mysore Properties Contact: Mysore Estates, Vishwanath Gowda 9590911111. *Refer genuine Buyers & Sellers, get attractive gifts. 0% Brokerage

Sites

Banashankari

WANTED 30X40/ 30x50 Site BHCS Layout Hoskerehalli, BSK 1st, 3rd, 5th, Ashoknagar, NR.Colony, TR.Nagar, Hanumanthnagar Kathriguppe. Owners Contact: 94486-16570

BDA SITES Wanted Anjanapura Arkavathy Banashankari 6th Stage, Vishweshwaraiah Kempegowda Any BDA Layout,Contact: 9845062822, 8660751654

WANTED BDASITES Banashankari 6th Stg, Vishweswaraiah _Layout, AnjanapuraJPNagar 8th_9thPhase,20x30,30x40, 40x60,50x80,Call Genuine Sellers: 9845812635

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout, Any BDA Sites Wanted Contact: SAPTHAGIRI. 9900268073, 9448068073.

Out-Station

OUT STATION Buying/ Selling Sites, Houses @Dakshina Kannada, Udupi and Malnad Contact Raghavendra: 9606866368

Vishweswariah Layout

BDA-SITES WANTED Kempegowda Layout Vishweshwaraiah Layout Other BDA Approved Layouts 30x40, 40x60, 50x80 Immediate Settlement Call:8660220048 7676900174

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

SAI MERIDIAN
Yelahanka Kogilu Main Road Kannur Road

PREMIUM DC CONVERTED
A - KATHA in BBMP LIMITS



BBMP Limits DC Converted A Katha
BANK LOAN APPROVED
Ready for Registration

SITES FOR SALE
LAUNCHING OFFER

AMENITIES



ENTRANCE ARCH



24/7 SECURITY




STREET LIGHTS



COMPOUND WALL



WHITE TOP ROAD



WATER CONNECTION



UNDERGROUND DRAIN

85498 55644
97381 50363

HOSPITAL AVAILABLE FOR RENT

Newly Constructed Hospital building at Prime Location is ready to move in.

at HSR Layout, 27th Main, 1st Sector, Bengaluru- 560102
Contact:
9886084799 / 9606940041

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Water Proofing Materials

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

RENTAL PROPERTIES

Accommodation Available

Commercial

VVPURAM JAIN Temple Road 2BHK GF 1000 Sft Residential/ Office cum Godown. 30,000/- Rent Negotiate Contact: ESHWER ENTERPRISES. 98454-97163

Flats

FOR RENT Koramangla Prestige St.Johns Woods Pent House 3200 Sqft 4BHK with Attach Toilets, Servant Room, 2Car Parks: 9448770410

House

RENT: HANUMANTHNAGAR 2BHK- DH GF, with amenities, Corporation Water. Ready occupation. Contact: Owner: 78925-30410/ 94488-09902

JOB OPPORTUNITIES

General

AMAZING OPPORTUNITY, Retired, VRS, Business/ Professionals, Senior Citizens, Earn Lakhs. International Recognition. SUPERB RETIRED LIFE CAREER. 97400-90431/ 97400-76517

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleswaram: 9886641282/ 8197350600

BUSINESS

Business to Business

Business

BEST INVESTMENT For Petrol Bunk Lease Cum Sale or Partnership Kanakapura Road NH-209 Highway Call:9035963540

Consultants

CONSULTANT
Eco-Flair HVAC&R Consultant Expertise service to reduce power Consumption, Carbon emission, maintain Sustainability in Chiller plant
Mob- 9794810309

Business Offers

Finance

NRI'S INVESTMENT And Finance Now funds are Available on Lowinterest against properties mortgage Land/Building, Land development/ projects Contract-7204995189

EDUCATIONAL

Diploma Courses

DIPLOMA IN Student Counselling, 6-months, ONLINE, Starts:11-July WhatsApp: 9886044221 www.darwinpsychologycentre.com

PERSONAL

Change of Name

I, NAGESH.R, R/at`No.116/11, 2nd Main, 9th`Cross, Vijayanagar Extension, Chamarajapete, Bengaluru-560018 have`changed`my daughter's name`from GULABI to GULABI BHAVANI.N vide affidavit dated:22-6-2023 before`Notary H.C.Thammannagowda, Bangalore.

I, SWARNALATHA Residing at No.A501,Mantri Tranquil, Sy No.7/9/13, Gubbalala, Bengaluru-560061 have changed my name to SWARNALATHA HEBBAR W/o. RAMESH HEBBAR vide affidavit dated 22.06.2023 Sworn before notary Aruna.V., Bangalore

I,PRATHAP HARIDASA RAO, changed-my name-to PRATHAP HARIDASA dated:19.06.2023. Sworn before Notary H.S.Sakalesh Aradhya, Bengaluru.

I PRANAV PADMAPADA S/o Padmapada Sharma K S Resident of No:80/204, Jai Singh Layout, Rajarajeshwarinagar, BEML 5thStage, Bengaluru-560098. Have changed my name to PRANAV PADMAPADA KODIHALLI are the same for all purpose. Vide affidavit dated 20.06.2023 before notary Devaraja, Bangalore.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331







